ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 15 | ಏಪ್ರಿಲ್ 5–11, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಚುನಾವಣಾ ಬಾಂಡ್
ಕೋರ್ಟಿನಿಂದ ಕರ್ತವ್ಯ ಚ್ಯುತಿ

ಆಧುನಿಕ ಕೇರಳಕ್ಕೆ



ಎಲ್‌ಡಿಎಫ್ ಪ್ರಣಾಳಿಕೆ

ಡಿಎಂಕೆ ನೇತೃತ್ವದಲ್ಲಿ



ಪ್ರಗತಿಪರ ಜಾತ್ಯಾತೀತ ರಂಗ



ನಂದಿಗ್ರಾಮ:
ಪಿತೂರಿ ಬಯಲಾಗುತ್ತಿದೆ



ವೆಬ್ ಮಾಧ್ಯಮಗಳ ಸೆನ್ಸಾರಿನತ್ತ ದೊಡ್ಡ ಹೆಜ್ಜೆ

ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರಗಳಲ್ಲಿ ತೀವ್ರ ಕಡಿತ-ಹಿಂಪಡೆತ ಯಾರನ್ನೂ ಮರುಳು ಮಾಡದು

ಕೇಂದ್ರ ಹಣಕಾಸು ಮಂತ್ರಾಲಯ ಮಾರ್ಚ್ 31 ರಂದು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರಗಳನ್ನು ತೀವ್ರವಾಗಿ ಇಳಿಸಿದ ಪ್ರಕಟಣೆಯನ್ನು ಹೊರಡಿಸಿತು. 24 ಗಂಟೆಗಳೊಳಗೆ ಹಣಕಾಸು ಮಂತ್ರಿಗಳು ಈ ಪ್ರಕಟಣೆಯನ್ನು ಹಿಂದಕ್ಕೆ ತಗೊಂಡಿರುವುದಾಗಿ ಪ್ರಕಟಿಸಿದ್ದಾರೆ. ಇದು ಕಣ್ತಪ್ಪಿನಿಂದ ಹೊರಡಿಸಿದ ಆದೇಶ ಎಂದು ಅವರು ಹೇಳಿದ್ದಾರೆ.

ಆದರೆ ಇದು ಯಾರನ್ನೂ ಮರುಳು ಮಾಡಲಾರದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದೆ. **ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿರುವುದರಿಂದ ಈ ನಿರ್ಧಾರವನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ ಎಂಬುದು ಸ್ಪಷ್ಟ. ಇದು ಚುನಾವಣೆಗಳು ಮುಗಿಯುವ ವರೆಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸದಿರುವಂತೆ ತೈಲ ಮಾರಾಟ ಕಂಪನಿಗಳಿಗೆ ಸರಕಾರ ಹೇರಿರುವ ಆದೇಶದಂತಹುದೇ ಅಗಿದೆ** ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಈ ಬಡ್ಡಿದರ ಇಳಿಕೆಯ ಪ್ರಕಟಣೆಯಿಂದ ತಮ್ಮ ಭವಿಷ್ಯದ ಭದ್ರತೆಗೆಂದು ಸಣ್ಣ ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸಿರುವ ಕೋಟ್ಯಂತರ ಜನಗಳು ನಾಶವಾಗುತ್ತಾರೆ. ಜನಗಳ ಭವಿಷ್ಯನಿಧಿಯ ಮೇಲಿನ ಬಡ್ಡಿದರವನ್ನು 6.4ಶೇ.ಕ್ಕೆ ಇಳಿಸಲಾಗಿದೆ. ಇದು ಇದುವರೆಗಿನ ಅತ್ಯಂತ ಕಡಿಮೆ ಬಡ್ಡಿದರ, ಹಣದುಬ್ಬರ ದರವನ್ನು ಕೂಡ ಇದು ಸರಿದೂಗಿಸುವುದಿಲ್ಲ. ಇದು ಕೋಟ್ಯಂತರ ಹಿರಿಯ ನಾಗರಿಕರ ಜೀವನಾಧಾರಗಳನ್ನು ಧ್ವಂಸ ಮಾಡುತ್ತದೆ.

ಈ ಬಿಜೆಪಿ ಸರಕಾರ ಕಾರ್ಪೊರೇಟ್‌ಗಳ, ನಿರ್ದಿಷ್ಟವಾಗಿ ತನ್ನ ಬಂಟರ ಲಾಭಗಳನ್ನು, ಭಾರೀ ಪ್ರಮಾಣದ ತೆರಿಗೆ ಕಡಿತಗಳ ಮೂಲಕ ಹೆಚ್ಚಿಸಲು ತದೇಕಚಿತ್ತದಿಂದ ಗಮನ ಕೇಂದ್ರೀಕರಿಸಿದೆ. ಸಾರ್ವಜನಿಕ ವಲಯದ ಖಾಸಗೀಕರಣದ ಮೂಲಕ ರಾಷ್ಟ್ರೀಯ ಆಸ್ತಿಗಳ ಲೂಟಿ ಮತ್ತು ಭಾರತೀಯ ಕೃಷಿಯನ್ನು ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡುವ ಮೂಲಕ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿ ಮಾಡುತ್ತಿದೆ, ಬಡವರನ್ನು ಮತ್ತಷ್ಟು ಬಡವರಾಗಿಸುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, **ಚುನಾವಣೆಗಳ ನಂತರ ಖಂಡಿತವಾಗಿಯೂ ಜಾರಿಗೊಳಿಸಲಿರುವ ಈ ನಿರ್ಧಾರದ ವಿರುದ್ಧ ಪ್ರತಿಭಟಿಸಿ ಎದ್ದು ನಿಲ್ಲಬೇಕು** ಎಂದು ಜನತೆಗೆ ಕರೆ ನೀಡಿದೆ. ಸರಕಾರ ಈ ನಡೆಯನ್ನು ಹಿಂದಕ್ಕೆ ಪಡೆಯುವಂತೆ ಬಲವಂತ ಮಾಡಬೇಕಾಗಿದೆ ಎಂದು ಅದು ಹೇಳಿದೆ.

ಮಾರ್ಚ್ 31 ರಂದು ಹಣಕಾಸು ಮಂತ್ರಾಲಯ ಪ್ರಕಟಿಸಿದ ಬಡ್ಡಿದರ ಕಡಿತಗಳು

	ಪ್ರಸಕ್ತ ಬಡ್ಡಿದರ	ಪ್ರಕಟಿತ ಬಡ್ಡಿದರ
ಉಳಿತಾಯ ಠೇವಣಿ	4 %	3.5%
5 ವರ್ಷದ ಆರ್.ಡಿ.	5.8%	5.3%
1 ವರ್ಷದ ಠೇವಣಿ	5.5%	4.4%
2 ವರ್ಷಗಳ ಠೇವಣಿ	5.5%	5.0%
5 ವರ್ಷಗಳ ಠೇವಣಿ	6.7%	5.8%
ಮಾಸಿಕ ಆದಾಯ ಖಾತೆ	6.6%	5.7%
ರಾಷ್ಟ್ರೀಯ ಉಳಿತಾಯ ಪತ್ರ	6.8%	5.9%
ಕಿಸಾನ್ ವಿಕಾಸ ಪತ್ರ	6.9%	6.2%
ಸಾರ್ವಜನಿಕ ಭವಿಷ್ಯ ನಿಧಿ	7.1%	6.4%
ಹಿರಿಯ ನಾಗರಿಕರ ಉಳಿತಾಯ ಯೋಜನೆ	7.4%	6.5%
ಸುಕನ್ಯಾ ಸಮೃದ್ಧಿ ಯೋಜನೆ	7.6%	6.9%

ಕೇರಳದಿಂದ ರಾಜ್ಯಸಭಾ ಸದಸ್ಯರ ಚುನಾವಣೆ: ಚುನಾವಣಾ ಆಯೋಗ ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡಬಾರದು

'ಜನಶಕ್ತಿ'ಯ ಹಿಂದಿನ ಸಂಚಿಕೆಯಲ್ಲಿ ವರದಿಯಾದಂತೆ, ರಾಜ್ಯಸಭೆಯ ಮೂರು ಸ್ಥಾನಗಳಿಗೆ ಕೇರಳ ವಿಧಾನಸಭೆಯಿಂದ ಮಾರ್ಚ್ 24ರಂದು ಆರಂಭವಾಗಬೇಕಾಗಿದ್ದ ಚುನಾವಣಾ ಪ್ರಕ್ರಿಯೆಯನ್ನು, ಕೊನೆಯ ಗಳಿಗೆಯಲ್ಲಿ ತಡೆಹಿಡಿದದ್ದರ ಕುರಿತು ಆಘಾತ ವ್ಯಕ್ತಪಡಿಸಿ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದರು. ಈ ಕುರಿತು ಚುನಾವಣಾ ಆಯೋಗದ ಪತ್ರಿಕಾ ಹೇಳಿಕೆ ಪ್ರಕಟವಾದ ಕೂಡಲೇ ಅದನ್ನು ಸಂಪರ್ಕಿಸಿ ಭೇಟಿ ಮಾಡುವ ಪ್ರಯತ್ನ ವಿಫಲವಾದ್ದರಿಂದ ಈ ಪತ್ರ ಬರೆಯಬೇಕಾಯಿತು.

ಮರುದಿನ ಚುನಾವಣಾ ಆಯೋಗ ಭೇಟಿಗೆ ಅವಕಾಶ ನೀಡಿತು. ನೀಲೋತ್ಪಲ ಬಸು ಅವರು ಚುನಾವಣಾ ಆಯೋಗವನ್ನು ಭೇಟಿಯಾದರು. ಆದರೆ ಈ ಸಭೆಯಲ್ಲಿ ಮುಖ್ಯ ಚುನಾವಣಾ ಅಯುಕ್ತರು ದಿಲ್ಲಿಯಲ್ಲಿ ಇರದ್ದರಿಂದ ಹಾಜರಿರಲಿಲ್ಲ.

ಬಸು ಅವರು ತಮ್ಮ ಪತ್ರದಲ್ಲಿ ಬರೆದಿದ್ದ ಅಂಶಗಳನ್ನು ಎತ್ತಿದರು. ಹಾಜರಿದ್ದ ಆಯುಕ್ತರುಗಳು ಆಯೋಗದ ಮಾರ್ಚ್ 24 ರ ಹೇಳಿಕೆಯಿಂದ ಈ ಇಡೀ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ ಎಂದು ಭಾವಿಸಬೇಕಾಗಿಲ್ಲ ಎಂದು ವಿವರಿಸಲು ಪ್ರಯತ್ನಿಸಿದರು.

ಅಂದರೆ ಇದು ಸರಕಾರ ಮತ್ತು ಆಯೋಗದ ನಡುವಿನ ದ್ವಿಪಕ್ಷೀಯ ವಿಚಾರ ಎಂದಂತಾಯಿತು. ಆದರೆ ಅಯೋಗದ ಪತ್ರಿಕಾ ಹೇಳಿಕೆ ಆಯೋಗದ ಸ್ವಾತಂತ್ರ್ಯಕ್ಕೆ ಕುಂದು ಬಂದಿದೆ ಎಂಬ ಭಾವನೆಯನ್ನು ಕೊಡುತ್ತದೆ. ಸರಕಾರದ ಉಲ್ಲೇಖವನ್ನು ಆಯೋಗ ಪರಿಗಣನೆಗೆ ತಗೊಂಡಿದೆ ಎಂದನಿಸುತ್ತಿರುವುದರಿಂದ ಈ ಚುನಾವಣಾ ಪ್ರಕ್ರಿಯೆ ಮುಂದುವರಿಯುವ ಬಗ್ಗೆ ಸಂದೇಹ ಮೂಡುತ್ತದೆ ಎಂದು ನೀಲೋತ್ಪಲ ಬಸು ಪಕ್ಷದ ಅಭಿಪ್ರಾಯವನ್ನು ಮುಂದಿಟ್ಟರು.

ಒಂದು ವೇಳೆ ಆಯೋಗ ಇಡೀ ಪ್ರಕ್ರಿಯೆಯನ್ನು ತಡೆಹಿಡಿದಿಲ್ಲವಾದರೆ, ಈ ಬಗ್ಗೆ ಸಾರ್ವಜನಿಕವಾಗಿ ಸ್ಪಷ್ಟೀಕರಣ ನೀಡಬೇಕು ಮತ್ತು ಸರಕಾರದ ಉಲ್ಲೇಖದ ವಿವರಗಳನ್ನು ಕೂಡ ತಿಳಿಯಪಡಿಸಬೇಕು ಎಂದು ಬಸು ಅವರು ಹೇಳಿದಾಗ, ಆಯೋಗ ಈ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸುತ್ತದೆ ಎಂಬ ಆಶ್ವಾಸನೆಯನ್ನು ಕೊಡಲಾಯಿತು.

ಈ ನಡುವೆ ಕೇರಳ ಹೈಕೋರ್ಟಿನಲ್ಲಿ ಈ ಕುರಿತ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಆಯೋಗ ಗಂಭೀರ ಪರಿಣಾಮಗಳನ್ನು ಉಂಟುಮಾಡುವಂತಹ ನಿಲುವು ತಳೆದಿರುವದರಿಂದ ಈ ಕುರಿತು ನೀಲೋತ್ಪಲ ಬಸು ಮುಖ್ಯ ಚುನಾವಣಾ ಆಯುಕ್ತರಿಗೆ ಎಪ್ರಿಲ್ 1 ರಂದು ಇನ್ನೊಂದು ಪತ್ರವನ್ನು ಬರೆಯಬೇಕಾಗಿ ಬಂದಿದೆ.

ಈ ಬೆಳವಣಿಗೆಗಳು ಸಿಪಿಐ(ಎಂ)ನ ಆತಂಕವನ್ನು ಇನ್ನಷ್ಟು ಸಾಬೀತುಪಡಿಸುವಂತಿವೆ ಎಂದು ಈ ಪತ್ರದಲ್ಲಿ ಹೇಳಲಾಗಿದೆ. **ಕೇರಳದ ಈಗಿನ ವಿಧಾನಸಭೆಯ ಸದಸ್ಯರುಗಳ ಅವಧಿ ಮುಗಿಯುವ ಮೊದಲೇ ರಾಜ್ಯಸಭೆಗೆ ಚುನಾವಣೆಗಳನ್ನು ನಡೆಸಲಾಗುವುದು ಎಂದು ನ್ಯಾಯಾಲಯದ ಎದುರು ಮೌಖಿಕವಾಗಿ ಹೇಳಿದ ನಂತರ ಈ ಬಗ್ಗೆ ಸ್ಪಷ್ಟ ಹೇಳಿಕೆಯನ್ನು ಕೊಡಲು ಆಯೋಗ ನಿರಾಕರಿಸುತ್ತಿರುವುದಕ್ಕೆ ಕಾರಣ ತಿಳಿಯದು.** ಸಂದೇಹವನ್ನು ಇನ್ನೂ ಹೆಚ್ಚಿಸುವ ಸಂಗತಿಯೆಂದರೆ, ಮಾರ್ಚ್ 17ರ ಅಧಿಸೂಚನೆಯಲ್ಲಿ ವೇಳಾಪಟ್ಟಿಯನ್ನು ಪ್ರಕಟಿಸಿದ ನಂತರ ಆಯೋಗದ ಆಶಯವನ್ನು ಬದಲಿಸಲು ಕಾರಣವಾದಂತಿರುವ ಸರಕಾರದ ಉಲ್ಲೇಖದಲ್ಲಿ ಏನಿದೆ ಎಂಬುದನ್ನು ತಿಳಿಸಲು ಅದು ಈಗಲೂ ಹಿಂದೇಟು ಹಾಕುತ್ತಿದೆ.

ಆದ್ದರಿಂದ ಆಯೋಗ ಕಾನೂನಿನ ಪ್ರಕಾರ ವರ್ತಿಸಬೇಕು, ಪ್ರಸಕ್ತ ವಿಧಾನಸಭಾ ಸದಸ್ಯರ ಕಾರ್ಯಕಾಲ ಮುಗಿಯುವ ಮೊದಲು ಚುನಾವಣೆಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ದೃಢವಾಗಿ ಆಗ್ರಹಿಸುವುದಾಗಿ ಬಸು ತಮ್ಮ ಈ ಪತ್ರದಲ್ಲಿ ಹೇಳಿದ್ದಾರೆ. ಭಾರತದ ಚುನಾವಣಾ ಆಯೋಗದಂತಹ ಒಂದು ಸ್ವತಂತ್ರ ಸಂವಿಧಾನಿಕ ಪ್ರಾಧಿಕಾರ ಪಾರದರ್ಶಕ ವರ್ತನೆಯ ದೃಷ್ಟಿಯಿಂದ ಸರಕಾರದ ಉಲ್ಲೇಖದಲ್ಲಿ ಏನಿದೆ ಎಂಬುದರ ವಿವರಗಳನ್ನು ಹಂಚಿಕೊಳ್ಳಬೇಕು ಎನ್ನುತ್ತ ಚುನಾವಣಾ ಆಯೋಗ ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡುತ್ತಿದೆ ಎಂಬ ಭಾವನೆ ಉಂಟಾಗದ ರೀತಿಯಲ್ಲಿ ವರ್ತಿಸುತ್ತದೆ ಎಂಬ ನಿರೀಕ್ಷೆಯನ್ನು ನೀಲೋತ್ಪಲ ಬಸು ತಮ್ಮ ಪತ್ರದಲ್ಲಿ ವ್ಯಕ್ತಪಡಿಸಿದ್ದಾರೆ.

ಕರಾಳ ಕಾಯ್ದೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ರೈತರ ನಿರ್ಧಾರ ಮೇ ಮೊದಲ ವಾರದಲ್ಲಿ ಸಂಸದ್ ಭವನಕ್ಕೆ ಪಾದಯಾತ್ರೆ



ಮಾರ್ಚ್ 28 ರಂದು ಕರಾಳ ಕೃಷಿ ಕಾಯ್ದೆಗಳ 'ಹೋಳಿ ದಹನ'ದ ನಂತರ ದಿಲ್ಲಿ ಗಡಿಗಳಲ್ಲಿ ಪ್ರತಿಭಟಿಸುತ್ತಿರುವ ರೈತರು ಎಪ್ರಿಲ್ 5 ರಂದು "ಎಫ್‌ಸಿಐ(ಭಾರತ ಆಹಾರ ನಿಗಮ) ಬಚಾವೋ" ದಿನಾಚರಣೆ ಮತ್ತು ಎಪ್ರಿಲ್ 14 ರಂದು 'ಸಂವಿಧಾನ ಬಚಾವೋ' ದಿನಾಚರಣೆ ನಡೆಸಲು ನಿರ್ಧರಿಸಿದ್ದಾರೆ.

ಮಾರ್ಚ್ 31 ರಂದು ಪತ್ರಿಕಾಗೋಷ್ಠಿ ನಡೆಸಿದ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಮುಂದುವರೆಯುತ್ತಿರುವ ತಮ್ಮ ಹೋರಾಟದ ಭಾಗವಾಗಿ ಮುಂದಿನ ಎರಡು ತಿಂಗಳ ಪ್ರತಿಭಟನಾ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು.

ಕೃಷಿ ವಲಯವನ್ನು ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡುವ ಹುನ್ನಾರದ ಭಾಗವಾಗಿ ಭಾರತ ಆಹಾರ ನಿಗಮವನ್ನು ಹಾಳುಗೆಡಹುವ ಪ್ರಯತ್ನದತ್ತ ಗಮನ ಸೆಳೆಯಲು **ಎಪ್ರಿಲ್ 5 ರಂದು** ದೇಶಾದ್ಯಂತ 736 ಜಿಲ್ಲೆಗಳಲ್ಲಿ ಎಫ್‌ಸಿಐ ಕಚೇರಿಗಳ ಎದುರು **'ಎಫ್‌ಸಿಐ ಬಚಾವೋ ದಿವಸ್'** ಆಚರಿಸಲಾಗುವುದು.

ಎಪ್ರಿಲ್ 13 ಪಂಜಾಬಿನಲ್ಲಿ 'ಬೈಸಾಖಿ' ಬಹು ದೊಡ್ಡ ಹಬ್ಬ. ಆ ದಿನ ದಿಲ್ಲಿ ಗಡಿಗಳಲ್ಲಿ ಇದನ್ನು ರೈತರು ಆಚರಿಸಲಿದ್ದಾರೆ. ಅದಕ್ಕೆ ಮೊದಲು **ಎಪ್ರಿಲ್ 10** ರಂದು ಈ ಗಡಿ ಪ್ರತಿಭಟನಾ ಸ್ಥಳಗಳನ್ನು ಜೋಡಿಸುವ ಜೋಡಿಸುವ ಕೆಎಂಪಿ ಹೆದ್ದಾರಿಯಲ್ಲಿ 24 ಗಂಟೆಗಳ ರಾಸ್ತಾ ರೋಕೋ ಯೋಜಿಸಲಾಗಿದೆ.

ಎಪ್ರಿಲ್ 14 ಅಂಬೇಡ್ಕರ್ ಜಯಂತಿಯಂದು ಸಂವಿಧಾನ್ ಬಚಾವೋ ದಿವಸ್' ಆಚರಿಸಲಾಗುವುದು.

ಮೇ ದಿನದಂದು ರೈತರು ಬೀಡು ಬಿಟ್ಟಿರುವ ದಿಲ್ಲಿ ಗಡಿಗಳಲ್ಲಿ ಮೇದಿನಾಚರಣೆ ನಡೆಸಲಾಗುವುದು, ಅದಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಆಹ್ವಾನಿಸಲಾಗುವುದು. **ಈ ದಿನವನ್ನು ರೈತ-ಕಾರ್ಮಿಕ ಐಕ್ಯತೆಗೆ ಸಮರ್ಪಿಸಲಾಗುವುದು ಎಂದು ಎಸ್.ಕೆ.ಎಂ. ಮುಖಂಡರು ಹೇಳಿದರು.**

ಇದನ್ನನುಸರಿಸಿ ಮೇ ತಿಂಗಳ ಮೊದಲ ವಾರದಲ್ಲಿ ರೈತರು **ಸಂಸದ್ ಭವನದತ್ತ ಪಾದಯಾತ್ರೆ** ನಡೆಸುತ್ತಾರೆ. ಆದಿನ ದೇಶ ಹಲವೆಡೆಗಳಿಂದ ಬರುವ ರೈತರು ತಮ್ಮ ಟ್ರಾಕ್ಟರ್ ಮುಂತಾದವುಗಳನ್ನು ಗಡಿಗಳಲೆ ಬಿಟ್ಟು ಪಾದಯಾತ್ರೆಯಲ್ಲಿ ಭಾಗವಹಿಸುತ್ತಾರೆ ಎಂದು ಎಸ್.ಕೆ.ಎಂ. ಮುಖಂಡರು ಹೇಳಿದ್ದಾರೆ.

ಇದಕ್ಕೆ ಮೊದಲು ಮಾರ್ಚ್ 28 ಮತ್ತು 29ರಂದು ದಿಲ್ಲಿಯ ಗಡಿಗಳಲ್ಲಿ ಮೂರು ಕರಾಳ ಕೃಷಿ ಕಾಯ್ದೆಗಳ ಪ್ರತಿಗಳ ಸಾಮೂಹಿಕ ದಹನ ನಡೆಸಿ ನಿಜವಾದ ಅರ್ಥದಲ್ಲಿ ಹೋಳಿ ಆಚರಿಸಿರುವುದಾಗಿ ರೈತರು ಹೇಳಿದ್ದಾರೆ.

ದೇಶದ ಇತರೆಡೆಗಳಲ್ಲೂ ರೈತರು ಅಂದು ಈ ರೀತಿಯಲ್ಲಿ 'ಹೋಲೀ ದಹನ್' ನಡೆಸಿದ್ದಾರೆ.

ಕರಾಳ ಕೃಷಿ ಕಾಯ್ದೆಗಳ ಪ್ರತಿಗಳ 'ಹೋಳಿ ದಹನ'





ಸಂಪಾದಕೀಯ

ಸಾರ್ವಜನಿಕ ಸ್ಮಶಾನಗಳನ್ನು ಒದಗಿಸಲು ಆಗ್ರಹ

ಕರ್ನಾಟಕದ ಹಳ್ಳಿಗಳು, ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸ್ಮಶಾನಗಳನ್ನು ಒದಗಿಸಲು ಯಡಿಯೂರಪ್ಪ ಸರ್ಕಾರ ಏನೇನು ಕ್ರಮ ಕೈಗೊಳ್ಳದಿರುವುದು ಅಮಾನವೀಯ ಕ್ರಮವಾಗಿದೆ. 2011 ರ ಜನಗಣತಿ ಪ್ರಕಾರ ರಾಜ್ಯದಲ್ಲಿ 39,340 ಗ್ರಾಮಗಳಿವೆ. ಈ ಪೈಕಿ 7,069 ಗ್ರಾಮಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಅವಕಾಶವನ್ನೆ ಕಲ್ಪಿಸಲಾಗಿಲ್ಲ.

ಸ್ಮಶಾನದ ಕೊರತೆ ಹೊಸ ಸಮಸ್ಯೆಯೇನೂ ಅಲ್ಲ. ಹಲವಾರು ಗ್ರಾಮಗಳ ಜನರು ಅನೇಕ ದಶಕಗಳಿಂದಲೂ ಸ್ಮಶಾನಕ್ಕಾಗಿ ಹೋರಾಟ ನಡೆಸುತ್ತಲೇ ಇದ್ದಾರೆ. ವ್ಯಕ್ತಿಯೊಬ್ಬ ಮೃತ ಪಟ್ಟಾಗ ಗೌರವಯುತ ಅಂತ್ಯಸಂಸ್ಕಾರಕ್ಕೆ ಅವಕಾಶ ದೊರೆಯದಿರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ನ್ಯಾಯಾಲಯಗಳು ಹಲವು ಬಾರಿ ಈ ಕುರಿತು ಸರ್ಕಾರಗಳ ಗಮನ ಸೆಳೆದಿವೆ.

ಸ್ಮಶಾನದ ಕೊರತೆ ಗ್ರಾಮೀಣ ಪ್ರದೇಶದ ಜನರ ಬಹುದೊಡ್ಡ ಸಮಸ್ಯೆಯಾಗಿದೆ. ಸ್ವಂತ ಜಮೀನು ಹೊಂದಿರುವ ಕುಟುಂಬಗಳು ತಮ್ಮ ಜಮೀನಿನಲ್ಲೇ ಅನಿವಾರ್ಯವಾಗಿ ಶವ ಸಂಸ್ಕಾರ ನಡೆಸುತ್ತಾರೆ. ಆದರೆ ಭೂರಹಿತ ಕುಟುಂಬಗಳಲ್ಲಿ ಸಾವು ಸಂಭವಿಸಿದಾಗ ಆ ಕುಟುಂಬಗಳು ಅನುಭವಿಸುವ ಪಡಿಪಾಟಲು ಹೇಳತೀರದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲೆಮಾರಿ ಸಮುದಾಯಗಳ ಪರಿಸ್ಥಿತಿ ಇನ್ನೂ ಶೋಚನೀಯ.

ಸಾರ್ವಜನಿಕ ಸ್ಮಶಾನಗಳನ್ನು ಹೊಂದಿರುವ ಹಳ್ಳಿಗಳಲ್ಲೂ ಸಮಸ್ಯೆಗಳಿಗೆ ಕೊನೆ ಇಲ್ಲ. ಹಲವೆಡೆ ಬಲಾಢ್ಯರು ಸ್ಮಶಾನದ ಜಮೀನುಗಳನ್ನೇ ಒತ್ತುವರಿ ಮಾಡಿಕೊಂಡಿರುವ ಅನೇಕ ಉದಾಹರಣೆಗಳಿವೆ. ಸ್ಮಶಾನಗಳನ್ನು ಎಲ್ಲರೂ ಮುಕ್ತವಾಗಿ ಬಳಸಲು ಅವಕಾಶ ಇಲ್ಲದಂತಹ ಸ್ಥಿತಿ ಕೆಲವು ಹಳ್ಳಿಗಳಲ್ಲಿ ಈಗಲೂ ಇದೆ.

ಸ್ಮಶಾನಗಳ ಕೊರತೆಯ ಸಮಸ್ಯೆಯ ಪರಿಹಾರಕ್ಕೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ, ತಾಲ್ಲೂಕ್ ತಹಶಿಲ್ದಾರರ ಕಚೇರಿ ಸಾಮೂಹಿಕ ಧರಣಿ ನಡೆಸುವುದು ಸಾಮಾನ್ಯ ಸಂಗತಿಯಾಗಿದೆ. ಇದೇ ಉದ್ದೇಶಕ್ಕಾಗಿ ಚುನಾವಣಾ ಬಹಿಷ್ಕಾರ, ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳಿಗೆ ಘೇರಾವ್ ಹಾಕುವ ಪ್ರಕರಣಗಳು ಆಗಾಗ ನಡೆಯುತ್ತಲೇ ಇರುತ್ತವೆ. ಆದರೆ ನ್ಯಾಯ ಸಿಕ್ಕಿದ್ದು ವಿರಳ.

ಇದೇ ವಿಷಯದಲ್ಲಿ ಹಳ್ಳಿಗಳಲ್ಲಿ ಆಗಾಗ ಸಂಘರ್ಷಗಳೂ ನಡೆದಿವೆ. ಶವಗಳನ್ನೆ ಮುಂದೆ ಇರಿಸಿಕೊಂಡು ಧರಣಿ ನಡೆಸುವುದು, ರಸ್ತೆ ಬದಿಯಲ್ಲಿ ಅಂತ್ಯ ಸಂಸ್ಕಾರ ನಡೆಸುವ ಮೂಲಕ ಜನರು ತಮ್ಮ ಆಕ್ರೋಶ ಹೊರಹಾಕಲು ಪ್ರಯತ್ನಿಸುತ್ತಾ ಇವೆ.

ಕರ್ನಾಟಕ ಭೂ ಕಾಯ್ದೆಯ ಸೆಕ್ಷನ್ 71 ರ ಅಡಿಯಲ್ಲಿ ಸ್ಮಶಾನಕ್ಕೆ ಜಿಲ್ಲಾಧಿಕಾರಿಗಳು ಮತ್ತು ತಹಶಿಲ್ದಾರರಿಗೆ ಭೂಮಿಯನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗಾಗಿ ಸ್ಮಶಾನ ಒದಗಿಸಲು ಉಪಯೋಜನೆ ಅನುದಾನ ಬಳಕೆಗೆ ಕಾನೂನು ಅವಕಾಶ ಇದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯ ಧೋರಣೆ ಸಮರ್ಥನೀಯವಲ್ಲ. ಪ್ರತಿ ಹಳ್ಳಿಗೆ ಕನಿಷ್ಟ ಒಂದಾದರೂ ಸಾರ್ವಜನಿಕ ಸ್ಮಶಾನವನ್ನು ಒದಗಿಸಲು ಸರ್ಕಾರ ಭೂಮಿಯನ್ನು ಒದಗಿಸಬೇಕು.

ಸ್ಮಶಾನಗಳಲ್ಲಿ ಮಸಣ ಕಾರ್ಮಿಕರಾಗಿ ದುಡಿಯುತ್ತಿರುವ ಕೆಲಸಗಾರರ ಪರಿಸ್ಥಿತಿ ಚಿಂತಾಜನಕವಾಗಿದೆ. ಅವರಿಗೆ ಯಾವುದೇ ಕಾಯಂ ವೇತನವಿಲ್ಲ. ಯಾರೊಬ್ಬನು ಸಾಯುವುದನ್ನೇ ಅವರು ಎದುರು ನೋಡಬೇಕಾಗಿದೆ. ಇವರನ್ನು ನಗರಸಭೆ, ಪುರಸಭೆ ಅಥವ ಗ್ರಾಮ ಪಂಚಾಯತಿಗಳ ಕೆಲಸಗಾರರೆಂದು ನೇಮಿಸಿ ಕನಿಷ್ಠ ವೇತನ ಮುಂತಾದ ಕಾನೂನು ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

ಧರಣಿ ಪ್ರತಿಭಟನೆಗೆ ಅವಕಾಶ ನೀಡದಿರುವುದು ಕೋವಿಡ್ ತಡೆಗೋ, ರಾಜಕೀಯ ಹಿತಾಸಕ್ತಿಗೋ: ಸಿಪಿಐ(ಎಂ) ಪ್ರಶ್ನೆ

ಬೆಂಗಳೂರು ಮತ್ತು ರಾಜ್ಯದಲ್ಲಿ ಹೆಚ್ಚುತ್ತಿರುವ ಕೋವಿಡ್–19 ಎರಡನೇ ಅಲೆಯ ಸೋಂಕಿತರ ಸಂಖ್ಯೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕೈಗೊಂಡಿರುವ ಧರಣಿ ಹಾಗೂ ಪ್ರತಿಭಟನೆಗಳಿಗೆ ಅವಕಾಶ ನೀಡದಿರುವ ಕ್ರಮವು ಕೋವಿಡ್ ತಡೆಗೋ ಅಥವಾ ತನ್ನ ರಾಜಕೀಯ ಹಿತಾಸಕ್ತಿಗೋ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ವಾದಿ) ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ರಾಜ್ಯ ಸರ್ಕಾರವನ್ನು ಪ್ರಶ್ನಿಸಿವೆ.

ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯ ಸೋಂಕಿತರ ಸಂಖ್ಯೆ ದಿನಂಪ್ರತಿ ಹೆಚ್ಚುತ್ತಿದೆ. ಅದರಲ್ಲೂ ಪ್ರಮುಖವಾಗಿ ಬೆಂಗಳೂರಿನಲ್ಲಿ ದಿನಂಪ್ರತಿ ಸೋಂಕಿತರ ಸಂಖ್ಯೆಯು 1700 ಅನ್ನು ದಾಟುತ್ತಿದೆ. ಸೋಮವಾರದ ಸಂಖ್ಯೆಗಳ ಅನುಗುಣವಾಗಿ ಬೆಂಗಳೂರು ಒಂದರಲ್ಲೆ 1742 ಸೋಂಕಿತರು ಹೆಚ್ಚಾಗಿದ್ದು ಒಟ್ಟು 16,259 ಸಕ್ರಿಯ ಪ್ರಕರಣಗಳು ಬೆಂಗಳೂರಿನಲ್ಲಿವೆ. ಸೋಂಕಿತರಿಗೆ ಸರಿಯಾದಂತಹ ಹಾಸಿಗೆಯಾಗಲಿ, ಐಸಿಯು ಆಗಲಿ ಸಿಗದೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ವರ್ಷ ಸ್ಥಾಪಿಸಿದ್ದ ಕೋವಿಡ್ ವಾರ್ರೂಂ ಗಳನ್ನು ವ್ಯಾಕ್ಸಿನೇಷನ್ ವಾರ್ರೂಂಗಳಾಗಿ ಮಾರ್ಪಡಿಸಿರುವ ಕಾರಣ ಆಸ್ಪತ್ರೆ, ಚಿಕಿತ್ಸೆ, ಆಂಬುಲೆನ್ಸ್ ಮತ್ತು ಬೆಡ್ಗಳಿಗಾಗಿ ಸೋಂಕಿತರು ಪರದಾಡುತ್ತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಕೋವಿಡ್ ಬೆಡ್ಗಳನ್ನು ಹೆಚ್ಚಿಸಲು ವಾರ್ರೂಂ ಅನ್ನು ಪುನರ್ ಪ್ರಾರಂಭಿಸಲು ಕ್ರಮ ಕೈಗೊಳ್ಳುವ ಬದಲು ಕೇವಲ ಧರಣಿ, ಪ್ರತಿಭಟನೆಗಳಿಗೆ ಅವಕಾಶ ನೀಡದಿರುವುದು ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರಗಳ ವಿರುದ್ಧ ಹೆಚ್ಚುತ್ತಿರುವ ಜನರ ಪ್ರತಿಭಟನೆಗಳನ್ನು ತಡೆಯುವ ರಾಜಕೀಯ ಹಿತಾಸಕ್ತಿಗಾಗಿ ರಾಜ್ಯ ಬಿಜೆಪಿ ಸರ್ಕಾರವು ಕೈಗೊಂಡಿರುವ ಕ್ರಮ ಇದಾಗಿದೆ ಎಂದು ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್.ಉಮೇಶ್ ಆರೋಪಿಸಿದ್ದಾರೆ.

ಮಹಾನಗರದಲ್ಲಿ ಪೀಕ್ ಅವರ್ಗಳಲ್ಲಿ ಬಿಎಂಟಿಸಿ ಬಸ್‌ಗಳ ಕೊರತೆಯಿಂದಾಗಿ ಓಡಾಡುತ್ತಿರುವ ಬಸ್ಗಳು ತುಂಬಿತುಳುಕುತ್ತಿವೆ. ಯಾವುದೇ ಅಂತರವಾಗಲಿ ಮುನ್ನೆಚ್ಚರಿಕೆಯಾಗಲಿ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಪಬ್ ಒಂದರಲ್ಲೇ ಇತ್ತೀಚೆಗೆ 16 ಮಂದಿ ಸೋಂಕಿತರು ಕಂಡುಬಂದಿದ್ದರೂ ಬಾರ್ ಅಂಡ್ ರೆಸ್ಟೋರೆಂಟ್, ಪಬ್ಗಳಿಗೆ ಹಾಗೂ ಇತರೆ ಜನಸಾಂದ್ರತೆಯ ಪ್ರದೇಶಗಳಲ್ಲಿ ಯಾವುದೇ ನಿಯಂತ್ರಣವಿಲ್ಲದೆ ಜನರ ಚಲನವಲನಕ್ಕೆ ಅನುವುಗೊಳಿಸಿ ಕೇವಲ ಧರಣಿ ಪ್ರತಿಭಟನೆಗಳನ್ನು ನಿಷೇಧಿಸಿದರೆ ಕೋವಿಡ್ ಎರಡನೇ ಅಲೆಯನ್ನು ತಡೆಯಲು ಸಾಧ್ಯವೇ ಎಂಬುದು ಜನತೆಯ ಪ್ರಶ್ನೆಯಾಗಿದೆ. ಮುಂಬರುವ ಉಪಚುನಾವಣೆಗಳ ಹಿನ್ನೆಲೆಯಲ್ಲಿ ತನ್ನ ರಾಜಕೀಯ ಹಿತಾಸಕ್ತಿಗಾಗಿ ಬಿಗಿ ಕ್ರಮಗಳನ್ನು ವಿಧಿಸಲು ತಯಾರಿಲ್ಲದ ರಾಜ್ಯ ಬಿಜೆಪಿ ಸರ್ಕಾರವು ಕೇವಲ ಕಣ್ಣೊರೆಸುವ ತಂತ್ರವಾಗಿ 15 ದಿನ ಕಟ್ಟೆಚ್ಚರದ ಮಾತುಗಳನ್ನು ಆಡುತ್ತಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಐಸಿಯು ಒದಗಿಸಲು ಸುಶ್ರೂಷಕರು ಹಾಗೂ ವೈದ್ಯರಿಗೆ ಅಗತ್ಯ ಪಿಪಿಇ ಕಿಟ್ಗಳನ್ನು ಒದಗಿಸಲು ಕ್ರಮವಹಿಸದೆ ಇಂತಹ ಬೂಟಾಟಿಕೆ ಮಾತುಗಳು ಜನರನ್ನು ಬಲಿಕೊಡಲಿವೆ ಹಾಗಾಗಿ ರಾಜ್ಯ ಸರ್ಕಾರ ಕೂಡಲೇ ಅಗತ್ಯ ಕ್ರಮವಹಿಸಬೇಕೆಂದು ಆಗ್ರಹಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಅಪಾಯ ಮನಗಾಣದ ಆರೋಗ್ಯಕ್ಕೆ ಗಮನ ನೀಡದ ಬಿಬಿಎಂಪಿ ಬಜೆಟ್: ಸಿಪಿಐ(ಎಂ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021–22ನೇ ಸಾಲಿನ ಆಯ–ವ್ಯಯ ಅಂದಾಜು ಮಾಡುವಲ್ಲಿ ಬಿಬಿಎಂಪಿ ಆಡಳಿತಗಾರರು ಕೋವಿಡ್ ಸಾಂಕ್ರಾಮಿಕದ ಅಪಾಯ ಮನಗಾಣುವಲ್ಲಿ ಮತ್ತು ಜನತೆಯ ಆರೋಗ್ಯಕ್ಕೆ ಗಮನ ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ), ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

9,286 ಕೋಟಿ ರೂಗಳ ಬಜೆಟ್ ನಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲು ಹಾಗೂ ಸಾಂಕ್ರಾಮಿಕ ರೋಗಗಳ ತಡೆಗೆ ನೀಡಬೇಕಾದ ಅಗತ್ಯ ಅನುದಾನವನ್ನು ನೀಡದೆ ಮಹಾನಗರವು ಎದುರಿಸುತ್ತಿರುವ ಸಾಂಕ್ರಾಮಿಕದ ಸವಾಲನ್ನು ಕಡಿಮೆ ಅಂದಾಜು ಮಾಡಿದ್ದಾರೆಂದು ಸಿಪಿಐ(ಎಂ) ಟೀಕಿಸಿದೆ. ಸಾಂಕ್ರಾಮಿಕ ಕಾಯಿಲೆಗಳ ನಿಯಂತ್ರಣಕ್ಕೆ ಯಾವುದೇ ಹಣ ಮೀಸಲಿಡದಿರುವುದು ರಾಜ್ಯ ಬಿಜೆಪಿ ಸರ್ಕಾರ ಮತ್ತು ಆಡಳಿತಗಾರರು ಕೋವಿಡ್ ಸವಾಲನ್ನು ಮನಗಾಣುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂಬುದನ್ನು ತೋರುತ್ತದೆ.

2020–21ರ ಆಯ–ವ್ಯಯದಲ್ಲಿ ಸಾಂಕ್ರಾಮಿಕ ಕಾಯಿಲೆಗಳ ತಡೆಗೆ 89 ಕೋಟಿ ರೂಗಳನ್ನು ಮೀಸಲಿರಿಸಲಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬೇಕಿದೆ. ವೈದ್ಯಕೀಯ ಮತ್ತು ಸಾಮಾನ್ಯ ಸಾರ್ವಜನಿಕ ಆರೋಗ್ಯಕ್ಕೆ 2020–21 ರ ಪರಿಷ್ಕೃತ ಆಯ–ವ್ಯಯದಂತೆ 443 ಕೋಟಿ ರೂಗಳನ್ನು ಮೀಸಲಿರಿಸಿದ್ದರೆ 2021–22 ರ ಸಾಲಿಗೆ ಕೇವಲ 337 ಕೋಟಿ ರೂಗಳನ್ನು ಮೀಸಲಿರಿಸಿರುವುದು ಆರೋಗ್ಯದ ಕಡೆಗೆ ಬಿಬಿಎಂಪಿಯ ನಿರ್ಲಕ್ಷ್ಯದ ನಡಿಗೆಯನ್ನು ತೋರುತ್ತದೆ. ಕೋವಿಡ್ ಹರಡುತ್ತಿರುವ ಪ್ರಸಕ್ತ ವರ್ಷದಲ್ಲಿ ರಾಜ್ಯ ಸರ್ಕಾರದ ಕೋವಿಡ್–19 ಅನುದಾನ 300 ಕೋಟಿ ರೂಗಳಿಂದ 60 ಕೋಟಿ ರೂಗಳಿಗೆ ಇಳಿಕೆಯಾಗಿರುವುದನ್ನು ಬಿಬಿಎಂಪಿ ಬಜೆಟ್ ತೋರಿದೆ.

ಮಳೆಗಾಲದಲ್ಲಿ ಮಹಾನಗರದ ಹಲವು ಬಡಾವಣೆಗಳು ನೆರೆ ಹಾವಳಿಗೆ ಬಲಿಯಾಗುತ್ತಿರುವುದು ಹೆಚ್ಚುತ್ತಿರುವ ಈ ಕಾಲಮಾನದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆಗೆ ಮೀಸಲಿಟ್ಟಿರುವ ಹಣ ಕೇವಲ 10 ಕೋಟಿ ರೂಗಳಾಗಿದೆ. ಆದರೆ 2020 ಡಿಸೆಂಬರ್ ವೇಳೆಗೆ 25 ಕೋಟಿ ರೂಗಳು ವೆಚ್ಚವಾಗಿತ್ತು ಎಂಬುದನ್ನು ಸಹಾ ಆಡಳಿತಗಾರರು ಮನಗಾಣುವಲ್ಲಿ ವಿಫಲರಾಗಿದ್ದಾರೆ.

2019–20 ರಲ್ಲಿ 251 ಕೋಟಿ ರೂಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ನಿಧಿಗೆ ಮೀಸಲಿಟ್ಟಿದ್ದರೆ ಪ್ರಸಕ್ತ ಸಾಲಿನಲ್ಲಿ ಕೇವಲ 146 ಕೋಟಿ ರೂಗಳನ್ನು ಮೀಸಲಿರಿಸಲಾಗಿದೆ. ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ 2019–20 ರಲ್ಲಿ 9 ಕೋಟಿ ರೂ ಮೀಸಲಿಟ್ಟಿದ್ದರೆ ಪ್ರಸಕ್ತ ಸಾಲಿನಲ್ಲಿ ಅದನ್ನು 7.5 ಕೋಟಿಗೆ ಇಳಿಸಲಾಗಿದೆ. ಈ ಮೂಲಕ ಕಲ್ಯಾಣ ಯೋಜನೆಗಳಿಗೆ ಕತ್ತರಿ ಪ್ರಯೋಗವನ್ನು ಬಿಜೆಪಿ ರಾಜ್ಯ ಸರ್ಕಾರ ಮತ್ತು ಆಡಳಿತಗಾರರು ಮಾಡಿದ್ದಾರೆ.

ಆಯ–ವ್ಯಯದಲ್ಲಿನ ಅಂಕಿ ಅಂಶಗಳು ರಾಜ್ಯ ಬಿಜೆಪಿ ಸರ್ಕಾರವು ನಿರಂತರವಾಗಿ ಇಂದಿರಾ ಕ್ಯಾಂಟೀ ನ್ ಗಳಿಗೆ ಮೀಸಲಿಡುತ್ತಿರುವ ಹಣವನ್ನು ಕಡಿತ ಮಾಡುತ್ತಾ ಬಂದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 2019–20 ರಲ್ಲಿ 81 ಕೋಟಿ ಇಂದಿರಾ ಕ್ಯಾಂಟೀನ್ಗೆ ಖರ್ಚಾಗಿದ್ದರೆ ನಂತರದ ವರ್ಷಗಳಲ್ಲಿ ನಿರಂತರವಾಗಿ ಅದನ್ನು ಕಡಿತ ಮಾಡುತ್ತಾ 2021 ರ ಸಾಲಿನ ಡಿಸೆಂಬರ್ ವರೆಗೆ, ಕೋವಿಡ್ ಲಾಕ್ಡೌನ್ ಸಂದರ್ಭದಲ್ಲಿ ಜನತೆಯು ಆಹಾರಕ್ಕಾಗಿ ಪರದಾಡುತ್ತಿದ್ದ ಸಮಯದಲ್ಲಿ ಕೇವಲ 25 ಕೋಟಿ ರೂಗಳನ್ನು ಇಂದಿರಾ ಕ್ಯಾಂಟೀನ್ಗಾಗಿ ಖರ್ಚು ಮಾಡಲಾಗಿರುವ ಅಂಶವು ಜನತೆಯ

ಪುಟ 4 ಕ್ಕೆ

ಜನರ ವಿಶ್ವಾಸದಿಂದ ಮತ್ತೆ ಎಲ್‌ಡಿಎಫ್ ಅಧಿಕಾರಕ್ಕೆ: ಡಾ. ವಿ.ಸಿವದಾಸನ್



ಕೇರಳದಲ್ಲಿ ಅಧಿಕಾರದಲ್ಲಿರುವ ಎಲ್‌ಡಿಎಫ್ ಸರಕಾರದಿಂದ ಜನಪರವಾದ ಆಡಳಿತದಿಂದಾಗಿ ಜನರ ವಿಶ್ವಾಸವನ್ನು ಗಳಿಸಿದ್ದು ಜನತೆ ಮತ್ತೆ ಅಧಿಕಾರವನ್ನು ನೀಡಲಿದ್ದಾರೆ ಎಂದು ಸಿಪಿಐ(ಎಂ) ಪಕ್ಷದ ಕೇರಳ ರಾಜ್ಯ ಸಮಿತಿ ಸದಸ್ಯರಾದ ಡಾ. ವಿ.ಸಿವದಾಸನ್ ಅವರು ಹೇಳಿದರು.

ಕೇರಳ ವಿಧಾನಸಭೆಗೆ ನಡೆಯಲಿರುವ ಚುನಾವಣೆ ಅಂಗವಾಗಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು ಹಮ್ಮಿಕೊಂಡಿದ್ದ "ಎಲ್‌ಡಿಎಫ್ ಬೆಂಬಲಿಸಿ ರಾಜಕೀಯ ಸಮಾವೇಶ"ವನ್ನು ಉದ್ಘಾಟಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಪೂರ್ವದಿಂದ 1930 ರಿಂದಲೂ ಆರಂಭವಾದ ರೈತ ಕಾರ್ಮಿಕರ ಚಳುವಳಿಯಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ತರುವುದರಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದ ಬ್ರಿಟಿಷರು ಸೇರಿದಂತೆ ಪಾಳೇಗಾರಿ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ರೈತ ಕಾರ್ಮಿಕರ ದೃಢವಾದ ಹೋರಾಟ ನಡೆದಿದೆ. ಇದರ ಪರಿಣಾಮವಾಗಿ 1957ರಲ್ಲಿ ಕೇರಳದಲ್ಲಿ ಮೊಟ್ಟಮೊದಲ ಚುನಾಯಿತ ಕಮ್ಯೂನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಿತು. ಇ.ಎಂ.ಎಸ್. ನಂಬೂದಿರಿಪಾಡ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ನಡೆಸಿದರು. ಅಂದಿನ ಸರಕಾರ ಪ್ರಮುಖವಾಗಿ ಎಲ್ಲಾ ಬಡವರು, ದಲಿತರು ಹಿಂದುಳಿದ ವರ್ಗದವರಿಗೆ ಭೂ ಹಂಚಿಕೆ ಮಾಡುವ ಮೂಲಕ ಎಲ್ಲರಿಗೂ ಭೂಮಿ ಸಿಗುವಂತೆ ಮಾಡಿದರು.

ನಂತರದಲ್ಲಿ ಸಾಕ್ಷರತೆಯಲ್ಲಿ ಹಮ್ಮಿಕೊಂಡ ಯೋಜನೆಗಳಿಂದಾಗಿ 1987ರ ಹೊತ್ತಿಗೆ ಇಡೀ ಕೇರಳ ಸಾಕ್ಷರತೆಯಲ್ಲಿ ಗರಿಷ್ಠ ಗುರಿಯನ್ನು ಸಾಧಿಸಲು ಸಾಧ್ಯವಾಯಿತು. ಇಂದಿಗೂ ದೇಶದಲ್ಲಿ ಕೇರಳವು ಸಾಕ್ಷರತೆಯಲ್ಲಿ ಮೊದಲ ಸ್ಥಾನವನ್ನು ಅಲಂಕರಿಸಿದೆ.

ಕಳೆದ ಐದು ವರ್ಷದ ಅಧಿಕಾರವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ವಿಧ್ಯಾಭ್ಯಾಸ ಮಾಡುತ್ತಿದ್ದ 6,80,000 ಮಕ್ಕಳು ಸರಕಾರಿ ಶಾಲೆಗಳಿಗೆ ಸೇರ್ಪಡೆಯಾದರು. ಕೇರಳದ ಎಲ್‌ಡಿಎಫ್ ಸರಕಾರವು ಸರಕಾರಿ ಶಾಲೆಗಳನ್ನು ಆಧುನೀಕರಣ, ಮೂಲಸೌಲಭ್ಯಗಳು ಒಳಗೊಂಡು ತಂತ್ರಜ್ಞಾನಗಳಲ್ಲಿ ಉನ್ನತೀಕರಣ ಮಾಡಿದರ ಪರಿಣಾಮವಾಗಿ ಖಾಸಗಿ ಶಾಲೆಯಿಂದ ಸರಕಾರಿ ಶಾಲೆಗಳಿಗೆ ಮಕ್ಕಳು ಬರುವಂತಾಯಿತು ಎಂದರು.

ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿದ ಉನ್ನತೀಕರಣದಿಂದಾಗಿ ಸರಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿರುವ ಸೇವೆಗಳು ಬಡವರಿಗೂ ಕಡಿಮೆ ಖರ್ಚಿನಲ್ಲಿ ಉತ್ತಮ ಆರೋಗ್ಯವನ್ನು ನೀಡಲು ಸಾಧ್ಯವಾಗಿದೆ.

ಕೋವಿಡ್ ಸಾಂಕ್ರಾಮಿಕ ರೋಗವನ್ನು ನಿಭಾಯಿಸುವಲ್ಲಿ ಸರಕಾರ ಅತ್ಯಂತ ಮುಂಜಾಗ್ರತೆಯನ್ನು ವಹಿಸಿತು. ರಾಜ್ಯದ ಜನತೆಗೆ ಯಾವುದೇ ತೊಂದರೆಗಳು ಆಗದಂತೆ ಕ್ರಮವಹಿಸಲಾಗಿದೆ. ಕೋವಿಡ್ ಪರೀಕ್ಷೆಯನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ ಎಲ್ಲಿಯೂ ಲೋಪಗೊಳ್ಳದಂತೆ ನಿಭಾಯಿಸಲಾಗಿದೆ.

ಕೋವಿಡ್ ಪರಿಣಾಮದಿಂದ ಸಂಕಷ್ಟದಲ್ಲಿರುವ ಜನರಿಗಾಗಿ ರಾಜ್ಯದ ಎಲ್ಲಾ ಕುಟುಂಬಗಳಿಗೆ ಕಳೆದ 2020ರ ಮಾರ್ಚ್ ನಿಂದ ಪ್ರಸಕ್ತ 2021ರ ಏಪ್ರಿಲ್ ವರೆಗೂ ಉಚಿತವಾದ ರೇಷನ್ ಕಿಟ್ ಗಳನ್ನು ವಿತರಣೆ ಮಾಡಲಾಗಿದೆ.

ಕೇರಳಕ್ಕೆ ಬರುವ ಹೊರ ರಾಜ್ಯಗಳಿಂದ, ಬೇರೆ ಪ್ರದೇಶಗಳಿಂದ ಭಾಗವಹಿಸುವ ಜನರನ್ನು ಅತಿಥಿಗಳೆಂದು ಪರಿಗಣಿಸುವ ರಾಜ್ಯ ಸರಕಾರ ಅವರಿಗೆ ರಾಜ್ಯದ ಜನತೆಗೆ ಸಿಗುವಂತಹ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸುಮಾರು 59 ಲಕ್ಷ ಜನತೆಗೆ ರಾಜ್ಯ ಸರಕಾರವು ತಿಂಗಳಿಗೆ 1,600 ರೂ.ಗಳಂತೆ ಪ್ರತಿ ತಿಂಗಳು ಪಿಂಚಣಿಯನ್ನು ನೀಡುತ್ತಿದೆ ಮತ್ತು ಅವರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ಹಿಂದಿನ ಕಾಂಗ್ರೆಸ್ ಸರಕಾರದಲ್ಲಿ ಪಿಂಚಣಿ ಕೇವಲ ರೂ.600 ಇದ್ದಿತು. ರಾಜ್ಯದಲ್ಲಿ ವಿದ್ಯುತ್ ಅಡಚಣೆಯಾಗದಂತೆ ನಿರಂತರವಾಗಿ ವಿದ್ಯುತ್ ನೀಡಲು ಪ್ರಯತ್ನಿಸಲಾಗಿದೆ. ಕಳೆದ ಐದು ವರ್ಷಗಳಲ್ಲಿ ಕೋಮುಗಲಭೆಗಳನ್ನು ಸಂಭವಿಸದಂತೆ ಕ್ರಮವಹಿಸಲಾಗಿದೆ.

ವಿ. ಸಿವದಾಸನ್ ಅವರು ಚುನಾವಣೆಯ ಹಿನ್ನೆಲೆಯಲ್ಲಿ ಕೇರಳ ಎಡರಂಗ ಸರಕಾರದ ಸಾಧನೆಗಳು ಮತ್ತು ಜನಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ವಿಸ್ತಾರವಾಗಿ ವಿವರಿಸಿದರು.

ಕೇಂದ್ರ ಸರಕಾರ ತಮ್ಮ ಆಡಳಿತ ವ್ಯಾಪ್ತಿಯನ್ನು ಮೀರಿ ತನಿಖಾ ಸಂಸ್ಥೆಗಳ ಮೂಲಕ ಕೇರಳ ಸರಕಾರದ ಮೇಲೆ ಧಾಳಿಯನ್ನು ಮುಂದುವರೆಸುತ್ತಿರುವ ಬಗ್ಗೆ ಹಾಗೂ ಕೋಮುವಾದವನ್ನು ಹರಡಲು ಪ್ರಯತ್ನಿಸುತ್ತಿರುವ ಬಿಜೆಪಿ ಪ್ರಯತ್ನಿಸುತ್ತಿರುವ ಬಗ್ಗೆ ಕೇರಳದಲ್ಲಿ ಪ್ರತಿಪಕ್ಷಗಳು ಮತ್ತು ಬಿಜೆಪಿ ಆರೋಪಗಳನ್ನು ಜನತೆ ಅಂತಹ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದರು.

ಕೇರಳದಲ್ಲಿ ಯುವ ಕಾರ್ಯಕರ್ತರು ಅತ್ಯಂತ ಹುರುಪಿನಿಂದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಸಿವದಾಸನ್ ಹೇಳಿದರು.

ಸಮಾವೇಶದಲ್ಲಿ ಪಕ್ಷದ ಬೆಂಗಳೂರು ಉತ್ತರ ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಪ್ರತಾಪ್ ಸಿಂಹ ವಹಿಸಿದ್ದರು. ಪಕ್ಷದ ಮುಖಂಡರಾದ ಟಿ.ಲೀಲಾವತಿ, ಹೆಚ್. ಆರ್.ಹವಲ್ದಾರ್ ವೇದಿಕೆಯಲ್ಲಿದ್ದರು. ಜಯೆಶ್, ಗೋಪಕುಮಾರ್, ಜೇಕಬ್, ಶಾಜಿ ಕೊಟ್ಯಾನ್ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು. ಅದೇ ರೀತಿ ಸಿಪಿಐ(ಎಂ) ಪಕ್ಷದ ಕೆ.ಆರ್.ಪುರ ವಲಯ ಸಮಿತಿ ಹಾಗೂ ಇಂದಿರಾನಗರದಲ್ಲಿರುವ ಕಾರುಣ್ಯ ಸಂಸ್ಥೆಯಲ್ಲಿಯೂ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸಿಡಿ ಪ್ರಕರಣ: ದೇಶದ ಸಂವಿಧಾನ ಹಾಗೂ ಕಾನೂನಿನ ಅನುಸಾರ ತನಿಖೆಗಾಗಿ "ನಾವೆದ್ದು ನಿಲ್ಲದಿದ್ದರೆ" ವೇದಿಕೆ ಮೂಲಕ ಗೃಹ ಮಂತ್ರಿಗಳಿಗೆ ಬಹಿರಂಗ ಪತ್ರ

ಮಾಜಿ ಸಚಿವ ರಮೇಶ್ ಜಾರಕಿಹೊಳಿಯವರ ಮೇಲಿರುವ ಆರೋಪ ಮತ್ತು ಅದರ ಸುತ್ತ ಘಟಿಸುತ್ತಿರುವ ವಿದ್ಯಮಾನಗಳನ್ನು ಕುರಿತು ಮಹಿಳಾ ಮತ್ತು ಸಾಮಾಜಿಕ ಕಾಳಜಿಯನ್ನು ಹೊಂದಿರುವ ಸಂಘಟನೆ ಮತ್ತು ವ್ಯಕ್ತಿಗಳ ಜಂಟಿ ವೇದಿಕೆ "ನಾವೆದ್ದು ನಿಲ್ಲದಿದ್ದರೆ" ಎಂಬ ವೇದಿಕೆ ಮೂಲಕ ಇಂದು ಬೆಂಗಳೂರಿನಲ್ಲಿ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಕರ್ನಾಟಕ ಸರ್ಕಾರದ ಗೃಹ ಮಂತ್ರಿಗಳಿಗೆ ಬಹಿರಂಗ ಪತ್ರಬರೆದಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಅಸಂಬದ್ಧ ಘಟನೆಗಳಿಂದ ನಾವು ಆಕ್ರೋಷಿತರಾಗಿದ್ದೇವೆ. ರಾಜ್ಯದ ವಿವಿಧ ಮಹಿಳಾ ಮತ್ತು ಸಾಮಾಜಿಕ ಸಂಘಟನೆಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ, ನಾವೆಲ್ಲರೂ ಸೇರಿ ಪ್ರಮುಖ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ ಮತ್ತು ದೇಶದ ಸಂವಿಧಾನ ಹಾಗೂ ಕಾನೂನಿನ ಅನುಸಾರ ಸರಕಾರ ನಡೆದುಕೊಂಡು ನ್ಯಾಯಯುತ ಮಾರ್ಗದಲ್ಲಿ ನಡೆದು ಸತ್ಯವನ್ನೇ ಹೊರಹಾಕಬೇಕಾಗಿ ಎಂದು "ನಾವೆದ್ದು ನಿಲ್ಲದಿದ್ದರೆ" ಎಂಬ ವೇದಿಕೆ ಮೂಲಕ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಸರಕಾರದ ಸಚಿವರಾಗಿದ್ದ ರಮೇಶ್ ಜಾರಕಿಹೊಳಿಯವರು ಲೈಂಗಿಕ ಹಗರಣದ ಸಿ.ಡಿ. ಯೊಂದು ಸುದ್ದಿಗೆ ಬಂದ ಕಾರಣದಿಂದ ಒತ್ತಡಕ್ಕೆ ಒಳಗಾಗಿ ರಾಜೀನಾಮೆ ಕೊಡಬೇಕಾಗಿ ಬಂತು. ಘಟನೆಯ ಸತ್ಯಾಸತ್ಯತೆಯನ್ನು ಬಯಲಿಗೆಳೆಯುವ, ಅಧಿಕಾರದ ದುರ್ಬಳಕೆ, ಬ್ಲಾಕ್‌ಮೇಲ್, ಹನಿಟ್ರಾಪ್ ಎಂಬ ಹಲವು ಆಯಾಮಗಳು ಚರ್ಚೆಗೆ ಬಂದವು. ಈ ಹಂತದಲ್ಲಿ ಮೊದಲು ದೂರು ಕೊಟ್ಟವರು ರಾಜಕಾರಣಿಗಳ ಮಾತಿನ ನೆವ ಮುಂದುಮಾಡಿ ದೂರು ವಾಪಸ್ ತೆಗೆದುಕೊಂಡ ಘಟನೆಯೂ ನಡೆಯಿತು. ಮಾಧ್ಯಮಗಳಿಗೆ ರಸಗವಳ ಸಿಕ್ಕಂತೆ ಬಿತ್ತರಿಸಿದ ಸುದ್ದಿಗೆ ಜಾರಕಿಹೊಳಿಯವರ ಜೊತೆ 'ಅನರ್ಹ ಶಾಸಕರು'ಎಂಬ ಹಣೆಪಟ್ಟಿ ಹೊತ್ತ ಇನ್ನಾರು ಸಚಿವರು ತಮ್ಮ ಬಗ್ಗೆ ಸಿ.ಡಿ. ಗಳನ್ನು ಪ್ರದರ್ಶಿಸಬಾರದಂತೆ ಮಾಧ್ಯಮಗಳಿಗೆ ತಡೆ ನೀಡಬೇಕೆಂದು ನ್ಯಾಯಾಲಯದ ಮೊರೆ ಹೋದ ಮತ್ತು ನ್ಯಾಯಾಲಯವೊಂದು ಲೈಂಗಿಕ ದೌರ್ಜನ್ಯದ ಆರೋಪ,ಅಧಿಕಾರ ದುರ್ಬಳಕೆಯ ಆರೋಪದ ಸಿ.ಡಿ. ಪ್ರಕರಣದಲ್ಲಿ ಸುದ್ದಿ ಪ್ರಕಟಿಸದಂತೆ ಸಾರಾಸಗಟಾಗಿ ಅನೇಕ ಮಾಧ್ಯಮಗಳ ಮೇಲೆ ಮಧ್ಯಂತರ ಆದೇಶ ಕೊಟ್ಟ ಗಾಬರಿಯ ಸಂಗತಿಯೂ ನಡೆದು ಹೋಗಿದೆ.



ಸುದ್ದಿಗೋಷ್ಠಿಯನ್ನುದೇಶಿಸಿ ಮಾತನಾಡಿದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್ ವಿಮಾಲ ಮಾತನಾಡಿ ದೇಶದ ಸಂವಿಧಾನ ದೇಶದ ಎಲ್ಲ ಜನರಿಗೆ ಸಮಾನ ಅವಕಾಶ ಸಮಾನ ಅಧಿಕಾರ ಮತ್ತು ಘನತೆಯ ಬದುಕುನ್ನು ಖಾತ್ರಿಪಡಿಸುತ್ತದೆ. ಇದನ್ನು ಯಥಾವತ್ತಾಗಿ ಜಾರಿಗೆ ತರುವ ಮತ್ತು ಮಹಿಳೆಯರ ಸುರಕ್ಷೆಯನ್ನು ಖಾತ್ರಿ ಪಡಿಸುವ ಜವಾಬ್ದಾರಿ ಯಾವುದೇ ಸರಕಾರದ್ದಾಗಿರುತ್ತದೆ. ಮತ್ತು ಸರಕಾರದ ಸಚಿವರು, ಶಾಸಕರು ಈ ವಿಷಯಗಳಲ್ಲಿ ಮಾದರಿಗಳಾಗಿ ನಿಲ್ಲಬೇಕು. ಆದರೆ ಕರ್ನಾಟಕದಲ್ಲಿ ನಡೆಯುತ್ತಿರುವ ಘಟನೆಗಳು ಅದಕ್ಕೆ ವ್ಯತಿರಿಕ್ತವಾಗಿವೆ. ಹಲವಾರು ಸಮಾಜ ಸುಧಾರಕರು, ಬ್ರಿಟಿಷರ ವಿರುದ್ಧ ಜೀವದ ಹಂಗು ತೊರೆದು ಸೆಣಸಿದ ರಾಣಿಯರೂ ಸೇರಿದಂತೆ ಸ್ವಾತಂತ್ರ ಹೋರಾಟಗಾರರು ಸಾಮಾಜಿಕ ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಕೊಟ್ಟ, ಕೊಡುತ್ತಿರುವ ಹಲವಾರು ಮಹಿಳೆಯರ ಶ್ರೀಮಂತ ಇತಿಹಾಸವಿದೆ. ಆದರೆ ಅವೆಲ್ಲವನ್ನು ಗೌರವಿಸಬೇಕಾದ ಶಾಸಕರೇ ಮಹಿಳೆಯರು ಮತ್ತು ಯುವತಿಯರನ್ನು ಕೀಳಾಗಿ ಬಿಂಬಿಸುತ್ತಿರುವುದು, ಹಗುರವಾಗಿ ನಡೆದುಕೊಳ್ಳುತ್ತಿರುವುದು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿದ್ದು ಕಳಂಕ ತರುವಂತಿದೆ ಎಂದು ಕೆ. ಎಸ್ ವಿಮಲಾ ಆರೋಪಿಸಿದ್ದಾರೆ.

ಇನ್ನು ಸುದ್ದಿಗೋಷ್ಠಿ ಉದೇಶಿಸಿ ಮಾತನಾಡಿದ ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆಯ ಗಾಂಧಿಮತಿ ಮಾತನಾಡಿ ಸರಕಾರವು ವಿಶೇಷ ತನಿಖಾ ತಂಡವೊಂದನ್ನು ನೇಮಿಸಿದೆ. ದುರಂತವೆಂದರೆ ಈ ತನಿಖಾ ತಂಡ ಒಂದು ನಿಷ್ಪಕ್ಷಪಾತ ತನಿಖೆ ನಡೆಸಿ ಸತ್ಯವನ್ನು ಬಯಲಿಗೆಳೆಯುವ ಸಂಭವ ಕಡಿಮೆ ಎನಿಸುತ್ತಿದೆ. ಈ ಪ್ರಕರಣವನ್ನು ಕಾನೂನಿನ ಚೌಕಟ್ಟಿನಲ್ಲಿ ತನಿಖೆ ಮಾಡಿ ಅಮೂಲಾಗ್ರ ಶೋಧನೆಯನ್ನು ಜನರ ಮುಂದಿಡುವ ಹೊಣೆಗಾರಿಕೆ ಎಸ್.ಐ.ಟಿ.ಯದಾಗಬೇಕು. ಆದರೆ ಮೊದಲ ದಿನದಿಂದಲೇ ಅದು ಹಿಡಿದ ಜಾಡು ಸತ್ಯ ಶೋಧನೆಯ ಬದಲು ಸಂಚು ಬಯಲು ಮಾಡುವ ದಾರಿಯಾಗಿ ಕಾಣುತ್ತಿದೆ. ಮಾಜಿ ಸಚಿವರ ಕೋರಿಕೆಯನ್ನಾಧರಿಸಿ, ಲಿಖಿತವಾಗಿ ದೂರು ಕೊಡುವ ಮೊದಲೇ ಗೃಹ ಸಚಿವರು ಕ್ರಮಕ್ಕೆ ಮುಂದಾದರು. ಪೋಲೀಸರು ಎಫ್.ಐ.ಆರ್. ದಾಖಲಿಸಿಕೊಂಡರು ಕೂಡಾ. ನಂತರ ಸತ್ಯದ ಹುಡುಕಾಟದ ಬದಲು ಸುಳ್ಳನ್ನು ಸಾಬೀತು ಮಾಡುವುದು ಹೇಗೆ ಎಂಬ ಎಂದಿನ ಮಹಿಳಾ ವಿರೋಧೀತನಕ್ಕೆ ಶರಣಾಗಿರುವುದು ಎದ್ದು ಕಾಣುತ್ತಿದೆ. ಮತ್ತು ಸಿ.ಡಿ. ಮಾಡಿದ್ದು ಯಾರು, ಅದು ಸಾಮಾಜಿಕ ಜಾಲತಾಣಕ್ಕೆ ಅಪ ಲೋಡ್ ಆಯಿತು ಹೇಗೆ ಎಂಬುದರ ಸುತ್ತವೇ ಗಿರಕಿ ಹೊಡೆಯುತ್ತಿದೆ. ಸಾಲದೆಂಬಂತೆ ಯುವತಿಯು ಎಸ್.ಐ.ಟಿ.ಯ ಮುಂದೆ ಬರುತ್ತಿಲ್ಲವೆನ್ನುವುದೇ ಆಕೆ ಸುಳ್ಳು ಹೇಳುತ್ತಿದ್ದಾಳೆ ಎಂಬುದಕ್ಕೆ ಪುರಾವೆ ಎಂಬಿತ್ಯಾದಿ ಮಾತುಗಳೂ ಕೇಳಿ ಬಂದಿವೆ. ಈಗ ಯುವತಿ ತನಗೆ ಮತ್ತು ತನ್ನ ಪೋಷಕರಿಗೆ ಜೀವ ಬೆದರಿಕೆ ಇದೆ ಎಂದು ತಿಳಿಸಿ ಸ್ವ ಹಸ್ತಾಕ್ಷರದ ದೂರನ್ನು ವಕೀಲರ ಮೂಲಕ ಕಳಿಸಿದ್ದಾರೆ ಮತ್ತು ಅದರ ಕಾರಣದಿಂದ ಎಫ್.ಐ.ಆರ್.ದಾಖಲಾಗಿದೆ. ಆದರೆ ಆರೋಪಿಯ ಸ್ಥಾನದಲ್ಲಿರುವ ಪ್ರಭಾವಿ ವ್ಯಕ್ತಿಯ ಠೇಂಕಾರವೇನೂ ಕಡಿಮೆಯಾಗಿಲ್ಲ. ಯುವತಿಯು ತನ್ನನ್ನು ನಂಬಿಸಿ ವಂಚಿಸಲಾಗಿದೆ ಎಂದು ಹೇಳುತ್ತಿದ್ದು ಅದನ್ನಾಧರಿಸಿ ತನಿಖೆಗಳು ನಡೆಯಬೇಕೇ ➚

ಬಿಎಂಟಿಸಿ ಖಾಸಗೀಕರಣಕ್ಕೆ ನೌಕರರ ಫೆಡರೇಷನ್ ತೀವ್ರ ವಿರೋಧ



ರಾಜ್ಯ ಸರ್ಕಾರ ಬೆಂಗಳೂರು ನಗರದಲ್ಲಿ ಖಾಸಗೀ ಬಸ್ಸುಗಳಿಗೆ ಟೆಂಡರ್ ಕರೆಯುವ ಮೂಲಕ ಬಿಎಂಟಿಸಿಯನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಗೆ ಮುಂದಾಗಿದೆ ಎಂದು ಕರಾರಸಾನಿಗಮಗಳ ನೌಕರರ ಫೆಡರೇಶನ್ (ಸಿಐಟಿಯು)ಆರೋಪಿಸಿದೆ.

ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರ ಬಿಎಂಟಿಸಿ ಖಾಸಗೀಕರಣ ಮಾಡುವ ಪ್ರಕಿಯೆಯ ಭಾಗವಾಗಿ ಎಪ್ರಿಲ್ ತಿಂಗಳಲ್ಲಿ ತತ್ಕಾಲಿಕವಾಗಿ ಹಾಗೂ 1500 ಬಸ್ಸುಗಳನ್ನು ಗುತ್ತಿಗೆ ಆಧಾರಿತವಾಗಿ ಖಾಸಗೀಯವರಿಗೆ ನೀಡಲು ಆಡಳಿತ ವರ್ಗದ ಮೂಲಕ ಟೆಂಡರ್ ನ್ನು ಕರೆಯಲಾಗಿದೆ. ಬಿಜೆಪಿ ಸರ್ಕಾರವು ಬಿಎಂಟಿಸಿ ನಿಗಮವನ್ನು ಹಂತ–ಹಂತವಾಗಿ ಖಾಸಗೀಕರಣ ಮಾಡಲು ಹೊರಟಿರುವ ಹುನ್ನಾರವಾಗಿದೆ ಎಂಬುದು ಫೆಡರೇಷನ್ ನ ಆರೋಪವಾಗಿದೆ.

ಬಿಎಂಟಿಸಿ ಇಡೀ ದೇಶದಲ್ಲಿಯೇ ಅತ್ಯಂತ ಉತ್ತಮ ನಗರ ಸಾರಿಗೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ನೀತಿಗಳಿಂದಾಗಿ ಬಿಎಂಟಿಸಿಯು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರಿಗೆ ನಿಗಮಗಳಿಗೆ ನೀಡುತ್ತಿದ್ದ ಎಲ್ಲಾ ನೆರವುಗಳನ್ನು ಸಂಪೂರ್ಣವಾಗಿ ನಿಲ್ಲಿಸಿವೆ. ಡೀಸಲ್ ಮೇಲೆ 1 ಲೀಟರ್ ಗೆ 45 ರೂಗಳು ತೆರಿಗೆ ಪಡೆಯುತ್ತಿವೆ. ಹಾಗೂ ಇತರೆ ಬಿಡಿಭಾಗಗಳಿಗೆ ಎಕ್ಸೈಸ್ ಡ್ಯೂಟಿ ಹೆಚ್ಚಿಸಲಾಗಿದೆ. ವಿದ್ಯಾರ್ಥಿ ಮತ್ತಿತರೆ ಹತ್ತಾರು ವಿಧದ ರಿಯಾಯಿತಿ ಪಾಸುಗಳನ್ನು ನೀಡಲಾಗಿದೆ. ಸರ್ಕಾರ ಮತ್ತು ಆಡಳಿತ ವರ್ಗ ರೂಪಿಸುವ ನೀತಿಗಳ ಆಧಾರದಲ್ಲಿ ಬೆಂಗಳೂರಿನ ಜನತೆಗೆ ಅತ್ಯುತ್ತಮ ಸೇವೆಯನ್ನು ಒದಗಿಸಲಾಗುತ್ತಿದೆ. ವಿದ್ಯಾರ್ಥಿ ಮತ್ತಿತರೆ ರಿಯಾಯಿತಿ ಪಾಸಿನ ಬಾಬ್ತು ಸರ್ಕಾರ ಕೊಡಬೇಕಾಗಿರುವ ಬಾಕಿ ಹಣವನ್ನು ನೀಡುತ್ತಿಲ್ಲ. ಬಿಎಂಟಿಸಿಯು ಸುಮಾರು 1250 ಎಕರೆ ಜಮೀನನ್ನು ಬೆಂಗಳೂರು ನಗರದಲ್ಲಿ ಹೊಂದಿದೆ. ಹತ್ತಾರು ಬೃಹತ್ ಕಟ್ಟಡಗಳು, ಬಸ್ ನಿಲ್ದಾಣಗಳು, 50 ಬಸ್ ಡಿಪೋಗಳು, 6500 ಬಸ್ಸುಗಳು ಹಾಗೂ ಸುಮಾರು 35000 ಕಾರ್ಮಿಕರನ್ನು ಹೊಂದಿರುವ ಬೃಹತ್ ಸಂಸ್ಥೆಯಾಗಿದೆ. ಬೆಂಗಳೂರು ನಗರ ಹಾಗೂ ಸುತ್ತ– ಮುತ್ತಲ ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ಬೆಂಗಳೂರು ನಗರದ ಜನರ ಮನ್ನಣೆಯನ್ನು ಗಳಿಸಿರುವ ಇಂತಹ ಬೃಹತ್ ಸಂಸ್ಥೆಯನ್ನು ಖಾಸಗೀಕರಣ ಮಾಡಲು ಹೊರಟಿರುವ ಬಿಜೆಪಿ ಸರ್ಕಾರ ಬೆಂಗಳೂರು ಮತ್ತು ಈ ರಾಜ್ಯದ ಜನತೆಗೆ ದ್ರೋಹ ಮಾಡಲು ಹೊರಟಿದೆ ಎಂದು ಕರಾರಸಾನಿಗಮಗಳ ನೌಕರರ ಫೆಡರೇಶನ್ ಅಧ್ಯಕ್ಷರಾದ ರೇವಪ್ಪ ಆರೋಪಿಸಿದ್ದಾರೆ.

ಸಾರಿಗೆ ಕಾರ್ಮಿಕರು ತಮಗೆ ಕಳೆದ ಹಲವು ದಶಕಗಳಿಂದ ವೇತನದಲ್ಲಿ ಅನ್ಯಾಯವಾಗಿದೆ ಅದಕ್ಕಾಗಿ ವೇತನ ಹೆಚ್ಚಳ ಮಾಡಬೇಕೆಂದು ತೀವ್ರ ಪ್ರತಿಭಟನೆಗೆ ಮುಂದಾಗಿರುವ ಈ ಸಂದರ್ಭದಲ್ಲಿ ಅವರ ಬೇಡಿಕೆಗಳನ್ನು ಈಡೇರಿಸುವ ಬದಲು ಈ ಸಂದರ್ಭವನ್ನೆ ಬಳಸಿ ಖಾಸಗೀ ಬಸ್ಸುಗಳಿಗೆ ಅವಕಾಶ ನೀಡಲು ಹೊರಟಿದೆ. ಇದಲ್ಲದೆ ಕೇಂದ್ರ ಸರ್ಕಾರವೂ ಸಹ ಎಂವಿ ಕಾಯ್ದೆ ತಿದ್ದುಪಡಿ ಮಾಡಿ ಈ ದೇಶದ ಎಲ್ಲಾ ಸಾರಿಗೆ ನಿಗಮಗಳನ್ನು ಸಂಪೂರ್ಣ ಖಾಸಗೀಕರಣ ಮಾಡಲು ಯೋಜನೆ ರೂಪಿಸಿದೆ. ಇತ್ತೀಚೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸತ್ ಸದಸ್ಯ ತೇಜಸ್ವಿ ಸೂರ್ಯ ಬಿಎಂಟಿಸಿ ಯನ್ನು ಖಾಸಗೀಕರಣ ಮಾಡವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಒಟ್ಟಾರೆ ಬಿಜೆಪಿ ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಸಹ ಬಿಎಂಟಿಸಿ ಮತ್ತು ಇತರೆ ಸಾರಿಗೆ ನಿಗಮಗಳನ್ನು ಖಾಸಗೀಯವರಿಗೆ ಹರಾಜು ಮಾಡಲು ಟೆಂಡರ್ ಪ್ರಕ್ರಿಯೆ ಆರಂಭಿಸಿದ್ದಾರೆ. ಈ ರಾಜ್ಯದ ಮತ್ತು ಬೆಂಗಳೂರಿನ ಜನತೆಗೆ ಮೂಲಭೂತ ಸೌಕರ್ಯಗಳಲ್ಲಿ ಅತೀ ಮುಖ್ಯವಾದ ಸಾರಿಗೆ ಸೌಕರ್ಯವನ್ನು ಒದಗಿಸಬೇಕಾಗಿರುವುದು ಸರ್ಕಾರದ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಕರಾರಸಾನಿಗಮಗಳ ನೌಕರರ ಫೆಡರೇಶನ್ ಉಪಾಧ್ಯಕ್ಷರಾದ ಡಾ. ಕೆ. ಪ್ರಕಾಶ್ ತಿಳಿಸಿದ್ದಾರೆ.

ಸರ್ಕಾರ ಈ ರಾಜ್ಯದ ನಗರ ಮತ್ತು ಹಳ್ಳಿಗಳಿಗೆ ಅತ್ಯುತ್ತಮ ಸೇವೆ ಒದಗಿಸುತ್ತಾ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪಾಸುಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಣೆ ಮಾಡುತ್ತಿರುವ ಬೃಹತ್ ಸಾರಿಗೆ ನಿಗಮಗಳನ್ನು ಖಾಸಗೀಕರಣ ಮಾಡುವ ಮೊದಲನೇ ಭಾಗವಾಗಿ ಬೆಂಗಳೂರು ನಗರದಲ್ಲಿ ಖಾಸಗೀ ವಾಹನಗಳಿಗೆ ಅವಕಾಶ ಕಲ್ಪಿಸಲು ಹೊರಟಿದೆ. ಬೆಂಗಳೂರಿನಲ್ಲಿ 1500 ಬಸ್ಸುಗಳನ್ನು ಓಡಿಸಲು ಬಿಎಂಟಿಸಿ ಆಡಳಿತ ವರ್ಗ ಟೆಂಡರ್ ಕರೆದಿರುವುದರ ವಿರುದ್ಧ ಬಿಎಂಟಿಸಿ ಮತ್ತು ಇತರೆ ಸಾರಿಗೆ ನಿಗಮಗಳ ನೌಕರರು ತೀವ್ರವಾದ ಚಳುವಳಿಗಳನ್ನು ನಡೆಸುತ್ತೇವೆ. ಕೂಡಲೆ ರಾಜ್ಯ ಸರ್ಕಾರ ಬಿಎಂಟಿಸಿ ಖಾಸಗೀಕರಣದ ಪ್ರಕ್ರಿಯೆಯನ್ನು ಕೂಡಲೆ ನಿಲ್ಲಿಸಬೇಕೆಂದು ಕರಾರಸಾನಿಗಮಗಳ ನೌಕರರ ಫೆಡರೇಶನ್ (ಸಿಐಟಿಯು) ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಮಂಜುನಾಥ್ ತಿಳಿಸಿದ್ದಾರೆ.

ಹೊರತೂ ಆರೋಪಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಅಲ್ಲ ಎಂದು ಸರ್ಕಾರವನ್ನು ದೂರಿದ್ದಾರೆ.

ಸುದ್ದಿಗೋಷ್ಠಿ ಉದೇಶಿಸಿ ಮಾತನಾಡಿದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕೆ.ಎಸ್. ಲಕ್ಷ್ಮೀ ಮಾತನಾಡಿ ಯುವತಿಯ ಎರಡು ವಿಡಿಯೋಗಳು ಹರಿದಾಡುತ್ತಿವೆ. ಈಗ ಹರಿದಾಡುತ್ತಿರುವ ವಿಡಿಯೋದಲ್ಲಿ ತನಗೆ ಮತ್ತು ತನ್ನ ಪೋಷಕರಿಗೆ ರಕ್ಷಣೆ ದೊರೆಯುವುದಾದರೆ ತಾನು ಎಸ್.ಐ.ಟಿ ಎದುರು ಬರಲು ಸಿದ್ಧವೆಂದು ವಿಡಿಯೋದಲ್ಲಿರುವ ಯುವತಿ ಹೇಳುತ್ತಿದ್ದಾರೆ. ಎಸ್.ಐ.ಟಿ.ಯು ಕಾನೂನಿನನ ಅನ್ವಯ ನಡೆದುಕೊಳ್ಳಬೇಕೇ ಹೊರತೂ ಅಧಿಕಾರದಲ್ಲಿರುವವರ ಆಣತಿಯಂತೆ ಅಲ್ಲ. ಇಂಥಹ ಪ್ರಕರಣಗಳಲ್ಲಿ ಬಲಾಢ್ಯರ,ಅಧಿಕಾರಸ್ಥರನ್ನು ಎದುರು ಹಾಕಿಕೊಂಡವರಿಗೆ ಜೀವ ಬೆದರಿಕೆಗಳೂ ಇರುತ್ತವೆ ಎಂಬುದು ತಿಳಿಯದ ಸಂಗತಿಯಲ್ಲ. ಅವರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ಎಸ್.ಐ.ಟಿ ಯು ಕಾರ್ಯೋನ್ಮುಖವಾಗಬೇಕು. ಬಹುಷಃ ಇಂಥಹ ಯಾವುದೇ ಪ್ರಕರಣವನ್ನು ತನಿಖೆಗೆ ಕೈಗೆತ್ತಿಕೊಳ್ಳುವ ಅಧಿಕಾರಿಗಳು ಜಸ್ಟೀಸ್ ವರ್ಮಾ ಸಮಿತಿ ನೀಡಿದ ವರದಿಯನ್ನೊಮ್ಮೆ ಓದಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ನಾವು ಭಾವಿಸುತ್ತೇವೆ. ಈ ಸಮಾಜದಲ್ಲಿ ಆಳವಾಗಿ ಬೇರೂರಿರುವ ಮಹಿಳಾ ವಿರೋಧೀ, ಪಿತೃಪ್ರಧಾನ, ಪುರುಷಾಧಿಕಾರದ ಮೌಲ್ಯಗಳನ್ನು ಮತ್ತೆ ಮತ್ತೆ ಎತ್ತಿ ತೋರಿಸುವ ಈ ರೀತಿಯ ನಡೆ, ನಿಲುವುಗಳು ಖಂಡನೀಯ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಈ ವೇದಿಕೆ ಮೂಲಕ ಸರಕಾರಕ್ಕೆ ಈ ಕೆಳಗಿನಂತೆ ಒತ್ತಾಯಿಸಿದ್ದಾರೆ.

* ಪ್ರಕರಣದ ಆರೋಪಿ ಮತ್ತು ಅವರ ಬೆಂಬಲಿಗರು ಆಳುವ ಪಕ್ಷದ ಭಾಗ ಮತ್ತು ಪ್ರಭಾವೀ ವ್ಯಕ್ತಿಯಾಗಿರುವುದರಿಂದ ಸರಕಾರದ ಅಧೀನದಲ್ಲಿ ಕೆಲಸ ಮಾಡಬೇಕಾಗಿರುವ ವಿಶೇಷ ತನಿಖಾ ತಂಡ ನಿಷ್ಪಕ್ಷಪಾತ ತನಿಖೆ ನಡೆಸಲಾರದು ಎಂಬ ಬಲವಾದ ಅನುಮಾನಗಳಿವೆ. ಈ ಕಾರಣದಿಂದ ಈ ಪ್ರಕರಣದ ತನಿಖೆಯನ್ನು ಉಚ್ಛ ನ್ಯಾಯಾಲಯದ ಸುಪರ್ದಿಯಲ್ಲಿ ನಡೆಸಬೇಕು.
* ನಿರ್ಭಯಾ ಕಾನೂನು/ಕ್ರಿಮಿನಲ್ ಲಾ ತಿದ್ದುಪಡಿಯ ಪ್ರಕಾರ ಅತ್ಯಾಚಾರದ ಪ್ರಕರಣಗಳಿಗೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಅನ್ವಯಿಸಬೇಕು
* ಕಾನೂನು ದೇಶದ ಎಲ್ಲ ಜನರಿಗೆ ಒಂದೇ ಆಗಿರುವುದರಿಂದ ಈ ಪ್ರಕರಣದ ಆರೋಪಿಯನ್ನೂ ಕೂಡಾ ಕಟ್ಟುನಿಟ್ಟಾದ ಕಾನೂನು ಪ್ರಕ್ರಿಯೆಗೆ ಒಳಪಡಿಸಬೇಕು.
* ದೂರುದಾರರಿಗೆ ಸೂಕ್ತ ರಕ್ಷಣೆ ಒದಗಿಸಬೇಕು.
* ಪ್ರಕರಣವು ದಿನಕ್ಕೊಂದು ತಿರುವು ತೆಗೆದುಕೊಳ್ಳುತ್ತಿದ್ದು ರಾಜಕೀಯ ಮೇಲಾಟದಲ್ಲಿ ಮಹಿಳೆಯರನ್ನು ಕೀಳಾಗಿ ಬಳಸಿಕೊಳ್ಳುವುದಕ್ಕೆ ಲಗಾಮು ಹಾಕಬೇಕು.
* ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು.
* ಸಚಿವರೊಬ್ಬರ ಮೇಲೆ ಬಂದ ಆರೋಪವನ್ನು ತಳ್ಳಿ ಹಾಕುವ ಮತ್ತದನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಮಹಿಳೆಯರ ಹಾಗೂ ಆ ಮೂಲಕ ಶಾಸನ ಸಭೆಯ ಘನತೆಗೆ ಕುಂದುಂಟು ಮಾಡುವಂತೆ ಮಾತನಾಡಿದ ಸಚಿವ ಡಾ. ಸುಧಾಕರ್ ರವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಕ್ಷೇತ್ರದಲ್ಲಿರುವವರು ಸಾರ್ವಜನಿಕರಿಗೆ ಉತ್ತರದಾಯಿತ್ವವನ್ನು ಹೊಂದಿರುತ್ತಾರೆ. ಅವರು ಶಾಸನಸಭೆಯ ಕಲಾಪಗಳನ್ನು ಜನರ ಪ್ರಶ್ನೆಗಳ ಆಧಾರದಲ್ಲಿ ಚರ್ಚೆಗೆ ಮೀಸಲಿಡದೇ ಮನ ಬಂದಂತೆಲ್ಲ ವರ್ತಿಸುವುದು ಸರಿಯಲ್ಲ. ಇದು ಅವರ ಖಾಸಗೀ ಸಂಗತಿಗಳಲ್ಲ.
* ಸುದ್ದಿ ಮಾಧ್ಯಮಗಳು ಮಹಿಳಾವಿರೋಧೀ, ಸೆಕ್ಸೀಸ್ಟ್ ನೆಲೆಯಲ್ಲಿ ಸುದ್ದಿಗಳನ್ನು ಪ್ರಸಾರ ಮಾಡುತ್ತಿರುವುದನ್ನು ಪ್ರೆಸ್ ಕೌನ್ಸಿಲ್ ಗಂಭೀರವಾಗಿ ಪರಿಗಣಿಸಬೇಕು. ■

ಉದ್ಯೋಗ ಖಾತ್ರಿ ಯೋಜನೆಯ ಕೂಲಿಕಾರರಿಗೆ ವೇತನ ಹೆಚ್ಚಿಸಲು ಆಗ್ರಹಿಸಿ ಪ್ರತಿಭಟನೆ



ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ರಾಷ್ಟ್ರೀಯ ಗ್ರಮೀಣ ಉದ್ಯೋಗ ಖಾತ್ರಿ ಕೆಲಸಗಾರರಿಗೆ ದಿನಕ್ಕೆ 600 ರೂ. ವೇತನ, ವಾರ್ಷಿಕ 200 ದಿನಗಳ ಕೆಲಸ ಹಾಗೂ ನಗರ ಪ್ರದೇಶಕ್ಕೆ ನರೇಗಾ ಯೋಜನೆ ವಿಸ್ತರಣೆಗೆ ಒತ್ತಾಯಿಸಿ ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಎದುರು ಕೂಲಿಕಾರರು ಪ್ರತಿಭಟನೆ ಮೂಲಕ ರಾಜ್ಯ ಸರಕಾರಕ್ಕೆ ಸಾಮೂಹಿಕವಾಗಿ ಮನವಿ ಸಲ್ಲಿಸಲಾಯಿತು. ಇದಕ್ಕೂ ಮೊದಲು ಕಾರ್ಮಿಕ ಭವನದಲ್ಲಿ ಜರಗಿದ ಕೃಷಿಕೂಲಿಕಾರರ ಬೃಹತ್ ಸಮಾವೇಶವನ್ನು ಕಾರ್ಮಿಕ ಮುಖಂಡ ಎಚ್. ನರಸಿಂಹ ಉದ್ಘಾಟಿಸಿ ಮಾತನಾಡುತ್ತಾ, ಕರೊನಾ ಸಂಕಷ್ಟದ ಪರಿಹಾರ ಧನವನ್ನು ಬಿಡುಗಡೆ ಮಾಡದ ಸರಕಾರದ ನೀತಿಯನ್ನು ಖಂಡಿಸಿದರು. ಈ ಕೂಡಲೇ ಪರಿಹಾರ ಧನವನ್ನು ಎಲ್ಲಾ ಕೃಷಿಕೂಲಿಕಾರರಿಗೆ ಬಿಡುಗಡೆಗೆ ಒತ್ತಾಯಿಸುವುದಕ್ಕಾಗಿ ಸಂಘಟಿತ ಹೋರಾಟಕ್ಕೆ ಮುಂದಾಗಬೇಕು ಎಂದು ಹೇಳಿದರು. ಕೃಷಿಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ, ಮಹಾಬಲ ವಡೇರ ಹೋಬಳಿ, ನಾಗರತ್ನ ನಾಡ, ಬಲ್ಕೀಸ್ ಮೊದಲಾದವರು ಉಪಸ್ಥಿತರಿದ್ದರು.

ಕೋವಿಡ್ ಸಾಂಕ್ರಾಮಿಕದ ಅಪಾಯ ಮನಗಾಣದ ಆರೋಗ್ಯಕ್ಕೆ ಗಮನ ನೀಡದ............ ಪುಟ 3 ರಿಂದ

ಹಸಿವಿನ ಕುರಿತು ಬಿಜೆಪಿ ಸರ್ಕಾರಕ್ಕೆ ಕಾಳಜಿ ಇಲ್ಲದಿರುವುದನ್ನು ತೋರುತ್ತದೆ.

ಪ್ರಸಕ್ತ ಸಾಲಿನ ಆಯ–ವ್ಯಯವು ವಾಸ್ತವಿಕ ಅಂದಾಜಿನ ಆಯ–ವ್ಯಯವಾಗಿದೆ ಎಂಬ ಬಿಬಿಎಂಪಿ ಆಯುಕ್ತರ ಹೇಳಿಕೆಯು ಈ ಹಿಂದಿನ ಬೃಹತ್ ಗಾತ್ರದ ಬಿಜೆಪಿ ಆಡಳಿತಾವಧಿಯ ಬಿಬಿಎಂಪಿ ಬಜೆಟ್ ಅವಾಸ್ತವಿಕವಾಗಿತ್ತು ಎಂಬುದನ್ನು ಬಹಿರಂಗ ಪಡಿಸಿದೆ.

ಯಾವುದೇ ತೆರಿಗೆಯ ಹೊರೆಯು ಬಜೆಟ್ ನಲ್ಲಿ ಇಲ್ಲ ಎಂದು ಹೇಳುತ್ತಿರುವಾಗಲೇ ಬಿಬಿಎಂಪಿ ಗೆ ನಿರೀಕ್ಷಿಸಲಾಗಿರುವ ಆದಾಯದ ಪಟ್ಟಿಯಲ್ಲಿನ ನಗರ ಭೂಸಾರಿಗೆ ಕರದಿಂದ 50 ಕೋಟಿ ರೂ, ಭಿಕ್ಷುಕರ ಕರದಿಂದ 84 ಕೋಟಿ ರೂ, ಗ್ರಂಥಾಲಯ ಕರದಿಂದ 168 ಕೋಟಿ ರೂಗಳ ಆದಾಯ ಮತ್ತು ಆರೋಗ್ಯ ಕರ 420 ಕೋಟಿ, ಘನತ್ಯಾಜ್ಯ ನಿರ್ವಹಣ ಕರ 80 ಕೋಟಿ ರೂ ಮತ್ತು ಅಭಿವೃದ್ಧಿ ಸುಧಾರಣಾ ಶುಲ್ಕ 120 ಕೋಟಿ ರೂ ಮತ್ತು ಪಾರ್ಕಿಂಗ್ ಶುಲ್ಕ 2.30 ಕೋಟಿ ರೂಗಳ ಆದಾಯವು ಜನತೆಯ ಮೇಲೆ ಹೊರೆ ಹೊರಿಸುವ ಪರೋಕ್ಷ ಪ್ರಕಟಣೆಗಳಾಗಿವೆ ಎಂದು ಸಿಪಿಐ(ಎಂ) ವ್ಯಾಖ್ಯಾನಿಸಿದೆ.

ರಾಜ್ಯ ಬಿಜೆಪಿ ಸರ್ಕಾರದ "ಬೆಂಗಳೂರು ಮಿಷಿನ್ 2022" ಎಂಬ ನಯವಂಚಕ ಪ್ರಕಟಣೆಗೆ ಪೂರಕವಾಗಿ ಘನತ್ಯಾಜ್ಯ ನಿರ್ವಹಣೆಯನ್ನು ಪ್ರತ್ಯೇಕ ಕಂಪನಿ ಸ್ಥಾಪನೆ ಮೂಲಕ ನಿರ್ವಹಿಸಿ ಮಹಾನಗರದ ಜನತೆಯ ಮೇಲೆ ಬಳಕೆದಾರರ ಶುಲ್ಕವನ್ನು ವಿಧಿಸುವ ಕ್ರಮಕ್ಕೆ ಬಿಬಿಎಂಪಿ ಆಯ–ವ್ಯಯವು ಪೂರಕವಾಗಿದೆ.

ಅದೇ ರೀತಿ ಕೇಂದ್ರ ಬಿಜೆಪಿ ಸರ್ಕಾರದ ಅಣತಿಯಂತೆ ಆಸ್ತಿಗಳ "ಬಂಡವಾಳ ಮೌಲ್ಯ ಮಾಪನ ವ್ಯವಸ್ಥೆ" ಯನ್ನು ಜಾರಿಗೆ ತರುವ ಪರೋಕ್ಷ ಆಸ್ತಿ–ತೆರಿಗೆ ಹೆಚ್ಚಳದ ಮುಖೇನ ಸಂಪನ್ಮೂಲ ಕ್ರೋಢೀಕರಣದ ವೃದ್ಧಿಗೆ ಈ ಬಜೆಟ್ ನಾಂದಿ ಹಾಡಲಿದೆ. ಬಿಬಿಎಂಪಿ ಯ ಅಂಗಡಿ ಮತ್ತು ವಾಣಿಜ್ಯ ಸಂಕೀರ್ಣಗಳ ಬಾಡಿಗೆಗಳನ್ನು ಪರಿಷ್ಕರಿಸದೆ ಕೇವಲ 38 ಕೋಟಿ ರೂಗಳ ಆದಾಯವನ್ನು ಅದರಿಂದ ನಿರೀಕ್ಷಿಸಿ ಅವುಗಳ ರಿಪೇರಿ ಮತ್ತು ನಿರ್ವಹಣೆಗೆ 12 ಕೋಟಿ ರೂಗಳನ್ನು ಖರ್ಚು ಮಾಡುವಂತಹ ದಿವಾಳಿಕೋರ ಬಜೆಟ್ ಅನ್ನು ಮಂಡಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಇದ್ದ ಪರ್ಯಾಯ ಅವಕಾಶಗಳನ್ನು ಬಳಸುವಲ್ಲಿ ವಿಫಲವಾಗಿರುವ ಬಿಬಿಎಂಪಿ ಬಜೆಟ್ ಜನತೆಯ ಮೇಲೆ ಹೊರೆ ಹೊರಿಸಲಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಲಜ್ಜೆಗೆಟ್ಟ ರಾಜಕಾರಣವೂ ಮಾನಗೆಟ್ಟ ಮಾಧ್ಯಮವೂ

ಅತಿಥಿ ಅಂಕಣ



ನಾ ದಿವಾಕರ

ಅತ್ಯಾಚಾರಕ್ಕೊಳಗಾದ ಮಹಿಳೆಯ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರಗಳು ಯಾವುದೇ ನಾಗರಿಕ ಸಮಾಜವನ್ನು ನಾಚಿ ತಲೆ ತಗ್ಗಿಸುವಂತೆ ಮಾಡಿವೆ. ಇಡೀ ಪ್ರಕರಣದ ಕೇಂದ್ರ ಬಿಂದು ಆರೋಪಿಯಾಗಿರಬೇಕು ಆದರೆ ಇಲ್ಲಿ ಸಂತ್ರಸ್ತೆಯೇ ಕೇಂದ್ರ ಬಿಂದುವಾಗಿದ್ದಾರೆ. ಆಕೆ ತನ್ನ ಮೇಲಾದ ದೌರ್ಜನ್ಯವನ್ನು ನ್ಯಾಯ ವ್ಯವಸ್ಥೆಯ ಮುಂದೆ ಮಂಡಿಸಲು ಹರಸಾಹಸ ಪಡಬೇಕಾಗಿರುವುದೇ ನಮ್ಮ ಆಡಳಿತ ವ್ಯವಸ್ಥೆಯ ಕ್ರೌರ್ಯಕ್ಕೆ ಸಾಕ್ಷಿ. ಅತ್ಯಾಚಾರದ ಆರೋಪ ಎದುರಿಸುತ್ತಿರುವ ಪ್ರಭಾವಿ ರಾಜಕಾರಣಿ "ತನ್ನನ್ನು ಬಂಧಿಸಿದರೆ ಸರ್ಕಾರವವನ್ನು ಉರುಳಿಸುವುದಾಗಿ" ಬೆದರಿಕೆ ಹಾಕುತ್ತಿದ್ದರೆ, ಅತ್ಯಾಚಾರಕ್ಕೊಳಗಾದ ನೊಂದ ಮಹಿಳೆ ತನ್ನ ಅಹವಾಲು ಸಲ್ಲಿಸಲು ಗುಪ್ತ ಮಾರ್ಗಗಳನ್ನು ಅನುಸರಿಸಬೇಕಿದೆ. ದೌರ್ಜನ್ಯಕ್ಕೊಳಗಾದ ಮಹಿಳೆಯನ್ನು 'ಸಿ.ಡಿ ಲೇಡಿ' ಎಂದು ಕರೆಯುವಷ್ಟು ಮಟ್ಟಿಗೆ ಕನ್ನಡದ ಸುದ್ದಿಮನೆಗಳು ಭ್ರಷ್ಟವಾಗಿವೆ. ಕಳೆದ ಹಲವು ದಿನಗಳಲ್ಲಿ ಕನ್ನಡದ ಸುದ್ದಿಮನೆಗಳಿಗೆ ರಮೇಶ್ ಜಾರಕಿಹೊಳಿ ಪ್ರಕರಣ ಒಂದು ಅಶ್ಲೀಲ ಚಲನಚಿತ್ರದ ವಾಲ್ ಪೋಸ್ಟ್ ನಂತೆ ಬಳಕೆಗೆ ಬರುತ್ತಿರುವುದು ದುರಂತ. ವಿದ್ಯುನ್ಮಾನ ಮಾಧ್ಯಮ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಸಾಮರ್ಥ್ಯ ಮತ್ತು ವ್ಯಾಪ್ತಿಯನ್ನು ಹೊಂದಿರುವ ಇಂದಿನ ಪರಿಸ್ಥಿತಿಯಲ್ಲಿ ಕನ್ನಡದ ಸುದ್ದಿಮನೆಗಳು ಕನಿಷ್ಟ ಸೌಜನ್ಯ, ಸಭ್ಯತೆ ಮತ್ತು ಸೂಕ್ಷ್ಮತೆಯನ್ನು ಹೊಂದಿರಬೇಕಲ್ಲವೇ? ವಿದ್ಯುನ್ಮಾನ ಮಾಧ್ಯಮಗಳಲ್ಲಿ ಈ ಸೂಕ್ಷ್ಮತೆ ಇಲ್ಲದಿರುವುದರಿಂದಲೇ ಲಜ್ಜೆಗೆಟ್ಟ ರಾಜಕಾರಣ ವಿಜೃಂಭಿಸುತ್ತಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯ ವೈಶಿಷ್ಟ್ಯ ಎಂದರೆ ಇಲ್ಲಿ ಆಳುವವರು ಜನರಿಂದ ಪಾಠ ಕಲಿಯಬೇಕಾಗುತ್ತದೆ. ಆಳುವವರ ಪ್ರತಿಯೊಂದು ವರ್ತನೆಯನ್ನೂ ಗಮನಿಸುವ ಸೂಕ್ಷ್ಮಮತಿಗಳಿರುವ ಒಂದು ಸಮಾಜದಲ್ಲಿ ಪ್ರಜಾಪ್ರಭುತ್ವ ಪರಿಪೂರ್ಣತೆಯನ್ನು ಪಡೆಯದಿದ್ದರೂ, ಅಧೋಗತಿ ಕಾಣುವುದನ್ನು ತಪ್ಪಿಸಲು ಸಾಧ್ಯ. ತಮ್ಮ ಆಡಳಿತ ನೀತಿ, ತಾವು ಜಾರಿಗೊಳಿಸುವ ಕಾನೂನು, ಶಾಸನಸಭೆಗಳಲ್ಲಿ ತಮ್ಮ ವಿಷಯಮಂಡನೆ ಮತ್ತು ಚರ್ಚೆಗಳು, ಸಾರ್ವಜನಿಕ ವಲಯದಲ್ಲಿ ತಮ್ಮ ನಡತೆ, ಜನಸಾಮಾನ್ಯರ ಬಗ್ಗೆ ತಮ್ಮ ಧೋರಣೆ ಹೀಗೆ ಪ್ರತಿಯೊಂದು ಹೆಜ್ಜೆಯಲ್ಲೂ ತಮ್ಮನ್ನು ಗಮನಿಸುವ ಒಂದು ಜನಸಮೂಹ ಮುಂಬರುವ ಚುನಾವಣೆಗಳಲ್ಲಿ ತಮ್ಮನ್ನು ಪ್ರಶ್ನಿಸಲು ಸಿದ್ಧವಾಗಿದೆ ಎಂಬ ಭಾವನೆ ಚುನಾಯಿತ ಪ್ರತಿನಿಧಿಗಳಲ್ಲಿ ಮೂಡಿಬಿಟ್ಟರೆ ಅದು ಗಣತಂತ್ರದ ಸಾರ್ಥಕತೆ ಎನ್ನಬಹುದು.

ಭಾರತವೂ ಕೆಲವು ದಶಕಗಳ ಹಿಂದೆ ಹೀಗಿತ್ತು. ಪರಿಪೂರ್ಣ ಎನ್ನಲಾಗದಿದ್ದರೂ ಕೊಂಚ ಮಟ್ಟಿಗೆ ಜನಪ್ರತಿನಿಧಿಗಳು ಬೇಲಿ ಹಾರುವ ಮುನ್ನ ಅತ್ತಿತ್ತ ಕಣ್ಣು ಹಾಯಿಸುವಷ್ಟು ನೈತಿಕ ಭಯ ಹೊಂದಿರುತ್ತಿದ್ದರು. ನುಸುಳುಕೋರರು ಇದ್ದಿರಬಹುದಾದರೂ ಕಡಿಮೆ ಪ್ರಮಾಣದಲ್ಲಿ ಎನ್ನಬಹುದು. ನೈತಿಕತೆ ಎನ್ನುವುದು ಸಾರ್ವಜನಿಕ ಬದುಕಿನ ಒಂದು ಅವಿಭಾಜ್ಯ ಅಂಗವಾಗಿತ್ತು. ಈ ನಿಟ್ಟಿನಲ್ಲಿ 1970ರ ದಶಕದ ರಾಜಕಾರಣ ಗತ ಇತಿಹಾಸದಂತೆಯೇ ಕಾಣುತ್ತದೆ. ಒಬ್ಬ ಪುರಸಭಾ ಸದಸ್ಯರಲ್ಲೂ ಸಹ ಈ ಸಾರ್ವಜನಿಕ ಪ್ರಜ್ಞೆ ಸದಾ ಜಾಗೃತವಾಗಿರುತ್ತಿದ್ದುದು ಅಂದಿನ ದಿನಗಳ ವೈಶಿಷ್ಟ್ಯ. ನಾವು ಜನರಿಂದ ಆಯ್ಕೆಯಾಗಿದ್ದೇವೆ, ಜನತೆ ನಮ್ಮ ಮೇಲೆ ಹೊಣೆ ಹೊರಿಸಿದ್ದಾರೆ, ಅದನ್ನು ಪೂರೈಸುವ ಕರ್ತವ್ಯ ನಮ್ಮದು ಎನ್ನುವ ಸಾರ್ವತ್ರಿಕ ಪ್ರಜ್ಞೆ ಅಂದಿನ ಬಹುತೇಕರಲ್ಲಿ ಇರುತ್ತಿತ್ತು.


ಆಗಲೂ ಪಕ್ಷಗಳಿದ್ದವು, ತತ್ವ ಸಿದ್ಧಾಂತಗಳಿದ್ದವು, ಎಡ ಬಲಗಳಿದ್ದವು, ತಟಸ್ಥರಿದ್ದರು, ಪಕ್ಷಾಂತರಿಗಳಿದ್ದರು, ವಂದಿಮಾಗಧರೂ ಇದ್ದರು, ವಿಶ್ವಾಸಘಾತುಕರೂ ಇದ್ದರು. ಅಧಿಕಾರ ರಾಜಕಾರಣದಲ್ಲಿ ಇವೆಲ್ಲವೂ ಮರೆಯಾಗಿಬಿಟ್ಟರೆ ಬಹುಶಃ ರಾಜಕೀಯ ಕ್ಷೇತ್ರವೇ ಇಲ್ಲವಾಗಿಬಿಡುತ್ತದೆ. ಹಾಗಾಗಿ ಇವೆಲ್ಲವನ್ನೂ ಸಾರ್ವತ್ರಿಕ ಅನಿವಾರ್ಯತೆಗಳು ಎಂದೇ ಭಾವಿಸೋಣ, ಅಡ್ಡಿಯಿಲ್ಲ. ಆದರೆ ಇವೆಲ್ಲವನ್ನೂ ಮೀರಿದ ಒಂದು ಸಾರ್ವಜನಿಕ ಪ್ರಜ್ಞೆ, ವಿವೇಕ, ವಿವೇಚನೆ, ಉತ್ತರದಾಯಿತ್ವ ಮತ್ತು ಪ್ರಾಮಾಣಿಕತೆ ಅಂದಿನ ರಾಜಕಾರಣದಲ್ಲಿ ಪ್ರಧಾನ ಭೂಮಿಕೆ ವಹಿಸುತ್ತಿದ್ದವು. ಪಕ್ಷ ನಿಷ್ಠೆ ಎಷ್ಟೇ ಗಾಢವಾಗಿದ್ದರೂ ಅಂದು ಪ್ರಜ್ಞಾವಂತ ದನಿ ಸತ್ತಿರಲಿಲ್ಲ. ತನ್ನ ಸ್ಥಾನ ಕಳೆದುಕೊಂಡರೂ ಅಡ್ಡಿಯಿಲ್ಲ ಎಂದು ಭಾವಿಸಿ ಪಕ್ಷದ ಜನವಿರೋಧಿ ನೀತಿಗಳನ್ನು ಧಿಕ್ಕರಿಸಿದ ಹಲವು ರಾಜಕಾರಣಿಗಳ ಇತಿಹಾಸವೇ ನಮ್ಮ ಕಣ್ಣ ಮುಂದಿದೆ. ತಾತ್ವಿಕ ನಿಷ್ಠೆಗಾಗಿ ಅಧಿಕಾರದ ಹುದ್ದೆ ತೊರೆದವರು ಅನೇಕರಿದ್ದರು.

ಇಂದು ಎಲ್ಲವೂ ಅಯೋಮಯವಾದಂತಿದೆ. ಕಳೆದ ಮೂರು ದಶಕಗಳ ರಾಜಕಾರಣ ಭಾರತದ ರಾಜಕೀಯ ಚಿತ್ರಣವನ್ನೇ ಬದಲಿಸಿದೆ. ಈ ಅವಧಿಯ ಸಾಂಸ್ಕೃತಿಕ ರಾಜಕಾರಣ ಜನಪ್ರತಿನಿಧಿಗಳನ್ನು ಸಂಸ್ಕೃತಿಹೀನರನ್ನಾಗಿ ಮಾಡಿದೆ, ಮತೀಯ ರಾಜಕಾರಣ ಮತಾಂಧರನ್ನಾಗಿ ಮಾಡಿದೆ, ಅಧಿಕಾರ ರಾಜಕಾರಣ ಲೋಭಿಗಳನ್ನಾಗಿ ಮಾಡಿದೆ. ಯಾವ ಸಂಶೋಧನೆಯೂ ಇಲ್ಲದೆ ದೃಢಪಡಿಸಬಹುದಾದ ಅಂಶ ಇದು. ಅಧಿಕಾರ ಪೀಠಗಳಿಂದ, ಗೌರವಯುತ ಹುದ್ದೆಗಳಿಂದ ದೂರ ಇರಿಸಲು ಅನುಸರಿಸಲಾಗುತ್ತಿದ್ದ ಮಾನದಂಡಗಳೆಲ್ಲವೂ ಇಂದು ಅಧಿಕಾರ ಗಳಿಸುವ ಸುಲಭ ಮಾರ್ಗಗಳಾಗಿ ಪರಿಣಮಿಸಿವೆ. ಹಾಗಾಗಿಯೇ ಕಾಮುಕರು, ಲೋಭಿಗಳು, ಕೊಲೆಗಡುಕರು ರಾಜಕೀಯ ಅಧಿಕಾರಪೀಠಗಳಲ್ಲಿ ರಾರಾಜಿಸುತ್ತಿದ್ದಾರೆ.

ರಾಜಕೀಯ ಒತ್ತಡಗಳಿಗೆ ಮಣಿದು ಸಚಿವ ರಮೇಶ್ ಜಾರಕಿಹೊಳಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಆದರೆ ಅತ್ಯಾಚಾರಕ್ಕೊಳಗಾದ ಮಹಿಳೆಯ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರಗಳು ಯಾವುದೇ ನಾಗರಿಕ ಸಮಾಜವನ್ನು ನಾಚಿ ತಲೆ ತಗ್ಗಿಸುವಂತೆ ಮಾಡಿವೆ. ಇಡೀ ಪ್ರಕರಣದ ಕೇಂದ್ರ ಬಿಂದು ಆರೋಪಿಯಾಗಿರಬೇಕು ಆದರೆ ಇಲ್ಲಿ ಸಂತ್ರಸ್ತೆಯೇ ಕೇಂದ್ರ ಬಿಂದುವಾಗಿದ್ದಾರೆ. ಆಕೆ ತನ್ನ ಮೇಲಾದ ದೌರ್ಜನ್ಯವನ್ನು ನ್ಯಾಯ ವ್ಯವಸ್ಥೆಯ ಮುಂದೆ ಮಂಡಿಸಲು ಹರಸಾಹಸ ಪಡಬೇಕಾಗಿರುವುದೇ ನಮ್ಮ ಆಡಳಿತ ವ್ಯವಸ್ಥೆಯ ಕ್ರೌರ್ಯಕ್ಕೆ ಸಾಕ್ಷಿ. ಅತ್ಯಾಚಾರದ ಆರೋಪ ಎದುರಿಸುತ್ತಿರುವ ಪ್ರಭಾವಿ ರಾಜಕಾರಣಿ "ತನ್ನನ್ನು ಬಂಧಿಸಿದರೆ ಸರ್ಕಾರವವನ್ನು ಉರುಳಿಸುವುದಾಗಿ" ಬೆದರಿಕೆ ಹಾಕುತ್ತಿದ್ದರೆ, ಅತ್ಯಾಚಾರಕ್ಕೊಳಗಾದ ನೊಂದ ಮಹಿಳೆ ತನ್ನ ಅಹವಾಲು ಸಲ್ಲಿಸಲು ಗುಪ್ತ ಮಾರ್ಗಗಳನ್ನು ಅನುಸರಿಸಬೇಕಿದೆ. ಸಂಸ್ಕೃತಿ ಹೀನ ರಾಜಕಾರಣ ಎಂದರೆ ಇದೇ ಅಲ್ಲವೇ ?

ನಿನ್ನೆ ಸಂತ್ರಸ್ತ ಮಹಿಳೆ ನ್ಯಾಯಾಲಯಕ್ಕೆ ನೇರವಾಗಿ ಬಂದು ತಮ್ಮ ಹೇಳಿಕೆಯನ್ನು ನೀಡಿದ್ದಾರೆ. ರಾಜ್ಯ ಸರ್ಕಾರ ನೇಮಿಸಿರುವ ವಿಶೇಷ ತನಿಖಾ ಪಡೆ ನ್ಯಾಯಾಂಗ ನಿಷ್ಠೆಗಿಂತಲೂ ಹೆಚ್ಚಾಗಿ ಸ್ವಾಮಿ ನಿಷ್ಠೆಯನ್ನೇ ಮೆರೆಯುವುದು ಗುಟ್ಟಿನ ಮಾತೇನಲ್ಲ. ಈ ಬೆಳವಣಿಗೆಗಳ ನಡುವೆ ಸಂತ್ರಸ್ತೆಯ ಕುಟುಂಬದವರ ಮೇಲೆ ಒತ್ತಡ ಹೇರಲಾಗಿದೆ. ತಮ್ಮ ಮಗಳನ್ನು ಅಪಹರಿಸಿ ಆಕೆಯಿಂದ ಸುಳ್ಳು ಹೇಳಿಕೆ ನೀಡಿಸಲಾಗಿದೆ ಎಂದು ಸಂತ್ರಸ್ತೆಯ ಪೋಷಕರು ಹೇಳಿರುವುದನ್ನು ನೋಡಿದರೆ ನಮ್ಮ ಸಮಾಜ ನೈತಿಕವಾಗಿ ಎಷ್ಟು ಪಾತಾಳಕ್ಕೆ ಕುಸಿದಿದೆ ಎಂದು ಅರ್ಥವಾಗುತ್ತದೆ. ತಮ್ಮ ಮಗಳು ಇಡೀ ರಾಜ್ಯ ರಾಜಕಾರಣದಿಂದ ಅವಮಾನಿತಳಾಗುತ್ತಿರುವಾಗ, ಸೂಕ್ಷ್ಮಸಂವೇದನೆ ಮತ್ತು ನಾಗರಿಕ ಸಂಸ್ಕೃತಿಯೇ ಇಲ್ಲದ ಮಾಧ್ಯಮಗಳಿಂದ ಅವಹೇಳನಕ್ಕೊಳಗಾಗುತ್ತಿರುವಾಗ, ಪೋಷಕರಾದವರು ಆ ಮಹಿಳೆಯ ಪರ ನಿಲ್ಲಬೇಕಲ್ಲವೇ? ಹೆತ್ತ ಕರುಳನ್ನೂ ಖರೀದಿಸುವಷ್ಟು ಮಟ್ಟಿಗೆ ನಮ್ಮ ರಾಜಕಾರಣ ಬೆಳೆದು ನಿಂತಿದೆ. ಕೇವಲ ಲೋಭಿಗಳ ಸಾಮ್ರಾಜ್ಯದಲ್ಲಿ ಮಾತ್ರವೇ ಇದು ಸಾಧ್ಯ.

ಸಂತ್ರಸ್ತ ಮಹಿಳೆ ಈಗ ನ್ಯಾಯಾಲಯದ ಮುಂದೆ ರಹಸ್ಯವಾಗಿ ತನ್ನ ಹೇಳಿಕೆ ನೀಡಿದ್ದಾಗಿದೆ. ಈ ಹೇಳಿಕೆಯನ್ನಾಧರಿಸಿ ಆರೋಪಿಯ ವಿರುದ್ಧ ಕ್ರಮ ಜರುಗಿಸಬೇಕಿದೆ. ಇಷ್ಟರ ನಡುವೆಯೇ ರಾಜ್ಯದ ಮುಖ್ಯಮಂತ್ರಿ, ರಮೇಶ್ ಜಾರಕಿಹೊಳಿ ನಿರಪರಾಧಿಯಾಗಿ ಹೊರಬರುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಾರೆ. ಇದು ಇಡೀ ಪ್ರಕರಣದ ತನಿಖೆ, ವಿಚಾರಣೆ ಮತ್ತು ನ್ಯಾಯ ವಿತರಣೆ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎನ್ನುವುದರ ಸೂಚಕ ಎನಿಸುವುದಿಲ್ಲವೇ? ಅತ್ಯಾಚಾರದ ಆರೋಪ ಎದುರಿಸುತ್ತಿರುವ ಒಬ್ಬ ಶಾಸಕನ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಪಕ್ಷ ರಾಜಕಾರಣ ಬಹುಶಃ ಮುಗಿದ ಅಧ್ಯಾಯವೆನಿಸುತ್ತದೆ. ಅಧಿಕಾರ ರಾಜಕಾರಣದ ಅನಿವಾರ್ಯತೆಗಳು ರಾಜಕಾರಣದ ಅಪರಾಧೀಕರಣ ಪ್ರಕ್ರಿಯೆಗೆ ಅಧಿಕೃತವಾಗಿಯೇ ಮಾನ್ಯತೆ ನೀಡಿರುವುದನ್ನು ರಾಷ್ಟ್ರಮಟ್ಟದಲ್ಲೇ ಕಾಣುತ್ತಿದ್ದೇವೆ. ಇದಕ್ಕೆ ಬಲಿಯಾಗುತ್ತಿರುವುದು ಮಹಿಳೆ ಮತ್ತು ದಲಿತರು ಎನ್ನುವುದು ಗಮನಿಸಬೇಕಾದ ಅಂಶ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಉತ್ತರಖಾಂಡದ ಮುಖ್ಯಮಂತ್ರಿ, ಮಹಿಳೆಯರು ಧರಿಸುವ ಹರಿದ ಜೀನ್ಸ್ ಪ್ಯಾಂಟಿನ ಬಗ್ಗೆ ಅಸಭ್ಯ ಹೇಳಿಕೆ ನೀಡುತ್ತಾ "ಹೆಣ್ಣು ಮಕ್ಕಳು ಹರಿದ ಜೀನ್ಸ್ ತೊಟ್ಟು ಮಂಡಿ ಕಾಣುವಂತೆ ಇರುವುದರಿಂದ ಸಮಾಜ ನೈತಿಕವಾಗಿ ಕುಸಿಯುತ್ತದೆ, ಇದರಿಂದ ಲೈಂಗಿಕ ದೌರ್ಜನ್ಯ ಹೆಚ್ಚಾಗುತ್ತದೆ" ಎಂದು ಹೇಳಿದ್ದರು. ಪಶ್ಚಿಮ ಬಂಗಾಲದ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್ "ಮಮತಾ ಬ್ಯಾನರ್ಜಿ ಸೀರೆಯುಟ್ಟು ತಮ್ಮ ಗಾಯಗೊಂಡ ಕಾಲನ್ನು ಜನರಿಗೆ ತೋರಿಸುವುದು ಬಂಗಾಲದ ಸಂಸ್ಕೃತಿಗೆ ತಕ್ಕುದಲ್ಲ, ದೀದಿ ಬರ್ಮುಡಾ ಧರಿಸಲಿ" ಎಂದು ಆಜ್ಞಾಪಿಸುತ್ತಾರೆ. ಕರ್ನಾಟಕದಲ್ಲಿ ಆರೋಗ್ಯ (?) ಸಚಿವ ಸುಧಾಕರ್ ರಾಜ್ಯದ 224 ಶಾಸಕರ ದಾಂಪತ್ಯ ನಿಷ್ಠೆಯನ್ನೇ ಪ್ರಶ್ನಿಸುತ್ತಾರೆ. ಈ ಎಲ್ಲ ಅಸೂಕ್ಷ್ಮ ಹೇಳಿಕೆಗಳು ಸಾಂಸ್ಕೃತಿಕ ರಾಜಕಾರಣದ ರಾಯಭಾರಿಗಳಿಂದಲೇ ವ್ಯಕ್ತವಾಗುವುದು ವಿಡಂಬನೆ ಎನಿಸಿದರೂ ಸತ್ಯ.

ಅತ್ಯಾಚಾರದ ಆರೋಪ ಎದುರಿಸುತ್ತಿರುವ ಒಬ್ಬ ಶಾಸಕರ ಸಮರ್ಥನೆಗೆ ಮಹಿಳೆಯರ ಒಂದು ವರ್ಗ ಟೊಂಕಕಟ್ಟಿ ನಿಲ್ಲುತ್ತದೆ. ಮತ್ತೊಂದೆಡೆ ಒಂದು ಜಾತಿಯ ಗುಂಪು ತಮ್ಮ ರಾಜಕೀಯ ನಾಯಕನ ಸಮರ್ಥನೆಗಾಗಿ ಧರಣಿ ಸತ್ಯಾಗ್ರಹ ನಡೆಸುತ್ತದೆ. ಭಾರತೀಯ ಸಂಸ್ಕೃತಿಯ ವಾರಸುದಾರರಂತೆ ವರ್ತಿಸುವ ಒಂದು ರಾಜಕೀಯ ಪಕ್ಷ ಸಂತ್ರಸ್ತ ಮಹಿಳೆಯ ನೋವನ್ನೂ ಲೆಕ್ಕಿಸದೆ ಆಕೆಯ ಚಾರಿತ್ರ್ಯ ವಧೆ ಮಾಡಲು ಮಾಧ್ಯಮಗಳನ್ನು ಬಳಸಿಕೊಳ್ಳುತ್ತದೆ. ಆರೋಪಿ ಶಾಸಕರನ್ನು ಚುನಾವಣಾ ಪ್ರಚಾರಕ್ಕೆ ಬರುವಂತೆ ಮುಖ್ಯಮಂತ್ರಿಯವರು ಕೋರುತ್ತಾರೆ. ಬೌದ್ಧಿಕ ಮಾಲಿನ್ಯಕ್ಕೆ ಇದಕ್ಕಿಂತಲೂ ಹೆಚ್ಚಿನ ನಿದರ್ಶನ ಬೇಕಿಲ್ಲ ಎನಿಸುತ್ತದೆ. ಕಳೆದ ಹಲವು ದಿನಗಳ ರಾಜಕೀಯ ಬೆಳವಣಿಗೆಗಳನ್ನು ಗಮನಿಸುತ್ತಿದ್ದರೆ ಕರ್ನಾಟಕದ ಜನಪ್ರತಿನಿಧಿಗಳು ರಾಜಕೀಯ ಮಲಗುಂಡಿಯಲ್ಲಿ ಮಿಂದೆದ್ದು ಬಂದವರಂತೆ ಕಾಣುತ್ತಾರೆ.

ಭಾವರಿದೇವಿ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಧೀಶರು, ಆರೋಪಿಗಳು ಮೇಲ್ಜಾತಿಗೆ ಸೇರಿದವರಾಗಿದ್ದು ಓರ್ವ ಕೆಳಜಾತಿಯ ಮಹಿಳೆಯ ಮೇಲೆ ಅತ್ಯಾಚಾರ ಎಸಗುವ ಸಾಧ್ಯತೆಗಳು ಕಡಿಮೆ ಎನ್ನುವ ಅರ್ಥ ಬರುವಂತೆ ತೀರ್ಪು ನೀಡಿದ್ದರು. ಇಂದು ಇದೇ ಸಮೀಕರಣವನ್ನು ಜಾತಿಯ ನೆಲೆಯಲ್ಲಿ ಅನ್ವಯಿಸಲು ಮುಂದಾಗುವುದು ಆತ್ಮವಂಚನೆಯಲ್ಲವೇ? ಅತ್ಯಾಚಾರ, ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ಓರ್ವ ಶಾಸಕ, ನಿರಪರಾಧಿ ಎಂದು ಸಾಬೀತಾಗುವವರೆಗೂ ಆರೋಪಿಯಾಗಿಯೇ ಉಳಿಯುತ್ತಾನೆ. ಅನೈತಿಕ, ಅಸಭ್ಯ ನಡತೆಯ ನಾಯಕರನ್ನೂ "ನಮ್ಮ ನಾಯಕ" ಎಂದು ಸಮರ್ಥಿಸುವ ಮಟ್ಟಿಗೆ ಅಧಿಕಾರ ರಾಜಕಾರಣ ನಮ್ಮ ಮನಸುಗಳನ್ನು ಭ್ರಷ್ಟಗೊಳಿಸಿದೆ. ಹಾಗೆಯೇ ಓರ್ವ ಸಂತ್ರಸ್ತ ಮಹಿಳೆಯ ನೋವನ್ನು ಅರ್ಥಮಾಡಿಕೊಳ್ಳದಷ್ಟು ಕ್ರೌರ್ಯ, ಅಸೂಕ್ಷ್ಮತೆಯನ್ನೂ ನಮ್ಮೊಳಗೆ ತುಂಬಿದೆ. ಇದು ಚಿಂತೆಗೀಡುಮಾಡುವ ವಿಚಾರ.

ಅಪರಾಧ ನ್ಯಾಯ ಸಂಹಿತೆಯ ಅನುಸಾರ ನೊಂದ, ಶೋಷಿತ ಮತ್ತು ಅವಮಾನಿತ ವ್ಯಕ್ತಿಗೆ ಕಾನೂನು ರಕ್ಷಣೆ ನೀಡುವುದು ಮುಖ್ಯವಾಗುತ್ತದೆ. ನ್ಯಾಯಮೂರ್ತಿ ವರ್ಮಾ ಆಯೋಗ ಇದನ್ನೇ ಸ್ಪಷ್ಟವಾಗಿ, ನಿಖರವಾಗಿ ಹೇಳಿದೆ. ಆದರೆ ಇಂದು ಭಾರತದಲ್ಲಿ ಅತ್ಯಾಚಾರ, ದೌರ್ಜನ್ಯಕ್ಕೊಳಗಾಗುವ ಮಹಿಳೆ ನ್ಯಾಯಕ್ಕಾಗಿ ಪರಿತಪಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಥ್ರಾಸ್ ನಂತಹ ಘಟನೆಯಲ್ಲಿ ಆರೋಪಿಗಳ ರಾಜಕೀಯ ಪ್ರಭಾವ ಆಕೆಯ ದಹನಕ್ಕೆ ಕಾರಣವಾದರೆ, ಆಂಧ್ರ ಪ್ರದೇಶದಲ್ಲಿ

ಪುಟ 15 ನೋಡಿ



ಚುನಾವಣಾ ಬಾಂಡುಗಳ ವಿರುದ್ಧ ಅರ್ಜಿಗಳನ್ನು ಕೈಗೆತ್ತಿಕೊಳ್ಳದೇ ಹಾಗೂ ಈ ಯೋಜನೆ ಕಾನೂನಿನ ಅಡ್ಡಿಯಿಲ್ಲದೆ ಮೂರು ವರ್ಷಗಳಿಂದ ಜಾರಿಯಲ್ಲಿದೆ ಎಂದು ಹೇಳುವುದು ರಾಜಕೀಯ ದೇಣಿಗೆಯ ಈ ಕುತ್ಸಿತ ವ್ಯವಸ್ಥೆಯನ್ನು ವಸ್ತುಶಃ ಕಾನೂನುಬದ್ಧಗೊಳಿಸಿದಂತಾಗಿದೆ. ಮೂರು ವರ್ಷದಷ್ಟು ದೀರ್ಘ ಕಾಲದಿಂದ ಚುನಾವಣಾ ಬಾಂಡ್ ಕುರಿತ ಪ್ರಕರಣವನ್ನು ಕೈಗೆತ್ತಿಕೊಳ್ಳದಿರುವ ಮೂಲಕ ಸುಪ್ರೀಂ ಕೋರ್ಟ್ ಕರ್ತವ್ಯಚ್ಯುತಿ ಎಸಗಿದೆ. ನ್ಯಾಯಾಲಯದ ಮೇಲೆ ರಾಜಕೀಯ ನಿಧಿ ನೀಡಿಕೆಯಲ್ಲಿ ಪಾರದರ್ಶಕತೆ ಖಾತರಿಪಡಿಸುವ ಹಾಗೂ ಲೆಕ್ಕಕ್ಕೆ ಸಿಗದ ಮತ್ತು ರಹಸ್ಯ ಮೂಲಗಳ ಹಣದ ಮೂಲಕ ಪ್ರಜಾಪ್ರಭುತ್ವದ ವಿಕೃತಿಯನ್ನು ತಡೆಗಟ್ಟುವ ಹೊಣೆಗಾರಿಕೆಯಿದೆ. ಈ ವಿಚಾರದಲ್ಲಿ ಕೋರ್ಟ್ ಎಷ್ಟು ಬೇಗ ಕ್ರಮ ಕೈಗೊಳ್ಳುತ್ತದೋ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಅಷ್ಟು ಒಳ್ಳೆಯದು.



ಚುನಾವಣಾ ಬಾಂಡ್ ಬಗ್ಗೆ ಸುಪ್ರಿಂ ಕೋರ್ಟ್: ವಾಸ್ತವ ಪ್ರಶ್ನೆಯಿಂದ ನುಣುಚಿಕೊಳ್ಳುವ ಕ್ರಮ

*ಪ್ರಕಾಶ್ ಕಾರಟ್

ಏಪ್ರಿಲ್ 1ರಿಂದ 10ರ ವರೆಗೆ ಚುನಾವಣಾ ಬಾಂಡ್‌ಗಳ ಪ್ರಸಕ್ತ ಕಂತು ಬಿಡುಗಡೆ ಮಾಡುವುದಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಬಾಂಡ್ ನೀಡಿಕೆಗೆ ತಡೆಯಾಜ್ಞೆ ಕೊಡುವಂತೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಎಂಬ ಸರಕಾರೇತರ ಸಂಘಟನೆ ತುರ್ತು ಮನವಿ ಮಾಡಿತ್ತು.

ಬಾಂಡ್ ಯೋಜನೆ ಕಳೆದ ಮೂರು ವರ್ಷಗಳಿಂದ ಯಾವುದೇ ಅಡೆತಡೆಯಿಲ್ಲದೆ ಸಾಗಿದೆ. ಸುರಕ್ಷತಾ ಕ್ರಮಗಳನ್ನೂ ಅಳವಡಿಸಲಾಗಿದೆ ಎಂದು ಕೋರ್ಟ್ ಹೇಳಿದೆ. ಆದರೆ ಇವು ಒಪ್ಪಬಹುದಾದ ಕಾರಣಗಳಲ್ಲ. ಈ ಯೋಜನೆಯೇ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಅಪಾರದರ್ಶಕ ಮಾರ್ಗವಾಗಿದೆ ಹಾಗೂ ಅದರೊಳಗೇ ಆಳುವ ಪಕ್ಷದ ಪರವಾದ ಅಂಶ ಸೇರಿಕೊಂಡಿದೆ ಎಂಬುದೇ ಇಡೀ ಅಂಶ ಎನ್ನುವುದನ್ನು ಇಲ್ಲಿ ಗಮನಿಸುವುದು ಮುಖ್ಯ. ತಾವು ಪಡೆದ ಚುನಾವಣಾ ಬಾಂಡ್‌ಗಳ ವಿವರಗಳನ್ನು ಸೀಲ್ ಮಾಡಿದ ಲಕೋಟೆಗಳಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ 2019ರಲ್ಲಿ ಆದೇಶಿಸಿತ್ತು. ಇದೇ ಕೋರ್ಟ್ ಉಲ್ಲೇಖಿಸಿರುವ ಸುರಕ್ಷತಾ ಕ್ರಮ. ಅದು ಆ ಸಂದರ್ಭ ಮಂಜೂರು ನೀಡಿದ್ದ ಬಾಂಡ್‌ಗಳ ಕಂತಿಗೆ ಸಂಬಂಧಿಸಿದ್ದಾಗಿದ್ದು ಅದನ್ನನುಸರಿಸಿ ಯಾವುದೇ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ.

ಮೂಲ ಸಮಸ್ಯೆ

ಚುನಾವಣಾ ಬಾಂಡ್ ಯೋಜನೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳು 2018ರಿಂದಲೂ ಬಾಕಿಯಿವೆ. ಅವನ್ನು ಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುತ್ತಿಲ್ಲ ಎನ್ನುವುದೇ ಮೂಲಭೂತ ಸಮಸ್ಯೆಯಾಗಿದೆ. ಸಿಪಿಐ(ಎಂ) ಕೂಡ ಈ ಬಾಂಡ್‌ಗಳಿಗೆ ಸವಾಲು ಹಾಕುವ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದೆ.

ಈ ಅರ್ಜಿಗಳನ್ನು ಕೈಗೆತ್ತಿಕೊಳ್ಳದೇ ಹಾಗೂ ಯೋಜನೆ ಕಾನೂನು ಅಡ್ಡಿಯಿಲ್ಲದೆ ಮೂರು ವರ್ಷಗಳಿಂದ ಜಾರಿಯಲ್ಲಿದೆ ಎಂದು ಹೇಳುವುದು ರಾಜಕೀಯ ದೇಣಿಗೆಯ ಒಂದು ಕುತ್ಸಿತ ವ್ಯವಸ್ಥೆಯಾದ ಚುನಾವಣಾ ಬಾಂಡ್ ಯೋಜನೆಯನ್ನು ವಸ್ತುಶಃ ಕಾನೂನುಬದ್ಧಗೊಳಿಸಿದಂತಾಗಿದೆ. ಅದು ಪಾರದರ್ಶಕವಲ್ಲದ, ಆಳುವ ಪಕ್ಷ ಮಾಡಿಕೊಡುವ ಅನುಕೂಲಕ್ಕೆ ಪ್ರತಿಯಾಗಿ ಕಾರ್ಪೊರೇಟ್ ಕಂಪೆನಿಗಳು ದೇಣಿಗೆ ಕೊಡಲು ಅನುವು ಮಾಡಿಕೊಡುವ ಕೊಡು-ಕೊಳುವ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ, ದೇಣಿಗೆದಾರರೂ ತಾವು ಬಾಂಡ್ ಮೂಲಕ ಯಾರಿಗೆ ಹಣ ಕೊಡುತ್ತಿದ್ದೇವೆ ಎಂದು ಬಹಿರಂಗ ಪಡಿಸಬೇಕಿಲ್ಲ; ಅದೇ ರೀತಿ, ದೇಣಿಗೆಯ ಮೂಲವನ್ನು ಅದನ್ನು ಪಡೆದ ರಾಜಕೀಯ ಪಕ್ಷವೂ ಬಹಿರಂಗ ಪಡಿಸಬೇಕೆಂದೇನೂ ಇಲ್ಲ. ಅಂದರೆ ಗಿಂಬಳಗಳು ಹಾಗೂ ಅಕ್ರಮ ಹಣ ಹರಿದು ಬರಲು ಒಂದು ಪರಿಪೂರ್ಣ ರಹದಾರಿ. ಅಕ್ರಮ ಹಣವನ್ನು ಒಂದು ರಾಜಕೀಯ ಪಕ್ಷಕ್ಕೆ ಕಾನೂನುಬದ್ಧವಾಗಿ ಹರಿಸಲು ಹುಸಿ (ಶೆಲ್) ಕಂಪೆನಿಗಳನ್ನು ರಚಿಸ ಬಹುದಾಗಿದೆ.

ಬಿಜೆಪಿಗಷ್ಟೇ ಲಾಭ

ಮಾಹಿತಿ ಹಕ್ಕು ಕಾನೂನು (ಆರ್‌ಟಿಐ) ಅನ್ವಯ ಪಡೆದ ಉತ್ತರಗಳ ಮಾಹಿತಿಗಳ ಪ್ರಕಾರ, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) 2018ರ ಫೆಬ್ರವರಿಯಿಂದ ಇದುವರೆಗೆ 14 ಹಂತಗಳಲ್ಲಿ ಚುನಾವಣಾ ಬಾಂಡ್‌ಗಳನ್ನು ಮಾರಾಟ ಮಾಡಿದೆ. 2020ರ ಅಂತ್ಯದ ವರೆಗೆ ಒಟ್ಟು 12,773 ಬಾಂಡ್‌ಗಳನ್ನು ನೀಡಲಾಗಿದೆ. ಆ ಪೈಕಿ 6,472 ಕೋಟಿ ರೂಪಾಯಿ ಮೌಲ್ಯದ 12,632 ಬಾಂಡ್‌ಗಳನ್ನು ರಾಜಕೀಯ ಪಕ್ಷಗಳು ನಗದೀಕರಿಸಿಕೊಂಡಿವೆ. 2018ರ ಫೆಬ್ರವರಿಯಲ್ಲಿ ಮೊದಲ ಕಂತಿನಲ್ಲಿ 222 ಕೋಟಿ ರೂಪಾಯಿ ಮೌಲ್ಯದ ಬಾಂಡ್‌ಗಳನ್ನು ಮಾರಲಾಗಿತ್ತು. ಅದರಲ್ಲಿ ಶೇಕಡಾ 94.5ರಷ್ಟು, ಅಂದರೆ 210 ಕೋಟಿ ರೂಪಾಯಿಗೂ ಹೆಚ್ಚಿನ ಹಣ ಬಿಜೆಪಿಗೆ ಸಂದಾಯವಾಗಿತ್ತು. ಚುನಾವಣಾ ಆಯೋಗಕ್ಕೆ ಬಿಜೆಪಿ ಸಲ್ಲಿಸಿದ ಲೆಕ್ಕಪರಿಶೋಧಿತ ವರದಿಯಿಂದ ಇದು ಗೊತ್ತಾಗುತ್ತದೆ. ಮುಂದಿನ ಎಲ್ಲ ಕಂತುಗಳಲ್ಲಿ ಕೂಡ ಬಿಜೆಪಿಯೇ ಶೇಕಡ 90ಕ್ಕಿಂತ ಅಧಿಕ ಮೌಲ್ಯದ ಬಾಂಡ್‌ಗಳನ್ನು ಪಡೆದಿದೆ.

ಈ ದೇಣಿಗೆಗಳು ಕಾರ್ಪೊರೇಟ್ ಕಂಪೆನಿಗಳು ಅಥವಾ ಅತಿ ಶ್ರೀಮಂತ ವ್ಯಕ್ತಿಗಳಿಂದ ಬಂದಿವೆ ಎನ್ನುವುದು ಸ್ಪಷ್ಟ. ಯಾಕೆಂದರೆ ಇದುವರೆಗೆ ಬಿಡುಗಡೆ ಮಾಡಲಾದ ಬಾಂಡ್‌ಗಳಲ್ಲಿ ಪ್ರತಿಶತ 92.12 ಬಾಂಡ್‌ಗಳ ಮೌಲ್ಯ ಮುಖಬೆಲೆ ಒಂದು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನದ್ದು.

ಹಣದ ಹೊಳೆ ಹರಿದು ಬರಲು

ಬಾಂಡ್ ಯೋಜನೆ ಜೊತೆಜೊತೆಯಲ್ಲೇ ಮೋದಿ ಸರ್ಕಾರ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳು (ಎಂಎನ್‌ಸಿ) ವಿದೇಶಿ ಕಂಪೆನಿಗಳೆಂದು ಪರಿಗಣಿತವಾಗದೆ ಭಾರತದ ಕಂಪೆನಿಗಳೆಂದೇ ದೇಣಿಗೆ ನೀಡಲು ಸಾಧ್ಯವಾಗುವಂತೆ ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿ ತಂದಿದೆ. ಇದಲ್ಲದೆ, ಯಾವುದೇ ಕಂಪೆನಿ, ಮೂರು ವರ್ಷಗಳ ಸರಾಸರಿ ಲಾಭದ ಶೇಕಡ 7.5ಕ್ಕಿಂತ ಹೆಚ್ಚಿನ ಹಣವನ್ನು ರಾಜಕೀಯ ದೇಣಿಗೆಯಾಗಿ ನೀಡಬಾರದೆಂಬ ಮಿತಿಯನ್ನು ಕೂಡ ಮೋದಿ ಸರ್ಕಾರ ತೆಗೆದು ಹಾಕಿದೆ.

ಇದು, ವಿದೇಶಿ ಕಂಪೆನಿಗಳಿಂದ ಮತ್ತು ಭಾರತೀಯ ಕಂಪೆನಿಗಳಿಂದ ಲೆಕ್ಕವಿಲ್ಲದಷ್ಟು ಹಣ ಆಳುವ ಪಕ್ಷಕ್ಕೆ ದೇಣಿಗೆ ರೂಪದಲ್ಲಿ ಬರಲು ಹೆಬ್ಬಾಗಿಲನ್ನೇ ತೆರೆದು ಕೊಟ್ಟಿದೆ. ಮೋದಿ ಸರ್ಕಾರದ ಸರ್ವಾಧಿಕಾರಶಾಹೀ ಸ್ವರೂಪದಿಂದಾಗಿ ಹೆಚ್ಚಿನ ಕಂಪನಿಗಳು ಪ್ರತಿಪಕ್ಷಗಳಿಗೆ ದೇಣಿಗೆ ನೀಡುವ ಅಪಾಯಕ್ಕೆ ಕೈ ಹಾಕುವುದಿಲ್ಲ. ಸಾರ್ವಜನಿಕ ದೃಷ್ಟಿಯಿಂದ ಈ ಬಾಂಡ್‌ಗಳು ಅನಾಮಿಕವಾಗಿದ್ದರೂ ಯಾರು ಬಾಂಡ್‌ಗಳನ್ನು ಪಡೆಯುತ್ತಿದ್ದಾರೆ ಎನ್ನುವುದನ್ನು ಸರ್ಕಾರಿ ಸ್ವಾಮ್ಯದ ಎಸ್‌ಬಿಐ ಮೂಲಕ ತಿಳಿಯಲು ಸರ್ಕಾರಕ್ಕೆ ಸಾಧ್ಯವಿದೆ.

ಇದೇ ಏಪ್ರಿಲ್‌ನಲ್ಲಿ ಬಿಡುಗಡೆಯಾಗುವ ಬಾಂಡ್‌ಗಳು ವಿಧಾನಸಭಾ ಚುನಾವಣೆಗಳಿಗಾಗಿ, ಅದರಲ್ಲೂ ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ, ಬಿಜೆಪಿಗೆ ನಿಧಿ ಒದಗಿಸಲು ನೆರವಾಗಲಿವೆ. ಇದುವರೆಗೆ ಮುಂಬೈ ಬಿಟ್ಟರೆ ಅತಿ ಹೆಚ್ಚು ಬಾಂಡ್ ಬಿಡುಗಡೆಯಾಗಿರುವುದು ಕೊಲ್ಕತಾದಲ್ಲಿಯೇ. ಮುಂಬೈ ನಂತರ ದೊಡ್ಡ ಉದ್ಯಮಗಳು ಅತೀ ಹೆಚ್ಚಾಗಿ ಕೇಂದ್ರೀಕರಣಗೊಂಡಿರುವುದು ಕೊಲ್ಕತಾದಲ್ಲೇ ಎನ್ನುವುದು ಗಮನಾರ್ಹ.

ಹುರುಳಿಲ್ಲದ ದಾವೆ


ಚುನಾವಣಾ ಬಾಂಡ್ ಯೋಜನೆಯು ಚುನಾವಣೆಗಳಲ್ಲಿ ಕಪ್ಪು ಹಣವನ್ನು ತೊಡೆದು ಹಾಕಿ ಬಿಳಿ ಹಣಕ್ಕೆ ಪ್ರೋತ್ಸಾಹ ನೀಡುತ್ತದೆ ಎಂಬ ಸರಕಾರದ ದಾವೆಯಲ್ಲಿ ಕೂಡ ಎಳ್ಳಷ್ಟೂ ಹುರುಳಿಲ್ಲ. ಉದ್ಯಮಿಗಳ ಮೂಲದಿಂದ ಬರುವ ಅಪಾರ ಕಪ್ಪುಹಣದ ಮೊತ್ತಗಳೇ ಚುನಾವಣಾ ನಿಧಿಗಳ ಪ್ರಮುಖ ಭಾಗವಾಗಿರುತ್ತವೆ ಎನ್ನುವುದು ಸುಸ್ಪಷ್ಟ. ಬಿಜೆಪಿ, ಬಾಂಡ್‌ಗಳ ಮೂಲಕ ಕಾರ್ಪೊರೇಟ್ ಕುಳಗಳು ಹಾಗೂ ಸೂಪರ್-ಸಿರಿವಂತರಿಂದ ಕಾನೂನುಬದ್ಧ ದೇಣಿಗೆಗಳ ಮೇಲೆ ಏಕಸ್ವಾಮ್ಯ ಸಾಧಿಸುವುದರೊಂದಿಗೇ, ಅವೇ ಮೂಲಗಳಿಂದ ಲೆಕ್ಕವಿಲ್ಲದ ಅಘೋಷಿತ ಹಣದಿಂದಲೂ ಅಪಾರ ಮೊತ್ತಗಳನ್ನು ಎತ್ತುತ್ತದೆ. ದೊಡ್ಡ ಉದ್ಯಮಪತಿಗಳೊಂದಿಗೆ ಸಂಪರ್ಕ ಕೂಟವನ್ನು ಔಪಚಾರಿಕಗೊಳಿಸಲು ಚುನಾವಣಾ ಬಾಂಡ್ ಆಳುವ ಪಕ್ಷಕ್ಕೆ ಅಮೂಲ್ಯ ಸಾಧನವಾಗಿದೆ.

ನ್ಯಾಯಾಲಯದ ಹೊಣೆಗಾರಿಕೆ


ಮೂರು ವರ್ಷದಷ್ಟು ದೀರ್ಘ ಕಾಲದಿಂದ ಚುನಾವಣಾ ಬಾಂಡ್ ಕುರಿತ ಪ್ರಕರಣವನ್ನು ಕೈಗೆತ್ತಿಕೊಳ್ಳದಿರುವ ಮೂಲಕ ಸುಪ್ರೀಂ ಕೋರ್ಟ್ ಕರ್ತವ್ಯಚ್ಯುತಿ ಎಸಗಿದೆ. ಸಂವಿಧಾನದ 370ನೇ ವಿಧಿಯ ರದ್ಧತಿ, ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ವಿಚಾರದಲ್ಲೂ ಅದು ಹೀಗೇ ಮಾಡಿದೆ. ನ್ಯಾಯಾಂಗ ನುಣುಚಿಕೆಯ ಈ ಪ್ರವೃತ್ತಿ ಭಾರತದ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ಕಾಲದಿಂದ ಎದ್ದು ಕಾಣುತ್ತಿದೆ.

ನ್ಯಾಯಾಲಯದ ಮೇಲೆ ರಾಜಕೀಯ ನಿಧಿ ನೀಡಿಕೆಯಲ್ಲಿ ಪಾರದರ್ಶಕತೆ ಖಾತರಿಪಡಿಸುವ ಹಾಗೂ ಲೆಕ್ಕಕ್ಕೆ ಸಿಗದ ಮತ್ತು ರಹಸ್ಯ ಮೂಲಗಳ ಹಣದ ಮೂಲಕ ಪ್ರಜಾಪ್ರಭುತ್ವದ ವಿಕೃತಿಯನ್ನು ತಡೆಗಟ್ಟುವ ಹೊಣೆಗಾರಿಕೆಯಿದೆ. ಈ ವಿಚಾರದಲ್ಲಿ ಕೋರ್ಟ್ ಎಷ್ಟು ಬೇಗ ಕ್ರಮ ಕೈಗೊಳ್ಳುತ್ತದೋ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಅಷ್ಟು ಒಳ್ಳೆಯದಾಗುತ್ತದೆ.

ಅನು: ವಿಶ್ವ



ಕಪ್ಪು ಹಣ–ಸ್ವಚ್ಛತೆಯೇ ಸೇವೆ! : ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



"ಹೆಸರು ಬಾಂಡ್, ಚುನಾವಣಾ ಬಾಂಡ್"–ಪ್ರಜಾಪ್ರಭುತ್ವದೊಂದಿಗೆ ಚೆಲ್ಲಾಟ!
–ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ





ಕೇರಳ ಎಲ್‌ಡಿಎಫ್- ಸಾಧನೆಗಳ ದಾಖಲೆ ಮತ್ತು ಭವಿಷ್ಯದ ಪ್ರಣಾಳಿಕೆಯೊಂದಿಗೆ ಮತ್ತೆ ಜನರ ಬಳಿಗೆ

2016–21ರಲ್ಲಿ 600ರಲ್ಲಿ 580 ಆಶ್ವಾಸನೆಗಳನ್ನು ಈಡೇರಿಸಿದ ದಾಖಲೆಯೊಂದಿಗೆ ಕೇರಳದ ಎಡ ಪ್ರಜಾಪ್ರಭುತ್ವ ರಂಗ ಮುಂದಿನ ಐದು ವರ್ಷಗಳಲ್ಲಿ ಆಧುನಿಕ ಕೇರಳದ ಭವಿಷ್ಯದ ಪ್ರಣಾಳಿಕೆ 900 ಆಶ್ವಾಸನೆಗಳೊಂದಿಗೆ 50 ಅಂಶಗಳ ಕಾರ್ಯಕ್ರಮವನ್ನು ಜನಗಳ ಮುಂದಿಟ್ಟಿದೆ.

ಕೇರಳ ಎಪ್ರಿಲ್ 6 ರಂದು ಹೊಸ ವಿಧಾನಸಭೆಯನ್ನು ಚುನಾಯಿಸುವ ಮತದಾನಕ್ಕೆ ಸಿದ್ಧವಾಗುತ್ತಿದೆ. ಎಡ ಪ್ರಜಾಪ್ರಭುತ್ವ ರಂಗ (ಎಲ್.ಡಿ.ಎಫ್.) ಕಳೆದ ಐದು ವರ್ಷಗಳಲ್ಲಿ ಜನಗಳಿಗೆ ನೀಡಿದ ಆಶ್ವಾಸನೆಗಳಲ್ಲಿ ಹೆಚ್ಚಿನವನ್ನು ಈಡೇರಿಸಿದ ಆತ್ಮವಿಶ್ವಾಸದೊಂದಿಗೆ ರಾಜ್ಯಾದ್ಯಂತ ಜನಗಳ ಬಳಿ ಹೋಗುತ್ತಿದೆ. 2016ರಲ್ಲಿ ತನ್ನ ಪ್ರಣಾಳಿಕೆಯಲ್ಲಿ ನೀಡಿದ 600 ಆಶ್ವಾಸನೆಗಳಲ್ಲಿ 580ನ್ನು ಹಲವಾರು ನೈಸರ್ಗಿಕ ಮತ್ತು ಸಾಮಾಜಿಕ–ಆರ್ಥಿಕ–ರಾಜಕೀಯ ಅಡ್ಡಿ ಆತಂಕಗಳ ನಡುವೆಯೂ ಈಡೇರಿಸಿದ ಸರಕಾರವನ್ನು ನೀಡಿದ ಎಲ್‌ಡಿಎಫ್ ಈ ಬಾರಿ ಅದರ ಆಧಾರದಲ್ಲಿ ಒಂದು ಆಧುನಿಕ ಕೇರಳದ ಮುನ್ನೋಟ ಹೊಂದಿರುವ ಪ್ರಣಾಳಿಕೆಯನ್ನು ಜನಗಳ ಮುಂದಿಟ್ಟಿದೆ.

ಕಳೆದ ಐದು ವರ್ಷಗಳಲ್ಲಿ ಮೂಲರಚನೆ ನಿರ್ಮಾಣದ ಮತ್ತು ಜನಕಲ್ಯಾಣದ ಸಾಧನೆಗಳನ್ನು ಕ್ರೋಡೀಕರಿಸಿ ಒಂದು ಹೆಚ್ಚು ಸುಸ್ಥಿರವಾದ ಅಭಿವೃದ್ಧಿ ಮಾದರಿಯ ಮೂಲಕ ಮುಂದಿನ ಪೀಳಿಗೆಗೆ ಉದ್ಯೋಗಾವಕಾಶ ನಿರ್ಮಾಣದ ಬಗ್ಗೆ ಪ್ರಣಾಳಿಕೆ ಮಾತಾಡಿದೆ.

ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯಾದ್ಯಂತ ಎಲ್ಲ ಜನವಿಭಾಗಗಳೊಂದಿಗೆ ವ್ಯಾಪಕ ಸಮಾಲೋಚನೆಗಳ ನಂತರ ರೂಪಿಸಿರುವ ಈ ಪ್ರಣಾಳಿಕೆ 900 ಆಶ್ವಾಸನೆಗಳೊಂದಿಗೆ 50 ಅಂಶಗಳ ಕಾರ್ಯಕ್ರಮವನ್ನು ಜನಗಳ ಮುಂದಿಟ್ಟಿದೆ. ಅವುಗಳ ಮುಖ್ಯಾಂಶಗಳು ಹೀಗಿವೆ:

1. ಕೌಶಲ ಅಭಿವೃದ್ಧಿ ಮತ್ತು ಕೈಗಾರಿಕಾ ಪುನರ್ರಚನೆಯ ಮೂಲಕ ವಿದ್ಯಾವಂತರಿಗೆ 20 ಲಕ್ಷ ಉದ್ಯೋಗಾವಕಾಶಗಳ ನಿರ್ಮಾಣದ ಗುರಿಯನ್ನು ಎಲ್.ಡಿ.ಎಫ್. ಇಟ್ಟು ಕೊಂಡಿದೆ. ಕೃಷಿ ವಲಯದಲ್ಲಿ 5 ಲಕ್ಷ ಮತ್ತು ಕೃಷಿಯೇತರ ವಲಯಗಳಲ್ಲಿ 10 ಲಕ್ಷ ಜೀವನೋಪಾಯಗಳನ್ನು ಉಂಟುಮಾಡಲು ಶ್ರಮಿಸಲಾಗುವುದು. ಕಳೆದ ಐದು ವರ್ಷಗಳಲ್ಲಿ ಈ ರಾಜ್ಯದಲ್ಲಿ ನವೋದ್ಯಮಗಳ ಸಂಖ್ಯೆಯನ್ನು 300ರಿಂದ 3900 ಕ್ಕೆ ಏರಿಸಿದ ಅನುಭವ ಹೊಂದಿರುವ ಎಲ್‌ಡಿಎಫ್ ಇದನ್ನು ಮುಂದಿನ 5 ವರ್ಷಗಳಲ್ಲಿ 15,000ಕ್ಕೆ ಏರಿಸುವ, ಈ ಮೂಲಕ 1ಲಕ್ಷ ಉದ್ಯೋಗಾವಕಾಶಗಳನ್ನು ನಿರ್ಮಿಸುವ ವಿಶ್ವಾಸವನ್ನು ವ್ಯಕ್ತಪಡಿಸಿದೆ. 82,000ದಿಂದ 1.4ಲಕ್ಷಕ್ಕೆ ಏರಿರುವ ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳ ಸಂಖ್ಯೆಯನ್ನು 3 ಲಕ್ಷಕ್ಕೆ ಏರಿಸಿ 6 ಲಕ್ಷ ಹೆಚ್ಚುವರಿ ಉದ್ಯೋಗಗಳನ್ನು ಮುಂದಿನ 5 ವರ್ಷಗಳಲ್ಲಿ ನಿರ್ಮಿಸಲಾಗುವುದು ಎಂದು ಪ್ರಣಾಳಿಕೆ ಹೇಳಿದೆ.
2. 2016ರಲ್ಲಿ ಎಲ್.ಡಿ.ಎಫ್. ಸರಕಾರ ಅಧಿಕಾರ ವಹಿಸಿಕೊಂಡಾಗ ಮಾಸಿಕ 600ರೂ.ಗಳ ಸಾಮಾಜಿಕ ಕಲ್ಯಾಣ ಪಿಂಚಣಿ 18ತಿಂಗಳಿಂದ ಬಾಕಿಯಿತ್ತು. ಎಲ್.ಡಿ.ಎಫ್. ಸರಕಾರ ಅದನ್ನು 1200ರೂ.ಗೇ ಏರಿಸಿದೆ. ಇದನ್ನು 2500ರೂ.ಗೆ ಏರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಮೊತ್ತಮೊದಲ ಬಾರಿಗೆ ಮಹಿಳೆಯರು ಸಂಬಳವಿಲ್ಲದೆ ಮಾಡುವ ಮನೆಗೆಲಸವನ್ನೂ ನಿವೃತ್ತಿ ಯೋಜನೆಗಳ ಅಡಿಯಲ್ಲಿ ತರಲಾಗುವುದು. ಎಲ್ಲ ಸ್ಕೀಂ ಕೆಲಸಗಾರರ, ಗೌರವ ಧನವನ್ನು ಏರಿಸಲಾಗುವುದು. ಈಗಾಗಲೇ ದೇಶದಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿರುವ ಕನಿಷ್ಟ ಕೂಲಿ ಮೊತ್ತವನ್ನು ದಿನಕ್ಕೆ 700ರೂ. ಅಥವ ಮಾಸಿಕ 21,000ರೂ.ಗೆ ಏರಿಸುವ ಆಶ್ವಾಸನೆಯನ್ನು ಎಲ್‌ಡಿಎಫ್ ಪ್ರಣಾಳಿಕೆ ಕೊಟ್ಟಿದೆ.
3. ಹಿಂದೆ ಯುಡಿಎಫ್ ಅಡಿಯಲ್ಲಿ 213 ಕೋಟಿ ರೂ.ಗಳ ನಷ್ಟದಲ್ಲಿದ್ದ ರಾಜ್ಯದ ಸಾರ್ವಜನಿಕ ವಲಯದ ಒಟ್ಟು 42 ಘಟಕಗಳಲ್ಲಿ ಈಗ ಎಲ್ಲವೂ ಲಾಭದಲ್ಲಿವೆ. ಒಟ್ಟು 102 ಕೋಟಿ ರೂ.ಗಳ ಲಾಭ ಮಾಡಿವೆ. ಇವು 2018–198 ಹಣಕಾಸು ವರ್ಷದಲ್ಲಿ 3,443 ಕೋಟಿ ರೂ.ಗಳ ವ್ಯವಹಾರ ನಡೆಸಿ ದಾಖಲೆ ನಿರ್ಮಿಸಿವೆ. ಕೇಂದ್ರದ್ರ ಮೋದಿ ಸರಕಾರ ತನ್ನ ರೆವಿನ್ಯೂ ಅಂತರವನ್ನು ತುಂಬಿಕೊಳ್ಳು ಸಾರ್ವಜನಿಕ ವಲಯದ ಮಾರಾಟದ ಧಾವಂತದಲ್ಲಿರುವಾಗ ಎಲ್‌ಡಿಎಫ್ ಪ್ರಣಾಳಿಕೆ ಈ ವಲಯವನ್ನು ರಕ್ಷಿಸಿ ಮತ್ತಷ್ಟು ಬೆಳೆಸುವ ಯೋಜನೆ ಹಾಕಿಕೊಂಡಿದೆ. ಉದ್ದಿಮೆಗಳಲ್ಲಿ ರೂ.10,000 ಕೋಟಿ ಖಾಸಗಿ ಹೂಡಿಕೆಗಳನ್ನು ಪಡೆಯುವ ಮತ್ತು ರಾಜ್ಯವನ್ನು ಇಲೆಕ್ಟ್ರಾನಿಕ್– ಔಷಧಿ ತಯಾರಿಕಾ ಕೇಂದ್ರವಾಗಿ ಮಾಡುವ ಗುರಿ ಇಟ್ಟುಕೊಂಡಿದೆ.
4. ಹಿಂದಿನ ಎರಡು ದಶಕಗಳಲ್ಲಿ ಇಳಿಮುಖಗೊಳ್ಳುತ್ತಿದ್ದ ಭತ್ತದ ಸಾಗುವಳಿ ಕಳೆದ ನಾಲ್ಕು ವರ್ಷಗಳಲ್ಲಿ 1.7ಲಕ್ಷ ಹೆಕ್ಟೇರುಗಳಿಂದ 2.23 ಲಕ್ಷ ಹೆಕ್ಟೇರುಗಳಿಗೆ ಏರಿದೆ. ಉತ್ಪಾದನೆ ಕೂಡ 0.2ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಹೆಚ್ಚಿದೆ. ಈ ಮುನ್ನಡೆಯ ದಾಖಲೆಯನ್ನು ಆಧರಿಸಿ ಪ್ರಣಾಳಿಕೆ ಕೃಷಿ ಆದಾಯವನ್ನು 50ಶೇ.ದಷ್ಟು ಹೆಚ್ಚಿಸುವ ಯೋಜನೆ ಹಾಕಿದೆ. ರಬ್ಬರ್ ಪಾರ್ಕ್, ಅಕ್ಕಿ ಪಾರ್ಕ್, ಮಸಾಲೆ ಸಾಮಗ್ರಿಗಳ ಪಾರ್ಕ್ ಮತ್ತು ಕಾಫಿ ಪಾರ್ಕ್ ಮೂಲಕ ಕೃಷಿ ಉತ್ಪನ್ನಗಳಲ್ಲಿ ಮೌಲ್ಯವರ್ಧನೆಯ ಗುರಿ ಇಟ್ಟುಕೊಳ್ಳಲಾಗಿದೆ.
5. ನಾಲ್ಕನೇ ವರ್ಷದ ವೇಳೆಗೆ ಎಲ್‌ಡಿಎಫ್ ಸರಕಾರ 2.8ಲಕ್ಷ ಮನೆಗಳನ್ನು ಪೂರ್ಣಗೊಳಿಸಿತ್ತು. ಈ ವರ್ಷ 'ಲೈಫ್' ಮಿಶನ್ ಮೂಲಕ ಇನ್ನೂ 1.5ಲಕ್ಷ ಮನೆಗಳು ಪೂರ್ಣಗೊಳ್ಳುತ್ತವೆ. ಇದನ್ನು ಮುಂದುವರೆಸಿ ಮುಂದಿನ 5ವರ್ಷಗಳಲ್ಲಿ 5ಲಕ್ಷ ನಿವಾಸಗಳನ್ನು ಕಟ್ಟುವ ಗುರಿಯನ್ನು ಪ್ರಣಾಳಿಕೆ ಇಟ್ಟುಕೊಂಡಿದೆ. ಮುಖ್ಯವಾಗಿ ಭೂಹೀನರಿಗೆ ಮತ್ತು ವಸತಿಹೀನರಿಗೆ ಅಪಾರ್ಟ್‌ಮೆಂಟ್ ಸಂಕೀರ್ಣಗಳ ಮೂಲಕ, ಪರಿಶಿಷ್ಟ ಜಾತಿ/ಬುಡಕಟ್ಟು ಕುಟುಂಬಗಳಿಗೆ ಸಂಪೂರ್ಣ ವಸತಿ ಯೋಜನೆ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನಗಳಿಗೆ ಒಂದು ಎಕ್ರೆ ಕೃಷಿ ಭೂಮಿಯ ಮೂಲಕ ಇದನ್ನು ಸಾಧಿಸಲಾಗುವುದು.
6. ಪರಿಶಿಷ್ಟ ಜಾತಿ ಘಟಕ ಯೋಜನೆ(ಎಸ್‌ಸಿಪಿ) ಮತ್ತು ಬುಡಕಟ್ಟು ಉಪಯೋಜನೆ(ಟಿಎಸ್‌ಪಿ)ಗಳಿಗೆ ಆಯಾಯ ವಿಭಾಗಗಳ ಜನಸಂಖ್ಯೆಯ ಅನುಪಾತದಲ್ಲಿ ಹಣ ನೀಡಿಕೆ ಮಾಡುವ ಏಕೈಕ ರಾಜ್ಯ ಕೇರಳ. ಇದನ್ನು ಮುಂದುವರೆಸಿಕೊಂಡು, 'ಊರುಕೂಟ್ಟಂ'(ಬುಡಕಟ್ಟು ನೆರೆಹೊರೆ ಗುಂಪುಗಳು) ಮೂಲಕ ಟಿಎಸ್‌ಪಿ ಗೆ ಹಣ ಒದಗಿಸಲಾಗುವುದು ಮತ್ತು ಸಣ್ಣ ಅರಣ್ಯ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡಲಾಗುವುದು.
7. ಕಳೆದ ಐದು ವರ್ಷಗಳಲ್ಲಿ 500 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕುಟುಂಬ ಆರೋಗ್ಯ ಕೇಂದ್ರಗಳಾಗಿ ಉನ್ನತೀಕರಿಸಲಾಗಿತ್ತು. ಮತ್ತು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಸೂಪರ್ ಸ್ಪೆಶಾಲಿಟಿ ಸೇವೆಗಳನ್ನು ಲಭ್ಯಗೊಳಿಸಲಾಗಿದೆ. ಮುಂದೆ ಕುಟುಂಬ ಆರೋಗ್ಯ ಕೇಂದ್ರ ಗಳಲ್ಲಿ ದಿನಕ್ಕೆ ಎರಡು ಬಾರಿ ಹೊರರೋಗಿ ಸೇವೆಗಳನ್ನು ಒದಗಿಸಲಾಗುವುದು. ಉಚಿತ ಒಳರೋಗಿ ಆರೈಕೆಯನ್ನು 20ಲಕ್ಷ ಕುಟುಂಬಗಳಿಗೆ 5ಲಕ್ಷ ರೂ. ವರೆಗೆ ಸಾರ್ವಜನಿಕ ಆಸ್ಪತ್ರೆಗಳಲ್ಲೂ ಮತ್ತು ಖಾಸಗಿ ಆಸ್ಪತ್ರೆಗಳಲ್ಲೂ ಒದಗಿಸುವ ಮತ್ತು ಉಳಿದವರಿಗೆ 'ಕಾರುಣ್ಯ' ಯೋಜನೆಯ ಅಡಿಯಲ್ಲಿ 2ಲಕ್ಷ ರೂ.ಗಳ ವರೆಗೆ ಒದಗಿಸುವ ಗುರಿಯನ್ನು ಪ್ರಣಾಳಿಕೆ ಇಟ್ಟುಕೊಂಡಿದೆ.
8. ಎಲ್.ಡಿ.ಎಫ್. ಸರಕಾರ ವಿದ್ಯುತ್ ಹೆದ್ದಾರಿಗಳು, ಅನಿಲ ಪೈಪ್‌ಲೈನ್‌ಗಳು, ರಾಷ್ಟ್ರೀಯ ಹೆದ್ದಾರಿಗಳನ್ನು ಆರು ಪಥಗಳಿಗೇರಿಸುವುದು ಮತ್ತು ಡಿಜಿಟಲ್ ಕ್ರಾಂತಿಯ ಗುರಿಯಿಂದ ಒಂದು ರಾಜ್ಯವ್ಯಾಪಿ ಫೈಬರ್ ಆಪ್ಟಿಕ್ ಜಾಲದ ಮೂಲಕ ಮೂಲರಚನೆಗಳಲ್ಲಿ ಪ್ರಮುಖ ಮುನ್ನಡೆಯನ್ನು ಸಾಧಿಸಿದೆ. ಇನ್ನೂ ಮುಗಿಯದಿರುವ ಈ ಕಾರ್ಯಭಾರಗಳನ್ನು ಪೂರ್ಣಗೊಳಿಸಲಾಗುವುದು; ಟ್ರಾನ್ಸ್‌ಗ್ರಿಡ್, ಕೆ–ಫೋನ್, ಜಲಮಾರ್ಗಗಳು, ಕರಾವಳಿ–ಬೆಟ್ಟ ಹೆದ್ದಾರಿಗಳು, ಕೈಗಾರಿಕಾ ಪಾರ್ಕ್‌ಗಳು, ಆಸ್ಪತ್ರೆಗಳು ಮತ್ತು ವಿಶ್ವವಿದ್ಯಾಲಯ ಕೇಂದ್ರಗಳ ನವೀಕರಣವನ್ನು ಕೆಐಐಎಫ್‌ಬಿ ಮೂಲಕ 60,000 ಕೋಟಿ ರೂ.ಗಳ ಹೂಡಿಕೆಗಳೊಂದಿಗೆ ಮೂಲರಚನೆಯನ್ನು ಆಧುನೀಕರಿಸುವ ಗುರಿಯನ್ನು ಪ್ರಣಾಳಿಕೆ ಜನಗಳ ಮುಂದಿಟ್ಟಿದೆ. ಹೊಸ ಕೈಗಾರಿಕಾ ಕಾರಿಡಾರ್‌ಗಳಾದ ಕೊಚ್ಚಿ–ಪಾಲಕ್ಕಾಡ್, ಕೊಚ್ಚಿ–ಮಂಗಳೂರು, ತಿರುವನಂತಪುರ ರಾಜಧಾನಿ ನಗರ ಪ್ರಾದೇಶಿಕ ಅಭಿವೃದ್ಧಿ ಮತ್ತು ಉತ್ತರ ದಕ್ಷಿಣ ಬೆಳ್ಳಿ ಮಾರ್ಗ(ರೈಲ್ವೆ)ದಲ್ಲಿ ಕೆಲವು ಮಹಾ ಪರಿಯೋಜನೆಗಳನ್ನು ಕೈಗೆತ್ತಿಕೊಳ್ಳುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಲೇ ಹೂಡಿಕೆದಾರರಿಗೆ ಪೂರ್ಣ ಬೆಂಬಲ ನೀಡಲಾಗುವುದು ಮತ್ತು ಕೇರಳವನ್ನು 'ಸುಗಮ ವ್ಯವಹಾರ' ಶ್ರೇಯಾಂಕಗಳಲ್ಲಿ ಉನ್ನತ ಹತ್ತು ರಾಜ್ಯಗಳ ಪಟ್ಟಿಗೆ ಒಯ್ಯಲಾಗುವುದು ಎಂದೂ ಎಲ್‌ಡಿಎಫ್ ಪ್ರಣಾಳಿಕೆ ಹೇಳಿದೆ.













ತಮಿಳುನಾಡು: ಡಿಎಂಕೆ ನೇತೃತ್ವದ ಪ್ರಗತಿಪರ ಜಾತ್ಯತೀತ ರಂಗ ವಿಜಯದತ್ತ

ತಮಿಳುನಾಡಿನ 16ನೇ ವಿಧಾನಸಭೆಯ 234 ಸ್ಥಾನಗಳಿಗೆ ಎಪ್ರಿಲ್ 6 ರಂದು ಮತದಾನ ನಡೆಯುತ್ತಿದೆ. ಮಾರ್ಚ್ 22 ರಂದು ಅಭ್ಯರ್ಥಿಗಳ ಅಂತಿಮ ಪಟ್ಟಿ ಸಿದ್ಧವಾದರೂ, ಅದಕ್ಕೂ ಮುಂಚೆ ಕಳೆದ ಆರು ತಿಂಗಳಿಂದಲೇ ಸದ್ದಿಲ್ಲದೆ ನಡೆಯುತ್ತ ಬಂದಿದ್ದ ಚುನಾವಣಾ ಪ್ರಚಾರ ಈಗ ಕೊನೆಯ ಹಂತವನ್ನು ತಲುಪುತ್ತಿದೆ.



ಇಲ್ಲಿಯೂ ಮುಖ್ಯ ಚುನಾವಣಾ ಸಮರ 1972ರಿಂದ ಎರಡು ಪ್ರಾದೇಶಿಕ ಪಕ್ಷಗಳ ನಡುವೆಯೇ ನಡೆಯುತ್ತ ಬಂದಿದೆ. ಒಂದೆಡೆಯಲ್ಲಿ ಎಐಎಡಿಎಂಕೆ ಮತ್ತು ಇನ್ನೊಂದೆಡೆಯಲ್ಲಿ ಡಿಎಂಕೆ ಇವರ ಅಥವ ಇವರುಗಳ ನೇತೃತ್ವದ ರಂಗಗಳ ನಡುವೆಯೇ ನಡೆಯುತ್ತ ಬಂದಿದೆ. ಆದರೆ ಈ ಬಾರಿಯ ಚುನಾವಣೆಗಳ ವೈಶಿಷ್ಟ್ಯವೆಂದರೆ, ಬಹಳ ವರ್ಷಗಳಿಂದ ಈ ರಾಜ್ಯದ ಅತ್ಯಂತ ಜನಪ್ರಿಯ ಮತ್ತು ಅನುಭವೀ ಮುಖಂಡರಾಗಿದ್ದ ಎಐಎಡಿಎಂಕೆಯ ಜೆ.ಜಯಲಲಿತಾ ಮತ್ತು ಡಿಎಂಕೆಯ ಕರುಣಾನಿಧಿಯವರಿಲ್ಲದೆ ಇವು ನಡೆಯುತ್ತಿವೆ. ಅಲ್ಲದೆ ಇದುವರೆಗೆ ಅಂಚಿನಲ್ಲಿಯೇ ಉಳಿದಿದ್ದ ಬಿಜೆಪಿ ಈ ಬಾರಿ ಎಐಎಡಿವಂಕೆಯ ಬೆನ್ನ ಮೇಲೆ ಸವಾರಿ ಮೂಲಕ ನಿರ್ಣಾಯಕ ಪಾತ್ರ ವಹಿಸುತ್ತೇನೆನ್ನುವ ಹುಮ್ಮಸ್ಸಿನಲ್ಲಿದೆ.

ಈ ಬಾರಿಯ ಚುನಾವಣೆಗಳಲ್ಲಿ ಈ ಎರಡು ಪಕ್ಷಗಳ ನೇತೃತ್ವದ ಪ್ರಧಾನ ರಂಗಗಳಲ್ಲದೆ ಇನ್ನೂ ಮೂರು ರಂಗಗಳು ಕಣದಲ್ಲಿವೆ.

ಡಿಎಂಕೆ ನೇತೃತ್ವದ ರಂಗದಲ್ಲಿ ಕಾಂಗ್ರೆಸ್, ಎಂಡಿಎಂಕೆ, ವಿಸಿಕೆ, ಮತ್ತಿತರ ಸಣ್ಣ ಪಕ್ಷಗಳು ಹಾಗೂ ಎರಡು ಎಡಪಕ್ಷಗಳಾದ ಸಿಪಿಐ ಮತ್ತು ಸಿಪಿಐ(ಎಂ) ಇವೆ. ಡಿಎಂಕೆ 173 ಸ್ಥಾನಗಳಲ್ಲಿ ಮತ್ತು ಕಾಂಗ್ರೆಸ್ 25 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಎಐಎಡಿಎಂಕೆಯ ರಂಗದಲ್ಲಿ ಪಿಎಂಕೆ, ಬಿಜೆಪಿ, ತಮಿಳು ಮಾನಿಲ ಕಾಂಗ್ರೆಸ್(ವಾಸನ್ ನೇತೃತ್ವ) ಮತ್ತೆ ಕೆಲವು ಸಣ್ಣ ಪಕ್ಷಗಳಿವೆ. ಎಐಎಡಿಎಂಕೆ 179 ಸ್ಥಾನಗಳಲ್ಲಿ, ಪಿಎಂಕೆ 23 ಮತ್ತು ಬಿಜೆಪಿ 20 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಇವೆರಡಲ್ಲದೆ ಈ ಬಾರಿ ಜನಪ್ರಿಯ ಚಿತ್ರನಟ ಕಮಲ್ ಹಾಸನ್ ನೇತೃತ್ವದ ಮಕ್ಕಳ್ ನೀಧಿ ಮಯ್ಯಂ ಪಕ್ಷದ ನೇತೃತ್ವದ ರಂಗ ಸ್ಪರ್ಧಿಸುತ್ತಿದೆ. ಇನ್ನೆರಡು ರಂಗಗಳೆಂದರೆ ಅಮ್ಮಾ ಮಕ್ಕಳ್ ಮುನ್ನೇತ್ರ ಕಳಗಂ ಪಕ್ಷದ ಮುಖಂಡ ಟಿ ಟಿ ವಿ ದಿನಕರನ್ ನೇತೃತ್ವದ ರಂಗ ಮತ್ತು ನಾಮ್ ತಮಿಳರ್ ಕಚ್ಚಿ ಪಕ್ಷದ ಸೀಮನ್ ನೇತೃತ್ವದ ಮತ್ತೊಂದು ರಂಗ.

ಈ ರಂಗಗಳು ಮತದಾರರಿಗೆ ಹಲವು ಉಚಿತ ಸೇವೆಗಳ ಆಶ್ವಾಸನೆಗಳನ್ನು ಕೊಡುವುದರಲ್ಲಿ ಸ್ಪರ್ಧೆಗಿಳಿದಿವೆ.

ಇಲ್ಲಿನ ಒಟ್ಟಾರೆ ವಾತಾವರಣವೆಂದರೆ ರಾಜ್ಯದಲ್ಲಿನ ಆಳುವ ಪಕ್ಷ ಎಐಎಡಿಎಂಕೆ ಮತ್ತು ಕೇಂದ್ರದಲ್ಲಿನ ಆಳುವ ಪಕ್ಷ ಬಿಜೆಪಿಯ ವಿರುದ್ಧ ಆಕ್ರೋಶ.

ಜಯಲಲಿತಾ ರವರ ಮರಣದ ನಂತರ ಎಐಎಡಿಎಂಕೆ ಪಕ್ಷದೊಳಗಿನ ಕಿತ್ತಾಟದಿಂದಾಗಿ ಎಡಪ್ಪಾಡಿ ಪಳನಿಚಾಮಿ(ಇಪಿಎಸ್) ಬಿಜೆಪಿಯ ಕೃಪೆಯಿಂದ ಮುಖ್ಯಮಂತ್ರಿ ಸ್ಥಾನದಲ್ಲಿದ್ದಾರೆ. ಅವರ ಗುಂಪು, ಒ ಪನ್ನೀರ್ ಸೆಲ್ವಂ (ಒಪಿಎಸ್) ನೇತೃತ್ವದ ಗುಂಪು, ಶಶಿಕಲಾ ಮತ್ತು ಇತರರ ಗುಂಪುಗಳ ನಡುವಿನ ಕಿತ್ತಾಟದಲ್ಲಿ ದಿಲ್ಲಿಯ ಬಿಜೆಪಿ ಮುಖಂಡರ ಮಧ್ಯಸ್ಥಿಕೆ ಮತ್ತು ಅವರ ಸಿಬಿಐ/ಇಡಿ/ಐಟಿ ದಾಳಿಗಳ ಬೆದರಿಕೆಗಳು ಎಐಎಡಿಎಂಕೆ ಮುಖಂಡರನ್ನು ಬಿಜೆಪಿಯ ಸೇವಕರ ಮಟ್ಟಿಗೆ ಇಳಿಸಿವೆ ಎನ್ನಲಾಗುತ್ತಿದೆ. ಈ ಮೂಲಕ ತಮಿಳುನಾಡಿನಲ್ಲಿ ಕಾಲೂರುವ ಬಿಜೆಪಿಯ ಹಲವು ಹತಾಶ ಪ್ರಯತ್ನಗಳ ನಂತರ ಈ ಬಾರಿ ಅವಕಾಶ ಸಿಕ್ಕಂತೆ ಕಾಣುತ್ತದೆ.

ಆದರೆ ಇದು ಮತ್ತು ಸ್ವತಃ ಕೇಂದ್ರ ಸರಕಾರದ ಜನ-ವಿರೋಧಿ ಧೋರಣೆಗಳು ಈ ರಂಗಕ್ಕೆ ಮಾರಕವಾಗುವಂತೆ ಕಾಣುತ್ತಿದೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ರಾಜ್ಯ ಸರಕಾರದ ಬೊಕ್ಕಸ ಖಾಲಿಯಾಗಿದೆ. ಆದರೂ ಒಂದಾದ ಮೇಲೊಂದರಂತೆ ಸ್ಕೀಂಗಳ ಪ್ರಕಟಣೆಗಳು ನಡೆಯುತ್ತಲೇ ಇವೆ. ಹಲವು ಬಾರಿ ಕೇಂದ್ರದಲ್ಲಿನ ಸರಕಾರದಂತೆ ಹಳೆಯ ಸ್ಕೀಂಗಳನ್ನೇ ಹೊಸ ಹಸರುಗಳಲ್ಲಿ ಪ್ರಕಟಿಸಲಾಗುತ್ತಿದೆ.

ಅಲ್ಲದೆ ಪರಸ್ಪರ ಕಿತ್ತಾಡುತ್ತಿರುವ ಗುಂಪುಗಳ ನಡುವೆ ನಡೆಯುತ್ತಿರುವ ಆಳ್ವಿಕೆಯಲ್ಲಿ ಭ್ರಷ್ಟಾಚಾರ ಹೊಸ-ಹೊಸ ಮಟ್ಟಗಳಿಗೆ ಏರುತ್ತಿದೆ.

ಇನ್ನೊಂದೆಡೆಯಲ್ಲಿ ತಮ್ಮ ಕಾರ್ಯಕರ್ತರ ನಡುವೆ "ಥಳಪತಿ ಸ್ಟಾಲಿನ್' ಎಂದು ಕರೆಯಲ್ಪಡುತ್ತಿರುವ ಡಿಎಂಕೆ ಮುಖಂಡರ ನೇತೃತ್ವದಲ್ಲಿ ಆ ಪಕ್ಷ ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ಪ್ರಚಾರ ನಡೆಸುತ್ತಿದೆ. ಡಿಎಂಕೆ ಮುಖಂಡರುಗಳು ಈಗಾಗಲೇ ಎರಡು ಸುತ್ತುಗಳ ಪ್ರಚಾರ ಕಾರ್ಯ ಮುಗಿಸಿದ್ದಾರೆ. ಒಂದೆಡೆಯಲ್ಲಿ ಡಿಎಂಕೆ ರಂಗದ ಶಿಸ್ತಿನ ಮತ್ತು ಯೋಜಿತ ಪ್ರಚಾರ, ಇನ್ನೊಂದೆಡೆಯಲಿ ಇಪಿಎಸ್-ಒಪಿಎಸ್ ನೇತೃತ್ವದ ಆಡಳಿತ ಮತ್ತು ಅವರ ಪಕ್ಷ, ಸಾಲದ್ದಕ್ಕೆ ರಾಜ್ಯದಲ್ಲಿ ಕೋಮುವಾದಿ ಎಂಬ ಕುಖ್ಯಾತಿಯನ್ನು ಅಂಟಿಸಿಕೊಂಡಿರುವ ಬಿಜೆಪಿಯೊಂದಿಗೆ ಮೈತ್ರಿ ಮುರನೇ ಬಾರಿ ಅಧಿಕಾರಕ್ಕೆ ಬರುವ ಸಾಧ್ಯತೆಗಳನ್ನು ಬಹಳಷ್ಟು ಕ್ಷೀಣಗೊಳಿಸಿದೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ನಿಜ, ಪ್ರತಿಸ್ಪರ್ಧಿ ರಂಗ ಕೇಂದ್ರ ಸರಕಾರದ ಆಡಳಿತ ಯಂತ್ರದ ದುರುಪಯೋಗ, ಬಿಜೆಪಿಯ ಹಣಬಲ ಮತ್ತು ಕುಟಿಲ ಪ್ರಚಾರಗಳಿಂದ ಅಡೆ-ತಡೆಗಳನ್ನು ಎದುರಿಸಬೇಕಾಗಿ ಬರುತ್ತಿದೆ. ಆದರೂ ಹಲವು ರಹಸ್ಯ ಮತ್ತು ಬಹಿರಂಗ ಸರ್ವೆಗಳು "ಟೀಮ್ ಸ್ಟಾಲಿನ್" ಭಾರೀ ಬಹುಮತ ಗಳಿಸುತ್ತದೆ ಎಂದು ಹೇಳುತ್ತಿವೆ.

ಪುದುಚೇರಿಯಲ್ಲಿ

ಪುದುಚೇರಿ ಕೇಂದ್ರಾಡಳಿತ ಪ್ರದೇಶದ 30 ಸದಸ್ಯರಿರುವ ವಿಧಾನಸಭೆಗೂ ಎಪ್ರಿಲ್ 6ರಂದು ಮತದಾನ ನಡೆಯುತ್ತದೆ. ಇಲ್ಲಿ ಎರಡು ರಂಗಗಳು ಸ್ಪಧೆಯಲ್ಲಿವೆ. ಒಂದು ಕಾಂಗ್ರೆಸ್-ಡಿಎಂಕೆ ರಂಗ ,ಮತ್ತೊಂದು ಎನ್.ಆರ್.ಕಾಂಗ್ರೆಸ್- ಬಿಜೆಪಿ-ಎಐಎಡಿಎಂಕೆ ರಂಗ.

ಸಿಪಿಐ(ಎಂ) ಮುಥಿಯಾಲ್‌ಪೇಟ್ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತಿದೆ. ವಿ.ಸರವಣನ್ ಇಲ್ಲಿ ಪಕ್ಷದ ಅಭ್ಯರ್ಥಿ. ಮಾಹೆ ಕ್ಷೇತ್ರದಿಂದ ಮಾಸ್ಟರ್ ಹರಿದಾಸ್ ಸಿಪಿಐ(ಎಂ) ಬೆಂಬಲಿತ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಉಳಿದ ಎಲ್ಲ 28 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಕಾಂಗ್ರೆಸ್-ಡಿಎಂಕೆ ರಂಗವನ್ನು ಬೆಂಬಲಿಸುತ್ತಿದೆ, ಎನ್.ಆರ್.ಕಾಂಗ್ರೆಸ್-ಬಿಜೆಪಿ-ಎಐಎಡಿಎಂಕೆ ರಂಗದ ಅಭ್ಯರ್ಥಿಗಳನ್ನು ಸೋಲಿಸಲು ಕರೆ ನೀಡಿದೆ.

ಎಡಪಕ್ಷಗಳ ಸ್ಪರ್ಧೆ

ಡಿಎಂಕೆ ನೇತೃತ್ವದ ಪ್ರಗತಿಪರ ಜಾತ್ಯತೀತ ರಂಗದ ಭಾಗವಾಗಿ ಸಿಪಿಐಎಂ ಮತ್ತು ಸಿಪಿಐ ತಲಾ ಆರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಸಿಪಿಐ ತಿರುತ್ತುರೈಪೂಂಡಿ, ಶಿವಗಂಗೈ, ವಾಲ್ಪರೈ, ಭವಾನಿಸಾಗರ್, ತಿರುಪ್ಪುರ್ ಉತ್ತರ ಮತು ಥಾಲಿಯಲ್ಲಿ ಸ್ಪರ್ಧಿಸುತ್ತಿದೆ.

ಸಿಪಿಐ(ಎಂ) ಸ್ಪರ್ಧಿಸುವ ಕ್ಷೇತ್ರಗಳು ಮತ್ತು ಅಭ್ಯರ್ಥಿಗಳ ಪಟ್ಟಿ ಈ ಕೆಳಗಿನಂತಿದೆ:

ಕೀಲ್‌ವೇಲೂರ್(ಎಸ್‌ಸಿ)-ನಾಗೈ ಮಾಲಿ
ಕೋವಿಲ್‌ಪಟ್ಟಿ- ಕೆ.ಶ್ರೀನಿವಾಸನ್
ತಿರುಪರಂಕುಂದ್ರಂ-ಎಸ್.ಕೆ.ಪೊನ್ನುಥಯಿ
ದಿಂಡಿಗಲ್- ಎನ್.ಪಾಮಡಿ
ಗಂಧರ್ವಕೊಟ್ಟೈ(ಎಸ್‌ಸಿ)- ಎಂ.ಚಿನ್ನದುರೈ
ಹರೂರ್(ಎಸ್‌ಸಿ)- ಎ.ಕುಮಾರ್

ಸಿಪಿಐ(ಎಂ) ಇಡೀ ರಾಜ್ಯದಲ್ಲಿ ಎರಡು ಸುತ್ತುಗಳ ಪ್ರಚಾರ ನಡೆಸಿದೆ. ರಾಜ್ಯ ಮುಖಂಡರಲ್ಲದೆ, ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್ ಮತ್ತು ಬೃಂದಾ ಕಾರಟ್ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಎಡಪಕ್ಷಗಳು ಮತ್ತು ಡಿಎಂಕೆ ಪರವಾಗಿ ಪ್ರಚಾರದಲ್ಲಿ ಭಾಗವಹಿಸಿದ್ದಾರೆ. ರಾಜ್ಯದಲ್ಲಿ ಎಐಎಡಿಎಂಕೆ ಗೆ ಮತ ಎಂದರೆ ಬಿಜೆಪಿ ಮತ್ತು ಆರೆಸ್ಸೆಸ್‌ಗೆ ಮತ ಎಂದು ಅವರು ಹೇಳಿದ್ದಾರೆ.


ದಿಂಡಿಗಲ್


ತಿರುಪರಂಕುಂದ್ರಂ


ತಿರುಪರಂಕುಂದ್ರಂ


ಚೆನ್ನೈ ಹಾರ್ಬರ್

ಪ್ರಿಂಟ್ ಪತ್ರಿಕೆಗಳು ಮತ್ತು ಟಿವಿ ಗೆ ಅನ್ವಯವಾಗುವ ನಿಬಂಧನೆಗಳಲ್ಲಿ ಸರಕಾರಕ್ಕೆ ಯಾವುದೇ ಪಾತ್ರವಿಲ್ಲ. ಈ ಮಾಧ್ಯಮ ಸಂಘಟನೆಗಳ ಸ್ವಯಂ–ನಿಬಂಧನೆಗಳಷ್ಟೇ ಇರುವುದು. ಪ್ರಿಂಟ್ ಪತ್ರಿಕೆಗಳಿಗೆ ಪ್ರೆಸ್ ಕೌನ್ಸಿಲ್ ಮತ್ತು ಟಿವಿ ಗಳಿಗೆ ನ್ಯೂಸ್ ಬ್ರಾಡ್ ಕಾಸ್ಟಿಂಗ್ ಸ್ಟಾಂಡರ್ಡ್ಸ್ ಅಥಾರಿಟಿ ಯಂತಹ ಮಾಧ್ಯಮ ಸಂಘಟನೆಗಳು ಸ್ವಯಂ–ನಿಬಂಧನೆಗಳನ್ನು ಜಾರಿ ಮಾಡುತ್ತವೆ. ಆದರೆ ಈಗ ತಂದಿರುವ ಐಟಿ ನಿಯಮ 2021ರಲ್ಲಿ ವೆಬ್ ಮಾಧ್ಯಮಗಳ ನಿಬಂಧನೆಯಲ್ಲಿ ಸರಕಾರಕ್ಕೆ ನೇರ ಮತ್ತು ಪ್ರಧಾನ ಪಾತ್ರವಿದೆ. ಇದು ಖಂಡಿತ 'ಸಮತಟ್ಟಾದ ಆಟದ ಮೈದಾನ' ಅಲ್ಲ. ಈ ನಿಯಮಗಳಲ್ಲಿ ದೂರು ನಿರ್ವಹಣೆ/ಪರಿಹಾರ ಮತ್ತು ಮೇಲ್ವಿಚಾರಣೆಯ ವಿವಿಧ ವಿಧಾನಗಳನ್ನು ನೋಡಿದರೆ, ಅವೆಲ್ಲದರಲ್ಲಿ (ವಕೀಲ, ಪೋಲಿಸ್ ಮತ್ತು ಜಜ್ ಈ) ಎಲ್ಲ ಪಾತ್ರಗಳನ್ನು ವಹಿಸುವ ಸರಕಾರದ ಕಟುಹಸ್ತ ಕಾಣುತ್ತದೆ "ಮೆದುವಾದ ಮೇಲುಸ್ತುವಾರಿ ವಿಧಾನ" ಕಾಣುವುದಿಲ್ಲ. ವಿವಾದ ಪರಿಹರಿಸಲು ಸರಕಾರದ ಮರ್ಜಿಯಿಂದ ಸ್ವತಂತ್ರವಾದ ಅರೆ–ನ್ಯಾಯಿಕ ಸಂಸ್ಥೆಯ ಸುತ್ತ ಕಟ್ಟಲಾದ ವ್ಯವಸ್ಥೆಯಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, ಐಟಿ ನಿಯಮಗಳು 2021, ಸರಕಾರವನ್ನು ಟೀಕಿಸುವ ವೆಬ್ ಮಾಧ್ಯಮಗಳ ಮೇಲೆ ಕಟುಕ್ರಮಗಳನ್ನು ಯಾವುದೇ ಲಂಗುಲಾಗಾಮಿಲ್ಲದೆ ತೆಗೆದುಕೊಳ್ಳುವ ಅಧಿಕಾರವನ್ನು ಸರಕಾರಕ್ಕೆ ಕೊಡುವ ಮೂಲಕ ಇವುಗಳ ಸಾರಾ ಸಗಟು ಸೆನ್ಸಾರಿನತ್ತ ದಾಪುಗಾಲಿಟ್ಟಿದೆ.

"ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮತ್ತು ಡಿಜಿಟಲ್ ಮಾಧ್ಯಮ ನೀತಿಸಂಹಿತೆಗಳಿಗೆ ಮಾರ್ಗದರ್ಶಿ) ನಿಯಮಗಳು, 2021"

ವೆಬ್ ಮಾಧ್ಯಮಗಳ ಸೆನ್ಸಾರಿನತ್ತ ದೊಡ್ಡ ಹೆಜ್ಜೆ

ವಸಂತರಾಜ ಎನ್.ಕೆ.

ಇತ್ತೀಚೆಗೆ ಫೇಸ್ ಬುಕ್, ವಾಟ್ಸಪ್, ಟ್ವಿಟರ್, ಯೂ ಟ್ಯೂಬ್ ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳು, ಅಮೆಜಾನ್ ಮುಂತಾದ ಫಿಲಂ/ಟಿವಿ–ವೆಬ್ ಧಾರಾವಾಹಿ ವಿಡಿಯೋ ಹರಿಯಬಿಡುವ ವೇದಿಕೆಗಳು ಅವುಗಳ 'ದುರ್ಬಳಕೆ'ಗಳ ಕಾರಣದಿಂದ ಭಾರೀ ಸುದ್ದಿಯಲ್ಲಿದ್ದವು. 'ತಾಂಡವ್' ಎಂಬ ವೆಬ್–ಧಾರಾವಾಹಿಯ ವಿರುದ್ಧ 'ಜಾತಿ ನಿಂದನೆ'ಯ ಮತ್ತು 'ಒಂದು ಜನವಿಭಾಗದ ಭಾವನೆಗಳನ್ನು ನೋಯಿಸಿದ" ಆಪಾದನೆಗಳು ಕೇಳಿಬಂದವು. ಫೇಸ್ ಬುಕ್, ವಾಟ್ಸಪ್, ಟ್ವಿಟರ್, ಯೂ ಟ್ಯೂಬ್ ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳು ಒಂದು ಕಡೆ ಫೇಕ್ ಸುದ್ದಿಗಳ, ಮಹಿಳೆಯರು ಮತ್ತು ಒಂದು ಸಿದ್ಧಾಂತದ (ಹೆಚ್ಚಾಗಿ ಉಗ್ರ ಬಲಪಂಥೀಯ) ಜನರಿಗೆ ಇಷ್ಟವಿಲ್ಲದ ಅಭಿಪ್ರಾಯಗಳನ್ನು ಹೊಂದಿದ ವ್ಯಕ್ತಿಗಳನ್ನು 'ಟ್ರಾಲ್' ಮಾಡಿ ನಿಂದಿಸುವ ಬೆದರಿಸುವ ಸೈಬರ್ ಗೂಂಡಾಗಿರಿಯ ತಾಣಗಳಾಗಿಬಿಟ್ಟಿವೆ. ಇನ್ನೊಂದು ಕಡೆ ಫೇಸ್ ಬುಕ್ ನಂತಹ ಸಾಮಾಜಿಕ ಮಾಧ್ಯಮ ವೇದಿಕೆಗಳು, ಫೇಕ್ ಸುದ್ದಿಗಳನ್ನು 'ಟ್ರಾಲಿಂಗ'ನ್ನು ತಡೆಯುವ ನೆಪದಲ್ಲಿ ಬೇಕಾಬಿಟ್ಟಿಯಾಗಿ ಬಳಕೆದಾರರ ಅಕೌಂಟುಗಳನ್ನು ನಿಷ್ಕ್ರಿಯಗೊಳಿಸಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಮಾಡುತ್ತಿವೆ, ಖಾಸಗಿತನವನ್ನು ತಮ್ಮ ಲಾಭಕ್ಕಾಗಿ ಬಲಿ ಕೊಡುತ್ತಿವೆ ಎಂಬ ಬಲವಾದ ಆಪಾದನೆಗಳು ಕೇಳಿಬರುತ್ತಿವೆ. ಇವೆಲ್ಲವನ್ನು ಎದುರಿಸಿ ಪರಿಹರಿಸಲು ಸಾಮಾಜಿಕ ಮಾಧ್ಯಮಗಳು ಮತ್ತು ವಿವಿಧ ವೆಬ್ ವೇದಿಕೆಗಳಿಗೆ ನಿಬಂಧನೆಗಳು ಬೇಕು ಎಂಬ ಅನಿಸಿಕೆ ಬಲವಾಗುತ್ತಿದೆ.

ಈ ಸನ್ನಿವೇಶದಲ್ಲಿ ಭಾರತ ಸರಕಾರ "ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮತ್ತು ಡಿಜಿಟಲ್ ಮಾಧ್ಯಮ ನೀತಿಸಂಹಿತೆಗಳಿಗೆ ಮಾರ್ಗದರ್ಶಿ) ನಿಯಮಗಳು, 2021"ರ ಘೋಷಣೆಯನ್ನು ಫೆಬ್ರುವರಿ ಕೊನೆಯಲ್ಲಿ ಮಾಡಿದೆ. ಇದು 2011ರ ಮಾಹಿತಿ ತಂತ್ರಜ್ಞಾನ ನಿಯಮಗಳ ಮುಂದುವರಿಕೆಯಾಗಿ ಬಂದಿದೆ. ಹಿಂದಿನ ನಿಯಮಗಳು ಮಧ್ಯವರ್ತಿ ವೆಬ್ ವೇದಿಕೆಗಳಿಗೆ ಮಾತ್ರ ಅನ್ವಯವಾಗುತ್ತಿದ್ದವು. ಫೇಸ್ ಬುಕ್, ಟ್ವಿಟರ್ ಮುಂತಾದವುಗಳು ಬಳಕೆದಾರರ ಅಭಿವ್ಯಕ್ತಿಯನ್ನು ಹಂಚಿಕೊಳ್ಳುವ ವೇದಿಕೆ ಮಾತ್ರ. ಈ ವೇದಿಕೆಗಳು ಬಳಕೆದಾರ ಮತ್ತು ಸಾರ್ವಜನಿಕರ (ವೇದಿಕೆಯ ಇತರ ಬಳಕೆದಾರರ) ನಡುವಿನ ಮಧ್ಯವರ್ತಿ. ಅವುಗಳು "ಆ ಅಭಿವ್ಯಕ್ತಿಯನ್ನು ಹೇಳಿ ಬರೆಯಿಸುವುದಿಲ್ಲ, 'ಸಂಪಾದನೆ' ಮಾಡುವುದಿಲ್ಲ, ಪ್ರಭಾವ ಬೀರುವುದಿಲ್ಲ, ಸೆನ್ಸಾರ್ ಮಾಡುವುದಿಲ್ಲ" ಎಂಬ ಹೇಳಿಕೆಯ ಅರ್ಥದಲ್ಲಿ ಅವು ಮಧ್ಯವರ್ತಿಗಳು ಮಾತ್ರ ಎಂದು ಹೇಳಲಾಗುತ್ತದೆ. ಆದರೆ ವಾಸ್ತವದಲ್ಲಿ ಅವು ಬರಿಯ ಮಧ್ಯವರ್ತಿಗಳಲ್ಲ.

ಆದರೆ ಹೊಸ ನಿಯಮಗಳಲ್ಲಿ ಡಿಜಿಟಲ್ ಮಾಧ್ಯಮಗಳನ್ನು ಸೇರಿಸಿದ್ದು, ಅವುಗಳೆರಡಕ್ಕೂ ನೀತಿಸಂಹಿತೆ ರೂಪಿಸಲು ಮಾರ್ಗದರ್ಶಿ ನಿಯಮಗಳನ್ನು ತರಲಾಗಿದೆ. ಇಲ್ಲಿ ಡಿಜಿಟಲ್ ಮಾಧ್ಯಮಗಳು ಎಂದರೆ – 'ದಿ ವೈರ್', 'ದಿ ಪ್ರಿಂಟ್', 'ನ್ಯೂಸ್ ಕ್ಲಿಕ್', 'ನಾನುಗೌರಿ', 'ಜನಶಕ್ತಿ ಮೀಡಿಯಾ' ದಂತಹ ವೆಬ್ ಪತ್ರಿಕೆಗಳು, ಅಮೆಜಾನ್ ಮುಂತಾದ ಫಿಲಂ/ಟಿವಿ–ವೆಬ್ ಧಾರಾವಾಹಿ ವಿಡಿಯೋ ಹರಿಯಬಿಡುವ ಒಟಿಟಿ ವೇದಿಕೆಗಳು, ವೆಬ್ ರೇಡಿಯೊ, ಪಾಡ್ ಕಾಸ್ಟ್ – ಎಲ್ಲವೂ ಸೇರುತ್ತವೆ. ಇವೆಲ್ಲವೂ ಹೆಚ್ಚಾಗಿ ಸಾಂಪ್ರದಾಯಿಕ ಮಾಧ್ಯಮಗಳಂತೆ "ಕೆಲವೊಮ್ಮೆ ಹೇಳಿ ಬರೆಯಿಸಿದ, ಆಹ್ವಾನಿತ, ಆರಿಸಿದ, ಸಂಪಾದನೆಗೆ ಒಳಗಾದ" ಅಭಿವ್ಯಕ್ತಿಗಳನ್ನು ಪ್ರಸಾರ ಮಾಡುವ ವೇದಿಕೆಗಳು. ಈ 'ವೆಬ್ ಮಾಧ್ಯಮ'ಗಳು ಸಾಂಪ್ರದಾಯಿಕ ಪತ್ರಿಕೆ, ಟಿವಿ, ರೇಡಿಯೊ, ಕೇಬಲ್ ಗಳಂತೆ ಮಾಧ್ಯಮಗಳು.

ಆದ್ದರಿಂದ ಅವುಗಳಿಗೆ ಅನ್ವಯವಾಗುವ ನಿಬಂಧನೆಗಳು ಇವಕ್ಕೂ ಅನ್ವಯವಾಗಬೇಕು. ಇವೆರಡರ ನಡುವೆ ಮಾಧ್ಯಮಗಳಾಗಿ ಪೈಪೋಟಿಯಿರುವುದರಿಂದ 'ಸಮತಟ್ಟಾದ ಆಟದ ಮೈದಾನ' ಇರಬೇಕು. ಈ ಮಾಧ್ಯಮಗಳ ಅಭಿವ್ಯಕ್ತಿಯಲ್ಲಿ ಸಾರ್ವಜನಿಕರಿಗೇ ಆಕ್ಷೇಪಾರ್ಹ ಅಂಶಗಳಿದ್ದರೆ, ಅವುಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರದ ರೀತಿಯಲ್ಲಿ ಪರಿಹರಿಸಲು "ಮೆದುವಾದ ಮೇಲುಸ್ತುವಾರಿ ವಿಧಾನ" ಬೇಕು, ಎಂಬ ಉದ್ದೇಶದಿಂದ ಈ ನಿಯಮಗಳನ್ನೊಳಗೊಂಡ ಕಾನೂನು ತರಲಾಗಿದೆ ಎಂದು ಮಾಹಿತಿ–ಪ್ರಸಾರ ಹಾಗೂ ಇಲೆಕ್ಟ್ರಾನಿಕ್ಸ್–ಮಾಹಿತಿ ತಂತ್ರಜ್ಞಾನ ಇಲಾಖೆಯ ಸಚಿವ ರವಿಶಂಕರ್ ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. ಆದರೆ ನಿಯಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇದು ನಿಜವೆಂಬಂತೆ ತೋರುವುದಿಲ್ಲ. ಇದು ವೆಬ್ ಅಥವಾ ಡಿಜಿಟಲ್ ಮಾಧ್ಯಮವನ್ನು ತೀವ್ರ ಸೆನ್ಸಾರ್ ಗೆ ಒಳಪಡಿಸುವತ್ತ ಕಾರ್ಯಾರ್ಂಗಕ್ಕೆ ಭಾರೀ ಅಧಿಕಾರವನ್ನು ಕೊಡುವ ಕಾನೂನು ಆಗಿದೆ ಎಂದು ತೋರುತ್ತದೆ.

'ಸಮತಟ್ಟಾದ ಆಟದ ಮೈದಾನ'ವೂ ಅಲ್ಲ!

'ಮೆದುವಾದ ಮೇಲುಸ್ತುವಾರಿ' ಯೂ ಅಲ್ಲ!

ನಿಯಮಗಳಲ್ಲಿ ಮೂರು ಹಂತಗಳ ದೂರು ಪರಿಹಾರ ವಿಧಾನವನ್ನು ವಿಧಿಸಲಾಗಿದೆ. ಮೊದಲ ಹಂತ ವೆಬ್ ಮಾಧ್ಯಮವೇ. ಎರಡನೆಯ ಹಂತ ವಿಶ್ರಾಂತ ನ್ಯಾಯಾಧೀಶರು ಮುಖ್ಯಸ್ಥರಾಗಿರುವ ವೆಬ್ ಮಾಧ್ಯಮಗಳ ಉದ್ಯಮದ ಸ್ವಯಂ–ನಿಬಂಧನಾ ಸಂಘಟನೆ. ಈ ನ್ಯಾಯಾಧೀಶರನ್ನು ಸರಕಾರದ ಮಾಹಿತಿ–ಪ್ರಸಾರ ಇಲಾಖೆ ಕೊಡುವ ಪಟ್ಟಿಯೊಳಗಿನಿಂದಲೇ ನೇಮಿಸಬೇಕು. ಮೂರನೆಯ ಹಂತದಲ್ಲಿರುವ, ಸರಕಾರದ ಹಲವು ವಿಭಾಗಗಳು ಪ್ರತಿನಿಧಿತವಾಗಿರುವ ಸಮಿತಿಯ ಮೇಲುಸ್ತುವಾರಿಯಲ್ಲಿ ಎಲ್ಲವೂ ನಡೆಯುತ್ತದೆ. ಸ್ವಯಂ–ನಿಬಂಧನಾ ಸಂಘಟನೆಯ ಉದ್ದೇಶ ಮತ್ತು ಆಚರಣೆಗಳ ಸಂಹಿತೆಯನ್ನು ರೂಪಿಸುವುದು ಸಹ ಈ ಸಮಿತಿಯೇ. ಸರಕಾರ ನಿರ್ವಹಿಸುವ ದೂರು ಪರಿಹಾರ ವೆಬ್ ತಾಣದ ನಿರ್ವಹಣೆ ಮತ್ತು ಈ ನಿಯಮಗಳ ಪ್ರಕಾರ ಶಿಕ್ಷಾ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರವಿರುವ ಜಂಟಿ ಕಾರ್ಯದರ್ಶಿ ಸಹ ಈ ಸಮಿತಿಯ ನಿಯಂತ್ರಣದಲ್ಲೇ ಕೆಲಸ ಮಾಡುವುದು.

ಈ ಮೂರು ಹಂತದ ದೂರು ಪರಿಹಾರ ವಿಧಾನದಲ್ಲಿ ಕೆಳಗಿನ ಹಂತವಾದ ವೆಬ್ ಮಾಧ್ಯಮದಿಂದ ಆರಂಭವಾಗುತ್ತದೆ. ಅದು ದೂರನ್ನು ಪರಿಹರಿಸದಿದ್ದರೆ ಮೇಲಿನ ಹಂತಗಳಿಗೆ ಹೋಗುತ್ತದೆ ಎಂದು ನೀವು ನಿರೀಕ್ಷಿಸಿದ್ದರೆ ಅದು ತಪ್ಪು. ದೂರು ದಾಖಲಾಗುವುದು ಸರಕಾರದ ವೆಬ್ ತಾಣದಲ್ಲಿ. ಆ ದೂರನ್ನು ಮೂರನೇ ಹಂತದ ನಿರ್ವಾಹಕರು ಕೆಳಗಿನ ಎರಡು (ವೆಬ್ ಮಾಧ್ಯಮ ಮತ್ತು ಅವುಗಳ ಸ್ವಯಂ–ನಿಬಂಧನಾ ಸಂಘಟನೆ) ಹಂತಗಳಿಗೆ ಕಳಿಸುತ್ತಾರೆ. 15 ದಿನಗಳೊಳಗೆ ವೆಬ್ ಮಾಧ್ಯಮ ಅದನ್ನು ಪರಿಹರಿಸಿ ವೆಬ್ ತಾಣದಲ್ಲಿ ಕಾಣಿಸದಿದ್ದರೆ, ದೂರು ಎರಡನೆಯ ಮತ್ತು ಮೂರನೆಯ ಹಂತಕ್ಕೆ ಹೋಗುತ್ತದೆ. ಮೂರನೆಯ ಹಂತದ ಸರಕಾರದ ನಿರ್ಣಯ ಅಂತಿಮವಾದ್ದು ಆಗಿರುತ್ತದೆ. ಮಧ್ಯವರ್ತಿ ವೇದಿಕೆಗಳ ಸಂದರ್ಭದಲ್ಲಿ ವೈಯಕ್ತಿಕ ಅಕೌಂಟುಗಳನ್ನು ತಡೆ ಹಿಡಿಯುವ ನಿರ್ದೇಶನ ಕೋರ್ಟುಗಳಿಂದ ಅಥವಾ ಸರಕಾರದ ಜಂಟಿ ಕಾರ್ಯದರ್ಶಿಯಿಂದ ಬರಬಹುದು ಎಂಬುದನ್ನೂ ಗಮನಿಸಬೇಕು. ಹೀಗೆ ಮೂರು ಹಂತದ ದೂರು ಪರಿಹಾರ ವಿಧಾನ ಕೆಳಗಿನಿಂದ ಮೇಲಕ್ಕೆ ಅಲ್ಲ, ಮೇಲಿನಿಂದ ಕೆಳಕ್ಕೆ ಹರಿಯುತ್ತದೆ.

ಪ್ರಿಂಟ್ ಪತ್ರಿಕೆಗಳು ಮತ್ತು ಟಿವಿ ಗೆ ಅನ್ವಯವಾಗುವ ನಿಬಂಧನೆಗಳಲ್ಲಿ ಸರಕಾರಕ್ಕೆ ಯಾವುದೇ ಪಾತ್ರವಿಲ್ಲ. ಈ ಮಾಧ್ಯಮ ಸಂಘಟನೆಗಳ ಸ್ವಯಂ–ನಿಬಂಧನೆಗಳಷ್ಟೇ ಇರುವುದು. ಪ್ರಿಂಟ್ ಪತ್ರಿಕೆಗಳಿಗೆ ಪ್ರೆಸ್ ಕೌನ್ಸಿಲ್ ಮತ್ತು ಟಿವಿ ಗಳಿಗೆ ನ್ಯೂಸ್ ಬ್ರಾಡ್ ಕಾಸ್ಟಿಂಗ್ ಸ್ಟಾಂಡರ್ಡ್ಸ್ ಅಥಾರಿಟಿ ಯಂತಹ ಮಾಧ್ಯಮ ಸಂಘಟನೆಗಳು ಸ್ವಯಂ–ನಿಬಂಧನೆಗಳನ್ನು ಜಾರಿ ಮಾಡುತ್ತವೆ. ಆದರೆ ಮೇಲೆ ವಿವರಿಸಿದಂತೆ, ಈಗ ತಂದಿರುವ ಐಟಿ ನಿಯಮ 2021ರಲ್ಲಿ ಸರಕಾರಕ್ಕೆ ನೇರ ಮತ್ತು ಪ್ರಧಾನ ಪಾತ್ರವಿದೆ. ಇದು ಖಂಡಿತ 'ಸಮತಟ್ಟಾದ ಆಟದ ಮೈದಾನ' ಅಲ್ಲ. ಈ ನಿಯಮಗಳಲ್ಲಿ ದೂರು ನಿರ್ವಹಣೆ/ಪರಿಹಾರ ಮತ್ತು ಮೇಲ್ವಿಚಾರಣೆಯ ವಿವಿಧ ವಿಧಾನಗಳನ್ನು ನೋಡಿದರೆ, ಅವೆಲ್ಲದರಲ್ಲಿ (ವಕೀಲ, ಪೋಲಿಸ್ ಮತ್ತು ಜಜ್ ಈ) ಎಲ್ಲ ಪಾತ್ರಗಳನ್ನು ವಹಿಸುವ ಸರಕಾರದ ಕಟುಹಸ್ತ ಕಾಣುತ್ತದೆ "ಮೆದುವಾದ ಮೇಲುಸ್ತುವಾರಿ ವಿಧಾನ" ಕಾಣುವುದಿಲ್ಲ. ವಿವಾದ ಪರಿಹರಿಸಲು ಸರಕಾರದ ಮರ್ಜಿಯಿಂದ ಸ್ವತಂತ್ರವಾದ ಅರೆ–ನ್ಯಾಯಿಕ ಸಂಸ್ಥೆಯ ಸುತ್ತ ಕಟ್ಟಲಾದ ವ್ಯವಸ್ಥೆಯಿಲ್ಲ.


ಏಕೆ ವೆಬ್ ಮಾಧ್ಯಮ ನಿಬಂಧನೆಗೆ ತರಾತುರಿ?

ಮಾಧ್ಯಮ ನೀತಿಸಂಹಿತೆ ಉಲ್ಲಂಘನೆ ಯಾವುದು? ಮತ್ತು ಅವುಗಳ ಆಧಾರದ ಮೇಲೆ ಯಾವ ಶಿಕ್ಷಾ ಕ್ರಮ ಕೈಗೊಳ್ಳಬಹುದು? ಎಂಬುದರ ಕುರಿತು ನಿಯಮಗಳು ಅತ್ಯಂತ ಗೋಜಲಾಗಿವೆ, ಅಸ್ಪಷ್ಟವಾಗಿವೆ. "ಭಾರತದ ಐಕ್ಯತೆ, ಸಮಗ್ರತೆ, ಭದ್ರತೆ ಅಥವಾ ಸಾರ್ವಭೌಮತೆ, ಅಥವಾ ಸಾರ್ವಜನಿಕ ವ್ಯವಸ್ಥೆ"ಗೆ ಬೆದರಿಕೆಯೊಡ್ಡುವ; "ಅಪರಾಧವೆಂದು ಪರಿಗಣಿಸಲಾಗುವ ಯಾವುದೇ ಕಾರ್ಯಾಚರಣೆಯನ್ನು ಉತ್ತೇಜಿಸುವ"; "ಯಾವುದೇ ಕಾನೂನನ್ನು ಉಲ್ಲಂಘಿಸುವ""; "ಯಾವುದೇ ಜನಾಂಗೀಯ ಅಥವಾ ಧಾರ್ಮಿಕ ಗುಂಪಿನ ಆಚರಣೆಗಳು, ನಂಬಿಕೆಗಳು, ಅಭಿಪ್ರಾಯಗಳು" ಇವುಗಳನ್ನು ಗಮನಕ್ಕೆ ತೆಗೆದುಕೊಳ್ಳದ ☐ ಅಭಿವ್ಯಕ್ತಿಗಳು, ಮಾಧ್ಯಮ ನೀತಿಸಂಹಿತೆ ಉಲ್ಲಂಘನೆ ಎನ್ನಲಾಗಿದೆ. ಇವೆಲ್ಲವೂ ಹೇಗೆ ಬೇಕಾದರೂ ವ್ಯಾಖ್ಯಾನಿಸಬಹುದಾದ, ಯಾವುದೇ ಸಂದರ್ಭಕ್ಕೂ ಅನ್ವಯಿಸಬಹುದಾದವುಗಳು. ಅದರಲ್ಲೂ ಪಕ್ಷಪಾತದ ನೀತಿಯನ್ನು ಅನುಸರಿಸುತ್ತಿರುವುದಕ್ಕೆ ಹೆಸರಾದ ಈಗಿನ ಸರಕಾರ ಇದನ್ನು ಬೇಕಾಬಿಟ್ಟಿಯಾಗಿ ಬಳಸಿ ಯಾವ ಕ್ರಮವನ್ನು ಬೇಕಾದರೂ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಉಗ್ರ ಬಲಪಂಥದ ಸಂಘಟಿತ 'ಟ್ರಾಲ್ ಪಡೆ"ಗಳ ಕಾರ್ಯಾಚರಣೆಗಳು ಮತ್ತು ಯಾವುದೇ "ಕಾನೂನುಬಾಹಿರ" ಅಭಿವ್ಯಕ್ತಿಯನ್ನು ಸರಕಾರಕ್ಕೆ ವರದಿ ಮಾಡಬೇಕು ಎಂದು ಉತ್ತೇಜಿಸುವ ಗೃಹ ಸಚಿವಾಲಯದ "ಸೈಬರ್ ಅಪರಾಧ ಸ್ವಯಂಸೇವಕರ" ಕಾರ್ಯಕ್ರಮದ ಹಿನ್ನೆಲೆಯಲ್ಲಿ ಈ ದೂರು ಪರಿಹಾರ ವ್ಯವಸ್ಥೆ ಮಾಡಬಹುದಾದ ಅವಾಂತರಗಳನ್ನು ಸುಲಭವಾಗಿ ಊಹಿಸಬಹುದು.


ಟಿವಿ ಸುದ್ದಿ ಮಾಧ್ಯಮಗಳ ಸ್ವಯಂ–ನಿಬಂಧನಾ ಸಂಸ್ಥೆಗೆ ಅಗತ್ಯವಾದ ಕಾನೂನುಬದ್ಧ ಸ್ಥಾನಮಾನ

ಪುಟ 15 ಕ್ಕೆ



ಕೃಪೆ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯಾ

ಪ್ರಾಂತೀಯ ಸ್ವಾಯತ್ತತೆಯ ಮತ್ತು ಯುದ್ಧ–ಪೂರ್ವ ಅವಧಿಯ ತೀಕ್ಷ್ಣ ಹೋರಾಟಗಳು 1937–39



1937–38ರ ಅವಧಿಯಲ್ಲಿ ನಡೆದ ಮುಷ್ಕರಗಳು ಮುಂಬೈ, ಕಲ್ಕತ್ತಾ, ಅಹಮದಾಬಾದ್, ಶೋಲಾಪುರ, ಮದ್ರಾಸ್ ಮತ್ತು ಕಾನ್ಪುರ್ ನಂತಹ ಸಂಘಟಿತ ಕೈಗಾರಿಕಾ ಕೇಂದ್ರಗಳಲ್ಲಿ ಸೀಮಿತವಾಗಿ ಉಳಿಯುವ ಬದಲು, ದೇಶದ ಎಲ್ಲಾ ಕೈಗಾರಿಕಾ ಕೇಂದ್ರಗಳನ್ನು ಆವರಿಸಿದವು. 1928–29ರ ವರ್ಷಗಳ ಹೆಚ್ಚಾಗಿ ರಕ್ಷಣಾತ್ಮಕ ಸ್ವರೂಪದಲ್ಲಿದ್ದ ಮುಷ್ಕರಗಳಿಗೆ ವ್ಯತಿರಿಕ್ತವಾಗಿ, 1937–38ರ ಅವಧಿಯ ಮುಷ್ಕರಗಳ ಒಂದು ವಿಶೇಷ ಲಕ್ಷಣವು ಅದರ ಆಕ್ರಮಣಕಾರಿ ಪಾತ್ರದಲ್ಲಿ ಕಂಡುಬಂದಿತು. ಈ ಬಾರಿ ಕಾರ್ಮಿಕರು ಹಿಂಜರಿತದ ವರ್ಷಗಳಲ್ಲಿ ಜಾರಿಗೆ ಬಂದ ವೇತನ ಕಡಿತವನ್ನು ಪುನಃಸ್ಥಾಪಿಸಲು ಮಾತ್ರವಲ್ಲದೆ ವೇತನ ಹೆಚ್ಚಳಕ್ಕೆ ಮತ್ತು ರಿಟ್ರೆಂಚಮೆಂಟ್ ಮತ್ತು ದಮನಕಾರಿ ಕ್ರಮಗಳನ್ನು ನಿಲ್ಲಿಸುವಂತೆ ನೇರವಾಗಿ ಒತ್ತಾಯಿಸಿದರು. ಈ ಅವಧಿಯ ಮುಷ್ಕರಗಳು ಹೆಚ್ಚಿನ ಪ್ರಕರಣಗಳಲ್ಲಿ ಯಶಸ್ವಿಯಾದವು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್. ಶಾನಭಾಗ್

ರಾಜಕೀಯ ಹಿನ್ನೆಲೆ

ಮೊದಲನೆಯ ಮಹಾಯುದ್ಧದ ನಂತರ ವ್ಯಾಪಕವಾಗಿ ಬೆಳೆಯಲು ಪ್ರಾರಂಭಿಸಿದ ಭಾರತದ ಕಾರ್ಮಿಕ ವರ್ಗದ ಚಳುವಳಿ ನಂತರದ ಎರಡು ದಶಕಗಳಲ್ಲಿ ಶೀಘ್ರವಾಗಿ ಮುನ್ನಡೆಯಿತು ಮತ್ತು ಮತ್ತೊಂದು ಸನ್ನಿಹಿತ ಯುದ್ಧದ ಪೂರ್ವಭಾವಿ ಕಾಲದಲ್ಲಿ ಭಾರತದ ರಾಷ್ಟ್ರೀಯ–ರಾಜಕೀಯ ಚಳವಳಿಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದು, ಇಟಲಿ ಮತ್ತು ಜರ್ಮನಿಗಳು ತಮ್ಮ ರಾಜಕೀಯ ಹತೋಟಿಗೆ ಒಳಪಟ್ಟಿದ್ದರಿಂದ, ಫ್ಯಾಸಿಸ್ಟ್ ಶಕ್ತಿಗಳು ಬಲವರ್ಧನೆಯಾಗುತ್ತಿದ್ದ ಅವಧಿಯಾಗಿತ್ತು. ಮತ್ತೊಂದು ವಿನಾಶಕಾರಿ ವಿಶ್ವ ಯುದ್ಧದ ಅಪಾಯವು ದೊಡ್ಡದಾಗಿ ಮೂಡಿ ಬರಹತ್ತಿತ್ತು.

ಈ ಹಂತದಲ್ಲಿ ವಿಶ್ವ ರಂಗದಲ್ಲಿ, ಕಮ್ಯುನಿಸ್ಟ್ ಇಂಟರ್ನ್ಯಾಷನಲ್, ಸಾಮ್ರಾಜ್ಯಶಾಹಿ ಮತ್ತು ಅದರ ಅತ್ಯಂತ ಪ್ರತಿಗಾಮಿ ವೈವಿಧ್ಯವಾದ ಫ್ಯಾಸಿಸಂ ವಿರುದ್ಧ ಹೋರಾಡಲು ಬಂಡವಾಳಶಾಹಿ ದೇಶಗಳಲ್ಲಿ ಫ್ಯಾಸಿಸ್ಟ್ ವಿರೋಧಿ ಜನಪ್ರಿಯ ರಂಗ(ಪಾಪ್ಯುಲರ್ ಫ್ರಂಟ್) ಮತ್ತು ವಸಾಹತುಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಂಯುಕ್ತ ರಾಷ್ಟ್ರೀಯ ರಂಗ(ಯುನೈಟೆಡ್ ನ್ಯಾಷನಲ್ ಫ್ರಂಟ್) ಕಟ್ಟಲು ಕರೆ ನೀಡಿತು. ಭಾರತದಲ್ಲಿ ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿ ವಿರೋಧಿ ಸಂಯುಕ್ತ ರಾಷ್ಟ್ರೀಯ ರಂಗವನ್ನು ನಿರ್ಮಿಸುವ ಕ್ರಾಂತಿಕಾರಿ ಕಾರ್ಯಭಾರವನ್ನು ಕೈಗೊಳ್ಳುವ ಸವಾಲನ್ನು ಎದುರಿಸಿತು.

ಭಾರತವು ಸಾಮ್ರಾಜ್ಯಶಾಹಿಯ ವಿರುದ್ಧ ರಾಜಿಯಾಗದ ಹೋರಾಟವನ್ನು ನಡೆಸುವ ಐತಿಹಾಸಿಕ ಜವಾಬ್ದಾರಿಯನ್ನು ಎದುರಿಸಿತ್ತಾಗ, ಭಾರತ ಸರ್ಕಾರದ ಕಾಯ್ದೆ, 1935 ರ ಸಾಂವಿಧಾನಿಕ ನಿಬಂಧನೆಗಳಿಗೆ ಅನುಗುಣವಾಗಿ 1937 ರಲ್ಲಿ ಪ್ರಾಂತೀಯ ಚುನಾವಣೆಗಳು ನಡೆದವು.

1936 ರಲ್ಲಿ ನಡೆದ ಫೈಜ್‌ಪುರ ಅಧಿವೇಶನದಲ್ಲಿ, ರಾಷ್ಟ್ರೀಯ ಕಾಂಗ್ರೆಸ್, ಭಾರತ ಸರ್ಕಾರ ಕಾಯ್ದೆ 1935 ಯನ್ನು ಮತ್ತು ಅದರ ಪ್ರಕಾರ ರೂಪಿಸಿದ ಹೊಸ ಸಂವಿಧಾನವನ್ನು ನಿಸ್ಸಂದಿಗ್ಧವಾಗಿ ತಿರಸ್ಕರಿಸಿತು. ಈ ಸಂವಿಧಾನವನ್ನು ಭಾರತದ ಸ್ವಾತಂತ್ರ್ಯ ಚಳವಳಿಗೆ ಬಗೆದ ದ್ರೋಹವೆಂದು ಘೋಷಿಸಿದ ಕಾಂಗ್ರೆಸ್, ಇದರ ವಿರುದ್ಧ ವಿಧಾನಸಭೆಯ ಒಳಗೆ ಮತ್ತು ಹೊರಗೆ ಹೋರಾಡಲು ಕರೆ ನೀಡಿತು. ಈ ಘೋಷಣೆಯ ಹೊರತಾಗಿಯೂ ಕಾಂಗ್ರೆಸ್ ಚುನಾವಣೆಯಲ್ಲಿ ಭಾಗವಹಿಸಬೇಕಾಯಿತು. ಕಾಂಗ್ರೆಸ್ ಹೊರಡಿಸಿದ ಚುನಾವಣಾ ಪ್ರಣಾಳಿಕೆಯಲ್ಲಿ ಕಾರ್ಮಿಕರ ಮತ್ತು ರೈತರ ಜೀವನ ಪರಿಸ್ಥಿತಿಗಳ ಸುಧಾರಣೆಯ ಭರವಸೆ ನೀಡಲಾಯಿತು.

ಈ ಚುನಾವಣೆಗಳಲ್ಲಿ ಬಹುಪಾಲು ಜನರು ಮತಚಲಾವಣೆಯ ಹಕ್ಕಿನಿಂದ ವಂಚಿತರಾಗಿದ್ದರು. 1919 ರ ಸುಧಾರಣಾ ಕಾಯ್ದೆಯು ಮೊದಲು ಕಾರ್ಮಿಕರಿಗೆ ಮತಚಲಾವಣೆಯ ಹಕ್ಕನ್ನು ಒದಗಿಸಿದ್ದರೂ, ಭಾರತ ಸರ್ಕಾರದ ಮಸೂದೆ 1935 ಜಾರಿಗೆ ಬಂದಾಗ ಮಾತ್ರ ಈ ಪ್ರಶ್ನೆಯು ನಿಜವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಕಾರ್ಮಿಕರ ಪ್ರಾತಿನಿಧ್ಯದ ಅತ್ಯುತ್ತಮ ಸಾಧನವಾಗಿ ನೋಂದಾಯಿತ ಸಂಘಗಳು ಚುನಾವಣೆಯಲ್ಲಿ ಭಾಗವಹಿಸುವ ಪರವಾಗಿ ರಾಯಲ್ ಕಮಿಷನ್ ಆನ್ ಲೇಬರ್ ಇನ್ ಇಂಡಿಯಾ ಅಭಿಪ್ರಾಯಪಟ್ಟಿತ್ತು, ಆದರೆ ಭಾರತದ ಮತಾಧಿಕಾರ ಸಮಿತಿಯು ಕಾರ್ಮಿಕರ ಪ್ರಾತಿನಿಧ್ಯವನ್ನು ಟ್ರೇಡ್ ಯೂನಿಯನ್ ಆಧಾರದ ಮೇಲೆ ಗುರುತಿಸಲಿಲ್ಲ ಮತ್ತು ಬದಲಿಗೆ ಈ ಸಮಿತಿಯು ಕಾರ್ಮಿಕರಿಗಾಗಿ ವಿಶೇಷ ಚುನಾವಣಾ ಕ್ಷೇತ್ರಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿತು.

ಇದಲ್ಲದೆ, ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಆದಾಯದ ಅರ್ಹತೆಯು ಹೆಚ್ಚಿನ ಕಾರ್ಮಿಕರನ್ನು ಮತಚಲಾವಣೆಯ ಹಕ್ಕಿನಿಂದ ವಂಚಿತಗೊಳಿಸಿತು.

ಹೊಸ ಸಂವಿಧಾನದ ಪ್ರಕಾರ ಕೇವಲ 13 ಪ್ರತಿಶತದಷ್ಟು ಜನರು ಮಾತ್ರ ಮತ ಚಲಾಯಿಸಲು ಅರ್ಹರಾಗಿದ್ದರು. ಆದರೂ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿತು. ಕ್ರಾಂತಿಕಾರಿ ಶಕ್ತಿಗಳ ಬೆಂಬಲ ಈ ಯಶಸ್ಸಿಗೆ ಒಂದು ಕಾರಣವಾಗಿತ್ತು. ಮುಂಬೈ ಮತ್ತು ನಾಗ್ಪುರದಲ್ಲಿ ಕೆಲವು ಕೇಂದ್ರಗಳನ್ನು ಹೊರತುಪಡಿಸಿ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕೂಡ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಿತು.

ಚುನಾವಣೆಯ ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಮಾರ್ಚ್ 1937 ರಲ್ಲಿ ದೆಹಲಿಯಲ್ಲಿ ಸಭೆ ಸೇರಿ, ಶಾಸಕಾಂಗದಲ್ಲಿ ಕಾಂಗ್ರೆಸ್ ಬಹುಮತವನ್ನು ಪಡೆದ ಪ್ರಾಂತ್ಯಗಳಲ್ಲಿ ಅಧಿಕಾರ ಸ್ವೀಕರಿಸಲು ನಿರ್ಧರಿಸಿತು.

ಜುಲೈ 7, 1937 ರಂದು ಕಾಂಗ್ರೆಸ್ ಮಂತ್ರಿಗಳು ಅಧಿಕಾರ ವಹಿಸಿಕೊಂಡರು. ಪ್ರಾಂತೀಯ ಸ್ವಾಯತ್ತತೆ ನಿಸ್ಸಂಧಿಗ್ದವಾಗಿ ಬಹಳ ಸೀಮಿತ ಅಧಿಕಾರಗಳನ್ನು ಹೊಂದಿತ್ತು, ಆದರೆ ಕಾಂಗ್ರೆಸ್ ಮಂತ್ರಿಮಂಡಲಗಳು ತಮ್ಮ ಎರಡೂವರೆ ವರ್ಷಗಳ ಆಳ್ವಿಕೆಯಲ್ಲಿ ಅನುಸರಿಸಿದ ಕಾರ್ಮಿಕರ ಬಗೆಗಿನ ನೀತಿಗಳು ಸ್ವತಂತ್ರ ಭಾರತದ ಭವಿಷ್ಯದ ಕಾಂಗ್ರೆಸ್ ಆಳ್ವಿಕೆಯಲ್ಲಿ ಏನು ಅನುಸರಿಸ ಬಹುದೆಂಬುದರ ಲಕ್ಷಣವಾಗಿತ್ತು. ಕಾಂಗ್ರೆಸ್ ಅಥವಾ ಕಾಂಗ್ರೆಸ್ಸೇತರ ಪಕ್ಷಗಳು ಅಧಿಕಾರ ವಹಿಸಿಕೊಳ್ಳುವುದು ಕೇವಲ 'ದಬ್ಬಾಳಿಕೆಯಲ್ಲಿ ಮತ್ತು ನಮ್ಮ ಜನರ ಶೋಷಣೆಯಲ್ಲಿ ಪಾಲುದಾರರಾಗುವುದು' ಎಂದು, ನೆಹರೂ ಭಯಭೀತರಾಗಿದ್ದರು, ಆದರೆ ಮಂತ್ರಿಮಂಡಲಗಳು ಭಾರತದ ಕಾರ್ಮಿಕ ವರ್ಗದ ಮೇಲೆ ದಬ್ಬಾಳಿಕೆ ಮತ್ತು ಶೋಷಣೆಯ ನೇರ ಸಾಧನಗಳಾಗಿ, ನೆಹರೂ ಅವರ ಭವಿಷ್ಯವಾಣಿಯನ್ನು ಇಮ್ಮಡಿ ದೃಢಪಡಿಸಿದವು.

ಕಾರ್ಮಿಕ ವರ್ಗದ ಹೋರಾಟಗಳು

ವಿವಿಧ ಪ್ರಾಂತ್ಯಗಳಲ್ಲಿ ಮಂತ್ರಿಮಂಡಲಗಳ ರಚನೆಯ ನಂತರ ಟ್ರೇಡ್ ಯೂನಿಯನ್ ಚಟುವಟಿಕೆಗಳ ಮತ್ತು ಕಾರ್ಮಿಕರ ದೊಡ್ಡ ಮುಷ್ಕರಗಳ ಅಲೆಗಳು ಕಂಡುಬಂದವು. ಪ್ರಾಂತ್ಯಗಳಲ್ಲಿ ಜನಪ್ರಿಯ ಮಂತ್ರಿಮಂಡಲಗಳು ಅಧಿಕಾರ ಸ್ವೀಕರಿಸಿದ್ದರಿಂದ ಈ ಹೊಸ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಶೋಷಣೆಯ ವಿರುದ್ಧದ ಅವರ ಹೋರಾಟಗಳು ಸರ್ಕಾರದಿಂದ ಯಾವುದೇ ದಮನವನ್ನು ಆಹ್ವಾನಿಸುವುದಿಲ್ಲ ಎಂದು ನಿಷ್ಕಪಟವಾಗಿ ನಂಬಲು ಪ್ರಾರಂಭಿಸಿದ ಕಾರಣ ಕೆಲವು ಸಂದರ್ಭಗಳಲ್ಲಿ ಕಾರ್ಮಿಕರಲ್ಲಿ ಒಂದು ರೀತಿಯ ಆಶಾವಾದವನ್ನು ಹುಟ್ಟುಹಾಕಿತ್ತು.

ದೇಶದ ವಿವಿಧ ಭಾಗಗಳಲ್ಲಿನ ಕಾರ್ಮಿಕರ ವೀರ ಹೋರಾಟಗಳ ಮತ್ತು ಈ ಹೋರಾಟಗಳಲ್ಲಿ ಅನುಭವಿಸಿದ ಅಪಾರ ಯಾತನೆಗಳ ಈ ಪ್ರಾಸಂಗಿಕ ಕಥನಗಳು ನಿಸ್ಸಂದೇಹವಾಗಿ ಮನ ಕಲಕಿಸುವಂತವು ಎಂಬುದರಲ್ಲಿ ಸಂದೇಹವಿಲ್ಲ, ಈ ಹೋರಾಟಗಳ ಉನ್ನತ ಶ್ರೇಣಿಯಲ್ಲಿ 1937 ರಲ್ಲಿ ಬಂಗಾಳದ ಸೆಣಬಿನ ಕಾರ್ಮಿಕರ ಐತಿಹಾಸಿಕ ಸಾರ್ವತ್ರಿಕ ಮುಷ್ಕರ ಬರುತ್ತದೆ. ಈ ಮುಷ್ಕರವು 225,000 ಕಾರ್ಮಿಕರನ್ನು ಸೆಳೆಯಿತು ಮತ್ತು ಫೆಬ್ರವರಿ 26 ರಿಂದ ಮೇ 10 ರವರೆಗೆ 74 ದಿನಗಳ ಕಾಲ ನಡೆಯಿತು. ಈ ಸಾರ್ವತ್ರಿಕ ಮುಷ್ಕರವನ್ನು ಒಳಗೊಂಡಂತೆ, ಈ ವರ್ಷ ಒಟ್ಟು ಬಂಗಾಳದಲ್ಲಿ 166 ಮುಷ್ಕರಗಳು ಸಂಭವಿಸಿದ್ದು 6,090,883 ಕೆಲಸದ ದಿನಗಳು ನಷ್ಟವಾದವು. ಬೇರೆ ರೀತಿಯಲ್ಲಿ ಹೇಳುವುದಾದರೆ, 1937 ರ ದೇಶದಲ್ಲಿ ನಡೆದ ಒಟ್ಟು ಮುಷ್ಕರಗಳಲ್ಲಿ ಶೇಕಡ 61.74 ರಷ್ಟು 365,699 ಕಾರ್ಮಿಕರನ್ನು ಒಳಗೊಂಡು ಬಂಗಾಳದಲ್ಲಿಯೇ ನಡೆದವು.

ಆದರೆ ಆಗಿನ ಬಂಗಾಳದ ಫಜ್ಲುಲ್ ಹಕ್ ಮಂತ್ರಿಮಂಡಲವು ಕಾರ್ಮಿಕರ ಈ ಸಮರ್ಥನೀಯ ಹೋರಾಟವನ್ನು ಮುರಿಯಲು. ಸೆಕ್ಷನ್ 144 ರನ್ನು ಘೋಷಿಸಿ, ಸೆಣಬಿನ ಗಿರಣಿ ಪ್ರದೇಶಗಳಲ್ಲಿ ಕಾರ್ಮಿಕ ಮುಖಂಡರು ಪ್ರವೇಶಿಸುವುದನ್ನು ನಿಷೇಧಿಸಿತು ಮತ್ತು ಏಕಕಾಲದಲ್ಲಿ ಹಲವಾರು ಕಾರ್ಮಿಕರನ್ನು ಬಂಧಿಸಲಾಯಿತು. ಮುಷ್ಕರವನ್ನು ಮುರಿಯಲು ಪೊಲೀಸರನ್ನು ನಿಯೋಜಿಸಲಾಯಿತು ಮತ್ತು. ಕಾರ್ಮಿಕರ ಮೇಲೆ ಗುಂಡು ಹಾರಿಸಿದಾಗ ಕೆಲವರಿಗೆ ಗಾಯಗಳಾದವು. ಮುಷ್ಕರದ ನಾಯಕರಿಗೆ ದೈಹಿಕ ಹಿಂಸೆ ಕೂಡ ನೀಡಲಾಯಿತು.

ಆದರೆ ಈ ಮುಷ್ಕರ ಬಂಗಾಳದಲ್ಲಿ ಜನ ಬೆಂಬಲವನ್ನು ಗಳಿಸಿತು. ಫೆಬ್ರವರಿ 21 ರಂದು ಕಲ್ಕತ್ತಾದಲ್ಲಿ ಬಂಗಾಳ ಪ್ರಾಂತೀಯ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಸಾಮೂಹಿಕ ಸಭೆ ಸರ್ಕಾರದ ದಮನಕಾರಿ ನೀತಿಯನ್ನು ಖಂಡಿಸಿತು. ಬಂಗಾಳದ ವಿದ್ಯಾರ್ಥಿಗಳೂ ಮುಂದೆ ಬಂದರು. ಅವರು ಮುಷ್ಕರವನ್ನು ಬೆಂಬಲಿಸಲು ಪರಿಹಾರ ನಿಧಿಯನ್ನು ರಚಿಸಿದರು ಮತ್ತು ಉದಾರ ಕೊಡುಗೆಗಳಿಗಾಗಿ ಜನರಿಗೆ ಮನವಿ ಮಾಡಿದರು. ಸುಭಾಸ್ ಚಂದ್ರ ಬೋಸ್ ಸಹ ಆ ನಿಧಿಗೆ ಕೊಡುಗೆ ನೀಡುವಂತೆ ಮನವಿ ಮಾಡಿದರು.

ಅಲಹಾಬಾದ್‌ನಲ್ಲಿ ಅಧಿವೇಶನದಲ್ಲಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮುಷ್ಕರವನ್ನು ಬೆಂಬಲಿಸುವ ನಿರ್ಣಯವನ್ನು ಅಂಗೀಕರಿಸಿತು ಮತ್ತು ಹೋರಾಟಗಳನ್ನು ಹತ್ತಿಕ್ಕಲು ಸೈನ್ಯ ಮತ್ತು ಪೊಲೀಸರನ್ನು ನಿಯೋಜಿಸುವುದನ್ನು ಖಂಡಿಸಿತು. ಕವಿ ರವೀಂದ್ರ ನಾಥ್ ಟ್ಯಾಗೋರ್ ಕೂಡ. ಸೆಣಸುತ್ತಿದ್ದ ಸೆಣಬಿನ ಕಾರ್ಮಿಕರಿಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು ಮತ್ತು ಕಾರ್ಮಿಕರು ಮತ್ತು ಅವರ ಅವಲಂಬಿತರ ನೆರವಿಗೆ ದೇಶವಾಸಿಗಳು ಮುಂದಾಗಬೇಕೆಂದು ಒತ್ತಾಯಿಸಿದರು. ಜವಾಹರಲಾಲ್ ನೆಹರೂ ಸಹ ಮುಷ್ಕರಕ್ಕೆ ಬೆಂಬಲ ನೀಡಿದರು. ಮದ್ರಾಸ್‌ನಲ್ಲಿಯೂ ಮುಷ್ಕರಕ್ಕೆ ಬೆಂಬಲವನ್ನು ಸಜ್ಜುಗೊಳಿಸಲು ನಗರದ ಮೇಯರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು.

ಈ ಮುಷ್ಕರವು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು ಮತ್ತು ಈ ಒತ್ತಡದ ಹಿನ್ನೆಲೆಯಲ್ಲಿ ಭಾರತೀಯ ಸೆಣಬಿನ ಗಿರಣಿಗಳ ಸಂಘವು ಸ್ವಲ್ಪ ಹಿಂದೆ ಸರಿಯಬೇಕಾಯಿತು. ಮುಷ್ಕರ ಸಮಿತಿಯ ಮುಖಂಡರು ಫಜಲುಲ್ ಹಕ್ ಅವರೊಂದಿಗೆ ಮಾತುಕತೆ ನಡೆಸಿದರು ಮತ್ತು ಬೇಡಿಕೆಗಳ ಕುರಿತು ಕೆಲವು ಭರವಸೆಗಳ ಮೇರೆಗೆ, ಮೇ 10 ರಂದು ಮುಷ್ಕರವನ್ನು ಅಂತಿಮವಾಗಿ ರದ್ದುಗೊಳಿಸಲಾಯಿತು.

ಈ ಮುಷ್ಕರವನ್ನು ಆಯೋಜಿಸುವಲ್ಲಿ ಕಮ್ಯುನಿಸ್ಟರು ಮಹತ್ವದ ಪಾತ್ರ ವಹಿಸಿದ್ದರು. ಕಮ್ಯುನಿಸ್ಟೇತರ ಕಾರ್ಮಿಕ ಮುಖಂಡರು ಸಹ ಪ್ರಾಮಾಣಿಕವಾಗಿ ಸಕ್ರಿಯರಾಗಿದ್ದರು. ಬಂಕಿಮ್ ಮುಖರ್ಜಿ, ಮುಜಾಫರ್ ಅಹ್ಮದ್, ನಿಹರೇಂದು ದತ್ತ ಮಜುಂದಾರ್, ಸಿಬ್ನಾಥ್ ಬ್ಯಾನರ್ಜಿ ಮತ್ತು ಇತರ ಗಮನಾರ್ಹ ಕಾರ್ಮಿಕ ಸಂಘಟಕರು ಮುಷ್ಕರದ ನಾಯಕತ್ವದಲ್ಲಿದ್ದರು.

ಒಂದು ಕುತೂಹಲಕಾರಿ ವಿಷಯವನ್ನು ಇಲ್ಲಿ ಗಮನಿಸಬೇಕು. ಬಂಗಾಳದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ಸೇತರ ಫಜಲುಲ್ ಹಕ್ ಮಂತ್ರಿಮಂಡಲವು ಮುಷ್ಕರವನ್ನು ಹತ್ತಿಕ್ಕುವ ದಮನಕಾರಿ ಕ್ರಮಗಳಿಗೆ ಸಹಾಯ ಮಾಡಿತು. ರಾಷ್ಟ್ರೀಯ ಕಾಂಗ್ರೆಸ್ ಮುಷ್ಕರವನ್ನು ಬೆಂಬಲಿಸಿ ಬಹಿರಂಗವಾಗಿ ಮುಂದೆ ಬಂದು ದಬ್ಬಾಳಿಕೆಯನ್ನು ಖಂಡಿಸಿತು. ಆದರೆ ಮುಂಬೈಯಲ್ಲಿ, ಕಾಂಗ್ರೆಸ್ ಮಂತ್ರಿಮಂಡಲವು ಅಧಿಕಾರದಲ್ಲಿತ್ತು ಮತ್ತು ಅದೇ ಅವಧಿಯಲ್ಲಿ ಮುಂಬೈ ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕುವಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಹಕ್ ಮಂತ್ರಿಮಂಡಲವು ಬಂಗಾಳದಲ್ಲಿ ನಿರ್ಮಿಸಿದ ದಾಖಲೆಯನ್ನು ಮೀರಿಸಿತು.

ದಕ್ಷಿಣ ಭಾರತದಲ್ಲಿ, ಕೊಯಮತ್ತೂರು, ಬೆಂಗಳೂರು. ಪಾಂಡಿಚೆರಿ ಮತ್ತು ಮಧುರೈ ಈ ಅವಧಿಯಲ್ಲಿ ಕಾರ್ಮಿಕರ ಆಂದೋಲನದ ಬಲವಾದ ಕೇಂದ್ರಗಳಾಗಿದ್ದವು..

1938ರಲ್ಲಿ ಕಾನ್ಪುರದ ಜವಳಿ ಕಾರ್ಮಿಕರು ಎರಡನೇ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಬೇಕಾಯಿತು. ಕಾಂಗ್ರೆಸ್ ಮಂತ್ರಿಮಂಡಲ ಎಂದಿನಂತೆ, ಗಿರಣಿ ಪ್ರದೇಶಗಳಲ್ಲಿ ಸೆಕ್ಷನ್ 144 ಅಡಿ ಕಾರ್ಮಿಕರ ಎಲ್ಲಾ ಸಾಮೂಹಿಕ ಅಣಿನೆರೆಯುವಿಕೆಯನ್ನು ನಿಷೇಧಿಸಿತು. ಮುಷ್ಕರ 52 ದಿನಗಳ ಕಾಲ ವೀರೋಚಿತವಾಗಿ ಮುಂದುವರೆಯಿತು, ಅಂತಿಮವಾಗಿ ಮಾಲೀಕರು ಶಿಫಾರಸುಗಳನ್ನು ಸ್ವೀಕರಿಸುವುದಾಗಿ ಭರವಸೆ ನೀಡಿದರು ಮತ್ತು ಜುಲೈ 4 ರಂದು ಮುಷ್ಕರವನ್ನು ರದ್ದುಗೊಳಿಸಲಾಯಿತು.

ಕಾನ್ಪುರ್ ಜವಳಿ ಕಾರ್ಮಿಕರ ಈ ಮುಷ್ಕರದ ಒಂದು ಗಮನಾರ್ಹ ಒಂದು ಲಕ್ಷಣವೆಂದರೆ ಅದು ಬೆಂಕಿಕಡ್ಡಿ ತಯಾರಿಕಾ ಕಾರ್ಖಾನೆ, ಕಬ್ಬಿಣದ ಫೌಂಡ್ರಿ, ಬರ್ಮಾ ಶೆಲ್ ಮತ್ತು ನಗರದ ಇತರ ಕೈಗಾರಿಕಾ ಘಟಕಗಳ ಕಾರ್ಮಿಕರಿಂದ ಪಡೆದ ಸಕ್ರಿಯ ಬೆಂಬಲ. ಇದಲ್ಲದೆ, ಕೋಮು ಗಲಭೆ ಹುಟ್ಟು ಹಾಕುವ ಎಲ್ಲಾ ರೀತಿಯ ಪ್ರಚೋದನೆಯನ್ನು ವಿಫಲಗೊಳಿಸಿ, ಎರಡೂ ಸಮುದಾಯಗಳ ಕಾರ್ಮಿಕರು–ಹಿಂದೂಗಳು ಮತ್ತು ಮುಸ್ಲಿಮರು–ಈ ಮುಷ್ಕರದಲ್ಲಿ ಒಗ್ಗೂಡಿದರು.

1937–38ರ ಅವಧಿಯಲ್ಲಿ ನಡೆದ ಮುಷ್ಕರಗಳು ಮುಂಬೈ, ಕಲ್ಕತ್ತಾ, ಅಹಮದಾಬಾದ್, ಶೋಲಾಪುರ, ಮದ್ರಾಸ್ ಮತ್ತು ಕಾನ್ಪುರ್ ನಂತಹ ಸಂಘಟಿತ ಕೈಗಾರಿಕಾ ಕೇಂದ್ರಗಳಲ್ಲಿ ಸೀಮಿತವಾಗಿ ಉಳಿಯುವ ಬದಲು, ದೇಶದ ಎಲ್ಲಾ ಕೈಗಾರಿಕಾ ಕೇಂದ್ರಗಳನ್ನು ಆವರಿಸಿದವು.

ಈ ಮುಷ್ಕರಗಳು ಅದುವರೆಗೆ ಟ್ರೇಡ್ ಯೂನಿಯನ್ ಚಟುವಟಿಕೆಯ ಕಕ್ಷೆಯಿಂದ ಹೊರಗಿದ್ದ, ಸಣ್ಣ ಮತ್ತು ವಿವಿಧ ಮತ್ತು ಹಂಗಾಮಿ ಕೈಗಾರಿಕೆಗಳಿಗೆ ಸಹ ಹರಡಿತು. 1938 ರಲ್ಲಿ ಈ ಕೈಗಾರಿಕೆಗಳಲ್ಲಿನ ಅಂಕಿಅಂಶಗಳು 195 ಮುಷ್ಕರಗಳಲ್ಲಿ 78,631 ಮಂದಿ ಭಾಗವಹಿಸಿದರು ಮತ್ತು 1,306,433 ಕೆಲಸದ ದಿನಗಳ ನಷ್ಟವಾಯಿತು. 1928–29ರ ವರ್ಷಗಳ ಹೆಚ್ಚಾಗಿ ರಕ್ಷಣಾತ್ಮಕ ಸ್ವರೂಪದಲ್ಲಿದ್ದ ಮುಷ್ಕರಗಳಿಗೆ ವ್ಯತಿರಿಕ್ತವಾಗಿ, 1937–38ರ ಅವಧಿಯ ಮುಷ್ಕರಗಳ ಒಂದು ವಿಶೇಷ ಲಕ್ಷಣವು ಅದರ ಆಕ್ರಮಣಕಾರಿ ಪಾತ್ರದಲ್ಲಿ ಕಂಡುಬಂದಿತು. ಈ ಬಾರಿ ಕಾರ್ಮಿಕರು ಹಿಂಜರಿತದ ವರ್ಷಗಳಲ್ಲಿ ಜಾರಿಗೆ ಬಂದ

ಪುಟ 14 ನೋಡಿ

14 ವರ್ಷಗಳ ನಂತರ ನಂದಿಗ್ರಾಮ ‘ಗೋಲೀಬಾರ್’ನ ಪಿತೂರಿ ಬಯಲಾಗುತ್ತಿದೆ!

“ನಿಮಗೆ ನೆನಪಿರಬಹುದು, ಹಲವು ವ್ಯಕ್ತಿಗಳು (ಹುಸಿ) ಪೋಲೀಸ್ ಸಮವಸ್ತ್ರದಲ್ಲಿದ್ದವರು ಗುಂಡು ಹಾರಿಸಿದರು. ಅವರು ಹವಾಯಿ ಚಪ್ಪಲಿ ಧರಿಸಿದ್ದರು. ಈ ಬಾರಿ ಕೂಡ ಇಂತಹ ಹಗರಣಗಳು ತಯಾರಾಗುತ್ತಿವೆ. ತಂದೆ–ಮಗ ಜೋಡಿ ನಂದಿಗ್ರಾಮವನ್ನು ಪ್ರವೇಶಿಸಲು ಪೋಲೀಸರಿಗೆ ಪರವಾನಿಗೆ ಕೊಟ್ಟಿದ್ದಾರೆ. ನಾನು ಈ ವಿಷಯದಲ್ಲಿ ಅವರಿಗೆ ಸವಾಲು ಹಾಕುತ್ತೇನೆ, ನಾನೇನೂ ಹೇಳಿಲ್ಲ, ಇಷ್ಟು ಸಾಕು”–ಇದು ಪಶ್ಚಿಮ ಬಂಗಾಲದ ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಟಿಎಂಸಿ ಅಧ್ಯಕ್ಷೆ ಮತ್ತು ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಮಾರ್ಚ್ 28 ರಂದು ಮಾಡಿದ ಭಾಷಣದ ಒಂದು ತುಣುಕು.

ಅವರ ಈ ಆರು ವಾಕ್ಯಗಳು ಪಶ್ಚಿಮ ಬಂಗಾಲದಲ್ಲಿ ಎಡರಂಗದ ಆಳ್ವಿಕೆಯನ್ನು ಕೊನೆಗೊಳಿಸಲು ಟಿಎಂಸಿಗೆ ನೆರವಾದ ಎರಡು ಪ್ರಮುಖ ಘಟನೆಗಳಲ್ಲಿ ಒಂದಾದ ನಂದಿಗ್ರಾಮ್ ‘ಗೋಲೀಬಾರ್’ ಘಟನೆಯ ಹಿಂದೆ ಇದ್ದ ಭಯಾನಕ ಪಿತೂರಿಯ ಬಹಳಷ್ಟು ನಿಜಗಳನ್ನು 14 ವರ್ಷಗಳ ನಂತರ ಬಯಲಿಗೆ ತಂದಿದೆ, ಉಳಿದದ್ದು ಇನ್ನೂ ಕೆಲವು ದಿನಗಳಲ್ಲಿ ಸ್ಪಷ್ಟವಾಗಬಹುದು ಎಂದು ಹಲವು ರಾಜಕೀಯ ವೀಕ್ಷಕರು ಟಿಪ್ಪಣಿ ಮಾಡಿದ್ದಾರೆ.

ಸರಿಯಾಗಿ 14 ವರ್ಷಗಳ ಹಿಂದೆ, ಮಾರ್ಚ್ 14, 2007 ರಂದು 14 ತೃಣಮೂಲ ಕಾಂಗ್ರೆಸ್(ಟಿಎಂಸಿ)ನವರು ಎನ್ನಲಾದ 14 ಮಂದಿಯನ್ನು ಪೋಲಿಸರು ಹೊಡೆದು ಕೊಂದರು ಎಂದು ಆಗ ಪ್ರಚಾರ ಮಾಡಲಾಗಿತ್ತು. ಇಲ್ಲಿ ಮಮತಾ ಬ್ಯಾನರ್ಜಿಯವರು ಉಲ್ಲೇಖಿಸಿರುವ ತಂದೆ–ಮಗ ಜೋಡಿ ಎಂದರೆ ಶಿಶಿರ್ ಅಧಿಕಾರಿ ಮತ್ತು ಈ ಬಾರಿ ಈ ಕ್ಷೇತ್ರದಿಂದ ಮಮತಾ ಬ್ಯಾನರ್ಜಿ ಎದುರು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಸುವೇಂದು ಅಧಿಕಾರಿ. ಇವರು ಆಗ ಟಿಎಂಸಿ ಯ ಒಬ್ಬ ಪ್ರಮುಖ ಮುಖಂಡರು ಹಾಗೂ ಮಮತಾ ಬ್ಯಾನರ್ಜಿಯವರ ಪ್ರಮುಖ ಸಹಾಯಕರಲ್ಲಿ ಒಬ್ಬರಾಗಿದ್ದರು. ಈ ಮೂಲಕ ಈಗ ಅವರನ್ನು ಟೀಕಿಸುವ ಭರದಲ್ಲಿ ಮಮತಾ ಬ್ಯಾನರ್ಜಿಯವರು ಅವರೊಂದಿಗೆ, ತಮ್ಮ ಪಾತ್ರವನ್ನೂ ಬಯಲು ಮಾಡಿಕೊಂಡಿದ್ದಾರೆ ಎಂದು ಹಲವು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಆಗ ಪಶ್ಚಿಮ ಬಂಗಾಲದಲ್ಲಿ ಎಡರಂಗದ ಆಳ್ವಿಕೆಯಿತ್ತು. ದೇಶದಲ್ಲಿ ಎರಡು ಪೆಟ್ರೋ ರಾಸಾಯನಿಕ ಕೇಂದ್ರಗಳನ್ನು ರಚಿಸುವ ಪ್ರಸ್ತಾವವಿದ್ದು, ಅವುಗಳಲ್ಲಿ ಒಂದನ್ನು ನಂದಿಗ್ರಾಮದಲ್ಲಿ ಸಾರ್ವಜನಿಕ ವಲಯದ ಕಂಪನಿಯ ಸಹಕಾರದಿಂದ ನಿರ್ಮಿಸುವ ಯೋಜನೆಯಿತ್ತು. ಆದರೆ ಇದಕ್ಕೆ ಜಮೀನು ಸ್ವಾಧೀನ ಪಡಿಸಿಕೊಳ್ಳುವಲ್ಲಿ ವಿರೋಧ ಬಂದುದರಿಂದ ಎಡರಂಗ ಸರಕಾರ ಈ ವಿಷಯದಲ್ಲಿ ಮುಂದುವರೆಯುವುದಿಲ್ಲ ಎಂದು ನಿರ್ಧರಿಸಿತು. “ನಂದಿಗ್ರಾಮದ ಜನತೆಗೆ ಬೇಡವಾದರೆ ಒಂದಿಂಚೂ ಜಮೀನನ್ನೂ ಸ್ವಾಧೀನ ಪಡಿಸಿಕೊಳ್ಳುವುದಿಲ್ಲ” ಎಂದು ಆಗ ಮುಖ್ಯಮಂತ್ರಿಯಾಗಿದ್ದ ಬುದ್ಧದೇಬ್ ಭಟ್ಟಾಚಾರ್ಯ ಘೋಷಿಸಿದ್ದರು. ಆದರೂ ಮಾವೋವಾದಿಗಳು ಇದನ್ನು ‘ಮುಕ್ತಾಂಚಲ’ (ವಿಮೋಚಿತ ಪ್ರದೇಶ) ಎಂದು ಘೋಷಿಸಿ ಯುವಕರಿಗೆ ಶಸ್ತ್ರ ತರಬೇತಿ ನೀಡುತ್ತಿದ್ದರು. ಸರಕಾರದ ಯಾವ ಕೆಲಸವೂ ಅಲ್ಲಿ ನಡೆಯದಂತೆ ಮಾಡಿದ್ದರು. ಪಂಚಾಯತು ಕಚೇರಿಗಳನ್ನು ಮುಚ್ಚಿದರು, ಇಲ್ಲವೇ ಲೂಟಿ ಮಾಡಿದರು. ಎಲ್ಲ ಅಭಿವೃದ್ಧಿ ಕಾಮಗಾರಿಗಳು ನಿಂತು ಹೋಗಿದ್ದವು. ಇವೆಲ್ಲದರಲ್ಲಿ


ನಂದಿಗ್ರಾಮ, ಮಾರ್ಚ್ 2007 ರಲ್ಲಿ

ಟಿಎಂಸಿ ಮಾವೋವಾದಿಗಳ ಜತೆಗೆ ಕೈಜೋಡಿಸಿತ್ತು.

ಈ ಬೆಳವಣಿಗೆಗಳ ಮೇಲೆ ಕಣ್ಣಿಟ್ಟಿದ್ದ ನಾಲ್ವರು ಹಿರಿಯ ಆಡಳಿತ ಮತ್ತು ಪೋಲಿಸ್ ಅಧಿಕಾರಿಗಳು ಮಾರ್ಚ್ 14ರಂದು ಗೋಲೀಬಾರಿನ ಮ್ಯಾಜಿಸ್ಟ್ರೇಟ್ ಅನುಮತಿಯೊಂದಿಗೆ ನಂದಿಗ್ರಾಮ ಪ್ರವೇಶಿಸಿದರು. ಪ್ರತಿರೋಧ ಬಂದಾಗ ಮೊದಲು ಆಶ್ರುವಾಯು ಪ್ರಯೋಗಿಸಿದರು, ರಬ್ಬರ್ ಬುಲೆಟ್ ಹಾರಿಸಿದರು, ನಂತರ ಗೋಲೀಬಾರ್ ನಡೆಸಿದರು. ಅವರ ಪ್ರಕಾರ ಮೂವರು ಜನ ಇದರಿಂದ ಸತ್ತರು. ಆದರೆ ಸತ್ತವರ ಸಂಖ್ಯೆ 14 ಆಗಿತ್ತು. ಈ 14 ಹೆಣಗಳಲ್ಲಿ ಕನಿಷ್ಟ ಆರು ಹೆಣಗಳಲ್ಲಿ ಹರಿತ ಆಯುಧಗಳಿಂದ ಮಾಡಿದ ಗಾಯಗಳ ಗುರುತುಗಳಿದ್ದವು. ಅಂದರೆ ಅವರು ಪೋಲೀಸರ ಗೋಲೀಬಾರಿನಿಂದ ಸತ್ತಿರಲಿಲ್ಲ.

ಆದರೂ ಅಂದು ಅಲ್ಲಿ ಇರದ ಮಮತಾ ಬ್ಯಾನರ್ಜಿ ಮತ್ತು ಸುವೇಂದು ಅಧಿಕಾರಿ ಎಡರಂಗ ಸರಕಾರ ಜನಗಳ ಹೆಣಗಳ ಮೇಲೆ ರಾಜ್ಯಭಾರ ನಡೆಸುತ್ತಿದೆ ಎಂದು ಆರ್ಭಟಿಸಿದರು. ಹವಾಯಿ ಚಪ್ಪಲಿ ಧರಿಸಿದ್ದ ಪೋಲೀಸರು ಜನಗಳ ಮಾರಣ ಹೋಮ ಮಾಡಿದರು ಎಂದು ಪ್ರಚಾರ ಮಾಡಿದರು.

ಕಲ್ಕತ್ತಾ ಹೈಕೋರ್ಟ್ ತಾನಾಗಿಯೇ ಈ ಘಟನೆಯನ್ನು ಗಮನಕ್ಕೆ ತಗೊಂಡಿತು. ಆದರೆ ಆ ವೇಳೆಗೆ ಅಧಿಕಾರಕ್ಕೆ ಬಂದ ಮಮತಾ ಬ್ಯಾನರ್ಜಿ ಸರಕಾರ ನಿಜವಾದ ಹಲ್ಲೆಕೋರರ ತನಿಖೆ ನಡೆಯದಂತೆ ನೊಡಿಕೊಂಡಿತು ಎನ್ನಲಾಗಿದೆ. ಮೇಲೆ ಹೇಳಿದ ಪೋಲಿಸ್ ಮತ್ತಿತರ ಅಧಿಕಾರಿಗಳು ಟಿಎಂಸಿ ಆಳ್ವಿಕೆಯಲ್ಲಿ ಬಡ್ತಿ ಪಡೆದರು, ಒಬ್ಬರಂತೂ ನಿವೃತ್ತಿಯ ನಂತರ ಟಿಎಂಸಿ ಸೇರಿದರು!

ಈಗ, ಆ 14ರಲ್ಲಿ ಹೆಚ್ಚಿನವರನ್ನು ಕೊಂದ ‘ಚಪ್ಪಲಿಧಾರಿ ‘ಪೋಲೀಸರು’ ನಿಜವಾಗಿಯೂ ಯಾರು ಎಂದು ಸ್ವತಃ ಮುಖ್ಯಮಂತ್ರಿಗಳೇ ಸಂಕೇತ ನೀಡಿದ್ದಾರೆ. ಇದು ಟಿಎಂಸಿ–ಮಾವೋವಾದಿ ಪಿತೂರಿ, ವಾಸ್ತವವಾಗಿ ಹೆಣಗಳ ಮೇಲೆ ಅಧಿಕಾರ ಪಡೆದವರು ಟಿಎಂಸಿ ಯವರು ಎಂದು ಎಡಪಕ್ಷಗಳು ಆಗ ಹೇಳಿದ್ದರಲ್ಲಿ ಸತ್ಯಾಂಶ ಇದೆ ಎಂದುದನ್ನು ಟಿಎಂಸಿಯ ಹಾಲೀ ಮತ್ತು ಮಾಜೀ ಮುಖಂಡರುಗಳೇ ಸಾಬೀತು ಮಾಡುತ್ತಿರುವಂತೆ ಕಾಣ ಬರುತ್ತಿದೆ.

ನಂದಿಗ್ರಾಮದಲ್ಲಿ ಸಾರ್ವಜನಿಕ ವಲಯದ ಕಂಪನಿಯ ಸಹಕಾರದಲ್ಲಿನ ಪೆಟ್ರೋ ರಾಸಾಯನಿಕ ಕೇಂದ್ರ ಬರಲಿಲ್ಲ, ಆದರೆ ಅದರ ಜೊತೆಗೆ ಯೋಜಿಸಿದ್ದ ಇನ್ನೊಂದು ಪೆಟ್ರೋ ರಾಸಾಯನಿಕ ಕೇಂದ್ರ ಗುಜರಾತಿನಲ್ಲಿ ಅಂಬಾನಿಗಳ ಸಹಯೋಗದಿಂದ ನಿರ್ಮಾಣಗೊಂಡಿತು ಎಂಬುದು ಗಮನಾರ್ಹ. “ನಂದಿ ಗ್ರಾಮ ಮತ್ತು ಸಿಂಗುರ್ ನಲ್ಲಿ ಸ್ಮಶಾನ ಮೌನ ಆವರಿಸಿದೆ. ಅಂದಿನ ಕುಟಿಲ ಪಿತೂರಿಗಾರರು ಪರಸ್ಪರ ಕೆಸರು ಎರಚಿಕೊಳ್ಳುತ್ತಿದ್ದಾರೆ. ಬಂಗಾಲದ ಯುವಜನರು ಉದ್ಯೋಗಾವಕಾಶಗಳನ್ನು ಕಳಕೊಂಡಿದ್ದಾರೆ” ಎಂದು ಮಾಜಿ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ ಟಿಪ್ಪಣಿ ಮಾಡಿದ್ದಾರೆ.

ಮೋದಿ–ದೀದಿ ಅಬ್ಬರಗಳ ನಡುವೆ ಮೀನಾಕ್ಷಿ ಮುಖರ್ಜಿ ಪರವಾಗಿ ಯುವಜನರ ಸರಳ ಪ್ರಚಾರ



ದೀದಿ–ಮೋದಿ ಜಗ್ಗಾಟದಲ್ಲಿ ಒಂದು ಪ್ರತಿಷ್ಠೆಯ ಕ್ಷೇತ್ರವಾಗಿ ಬಿಟ್ಟಿರುವ ಇಲ್ಲಿ ಮುಖ್ಯಮಂತ್ರಿಗಳು ಮತ್ತು ಅವರ ಮಾಜೀ ಸಹಾಯಕ, ಈಗ ಬಿಜೆಪಿಯ ಅಭ್ಯರ್ಥಿ ಸುವೇಂದು ಅಧಿಕಾರಿಯ ಪರಸ್ಪರ ಕೆಸರೆರಚಿಕೊಳ್ಳುವ ಪ್ರಚಾರಗಳ ನಡುವೆ ಸಿಪಿಐ(ಎಂ) ಪಕ್ಷದಿಂದ ಸ್ಪರ್ಧಿಸಿರುವ ಯುವ ನಾಯಕಿ ಮೀನಾಕ್ಷಿ ಮುಖರ್ಜಿ 100 ಕ್ಕೂ ಹೆಚ್ಚಿನ ಕಾರ್ಯಕರ್ತರೊಂದಿಗೆ ಸರಳ ಪ್ರಚಾರ ನಡೆಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಬುದ್ಧದೇಬ್ ಭಟ್ಟಾಚಾರ್ಯ ಖೇದದಿಂದ ನೆನಪಿಸಿರುವಂತೆ ಅಂದಿನ ಕುಟಿಲ ಪಿತೂರಿಗಾರರಿಂದಾಗಿ ವಂಚಿತರಾದ ಬಂಗಾಲದ ಯುವಜನರ ಬೇಡಿಕೆಗಳನ್ನು ಎತ್ತಿಕೊಂಡು ಹಳ್ಳಿ–ಹಳ್ಳಿಗಳಿಗೆ ಭೇಟಿ ನೀಡಿ ಮತಯಾಚನೆ ಮಾಡುತ್ತಿದ್ದಾರೆ. ಜನಪರ ಆದ್ಯತೆಯ ವಿಚಾರಗಳ ಬಗ್ಗೆ ಘೋಷಣೆಗಳೇ ಅವರ ಪ್ರಚಾರದ ಜೀವಾಳ. ಟಿಎಂಸಿ– ಬಿಜೆಪಿಯ ಅಬ್ಬರಗಳ ನಡುವೆಯೂ ಜನರಲ್ಲಿ ಪಕ್ಷದ ಮೇಲಿನ ವಿಶ್ವಾಸ ಮುಸುಕಾಗದೆ ಉಳಿದಿದೆ, ಭರವಸೆಯನ್ನು ಮೂಡಿಸಿದೆ ಎನ್ನುತ್ತಾರೆ ಅವರು.

37 ವರ್ಷದ ಮೀನಾಕ್ಷಿ ಮುಖರ್ಜಿ ಅವರು, ನಾವು ನಿರುದ್ಯೋಗದಿಂದ ಸಂಕಷ್ಟದಲ್ಲಿರುವ ಯುವಜನತೆಗೆ ಉದ್ಯೋಗಕ್ಕಾಗಿ ಹೋರಾಡುತ್ತಿದ್ದೇವೆ ನಿರಂತರವಾಗಿ ಹೋರಾಡುತ್ತಿರುವ ನಮಗೆ ಈ ಚುನಾವಣೆಯೂ ಹೋರಾಟವೇ ಆಗಿದೆ ಎನ್ನುತ್ತಾರೆ.

ಪ್ರಚಾರದ ಸಂದರ್ಭದಲ್ಲಿ 78 ವರ್ಷದ ರಶೀದ್ ಖಾನ್ ಅವರು ಮೀನಾಕ್ಷಿ ಮುಖರ್ಜಿ ಅವರನ್ನು ಉದ್ದೇಶಿಸಿ “ನೀವು ನಮಗೆ ಹೊಸ ಶಕ್ತಿಯನ್ನು ನೀಡಿದ್ದೀರಿ. ಈ ಸಮಯದಲ್ಲಿ ನಾವು ನಿಮಗೆ ಮತ ಚಲಾಯಿಸುತ್ತೇವೆ, ನೀವು ಚಿಂತಿಸದಿರಿ ಹೋರಾಡಿ” ಎಂದು ಕರೆ ನೀಡಿದರು.

ಮುಖರ್ಜಿ ಅವರನ್ನು ಹೋರಾಟಗಾರ್ತಿ ಎಂದು ಸಂಬೋಧಿಸಿದ ರಶೀದ್ ಖಾನ್ ಅವರು ಇಲ್ಲಿನ ಬಹುತೇಕ ಕುಟುಂಬಗಳು ಸಿಪಿಐ(ಎಂ) ಪಕ್ಷದ ಬೆಂಬಲಿಗರು. ನಾವು ಯಾರನ್ನು ನೋಯಿಸುವುದಿಲ್ಲ. ಆದರೆ, 2011 ರಿಂದ ನಮಗೆ ಮತದಾನ ಮಾಡಲೂ ಸಹ ಅವಕಾಶ ನೀಡಿಲ್ಲ. ತೃಣಮೂಲ ಗೂಂಡಾಗಳು ನಮ್ಮ ಮತದಾರರ ಗುರುತಿನ ಚೀಟಿಗಳನ್ನು ಕಸಿದುಕೊಳ್ಳುತ್ತಿದ್ದರು ಮತ್ತು ನಾವು ಮತ ಚಲಾಯಿಸಲು ಆಗುತ್ತಿಲ್ಲ. ನನ್ನ ವಯಸ್ಸನ್ನು ಲೆಕ್ಕಿಸದೆ ತೃಣಮೂಲ ಯುವಕರು ಹಲ್ಲೆಗಳನ್ನು ನಡೆಸಿದ್ದಾರೆ ಎಂದು ಹೇಳಿದರು.

ಸಿಪಿಎಂ ಯುವ ಕಾರ್ಯಕರ್ತ ಜಿಯೌರ್ ರಹಮಾನ್ “ನಂದಿಗ್ರಾಮದ ಪ್ರತಿಯೊಂದು ಪ್ರದೇಶದಲ್ಲೂ ನಮಗೆ ಬೆಂಬಲಿಗರಿದ್ದಾರೆ. ವಿರೋಧಿಗಳ ಬೆದರಿಕೆಗಳಿಂದಾಗಿ ಅವರು ಅದನ್ನು ಬಹಿರಂಗವಾಗಿ ಹೇಳಲಾಗುತ್ತಿಲ್ಲ. ಬಿಜೆಪಿ ಮತ್ತು ಟಿಎಂಸಿಯಲ್ಲಿ ಸಾಕಷ್ಟು ಹಣವಿದೆ, ಅದಕ್ಕಾಗಿಯೇ ಅವರು ಅಬ್ಬರದ ಪ್ರಚಾರದಲ್ಲಿ ತೊಡಗಿದ್ದಾರೆ. ಅವರಿಂದ ಜನರ ಪ್ರಶ್ನೆಗಳು ಮುನ್ನಲೆಗೆ ಬರುತ್ತಿಲ್ಲ. ಮತದಾರರಿಗೆ ಮುಕ್ತವಾಗಿ ಮತ ಚಲಾಯಿಸಲು ಅವಕಾಶವಿದ್ದರೆ, ಜನತೆ ಸಿಪಿಐ(ಎಂ)ಗೆ ಖಂಡಿತಾವಾಗಿಯೂ ಮತ ಹಾಕುತ್ತಾರೆ” ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಣ್ತಪ್ಪೋ, ಕಣ್ಕಟ್ಟೋ, ಎಪ್ರಿಲ್ ಫೂಲೋ ಅಥವ ಶುದ್ದ ಅದಕ್ಷತೆಯೋ................?

ಕೇಂದ್ರ ಹಣಕಾಸು ಮಂತ್ರಾಲಯ ಮಾರ್ಚ್ 31 ರಂದು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರಗಳನ್ನು ತೀವ್ರವಾಗಿ ಇಳಿಸಿದ ಪ್ರಕಟಣೆಯನ್ನು ಹೊರಡಿಸಿತು. 24 ಗಂಟೆಗಳೊಳಗೆ ಹಣಕಾಸು ಮಂತ್ರಿಗಳು ಈ ಪ್ರಕಟಣೆಯನ್ನು ಹಿಂದಕ್ಕೆ ತಗೊಂಡಿರುವುದಾಗಿ ಪ್ರಕಟಿಸಿದ್ದಾರೆ. ಇದು ಕಣ್ತಪ್ಪಿನಿಂದ ಹೊರಡಿಸಿದ ಆದೇಶ ಎಂದು ಅವರು ಹೇಳಿದ್ದಾರೆ. ನಿಜ, ಜನಸಾಮಾನ್ಯರಂತೆ ವ್ಯಂಗ್ಯಚಿತ್ರಕಾರರೂ ಇದನ್ನು ನಂಬಿಲ್ಲ. ನಿಜ ಕಾರಣ ಬಹುಶಃ ಮೇ 2ರ ನಂತರ ಸ್ಪಷ್ಟವಾಗಬಹುದು?!



ಪಿ. ಮಹಮ್ಮದ್, ಆಂದೋಲನ

ಮೊದಲು ನೋಟ್ ರದ್ದತಿ ಮತು ಜಿಎಸ್‌ಟಿ, ನಂತರ ಲಾಕ್‌ಡೌನ್, ಈಗ ಬಡ್ಡಿ ಕಡಿತ,



ಇಲ್ಲ, ಈ ಕೊನೆಯದ್ದು ಕಣ್ತಪ್ಪಿನಿಂದ! –ಮಂಜುಲ್, ಫಸ್ಟ್ ಪೋಸ್ಟ್

ಇಲ್ಲ, ಖಂಡಿತವಾಗಿಯೂ ಇದು ಎಪ್ರಿಲ್ 1 ರ ತಮಾಷೆ ಅಲ್ಲ ನಮ್ಮ ಹುಚ್ಚರ ದಿನ ನವೆಂಬರ್ 8



ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಶ್ರೀಮಂತರ ಮೇಲೆ ಸಂಪತ್ತು ತೆರಿಗೆಯ ಬದಲು ಸಾರ್ವಜನಿಕ ಉದ್ದಿಮೆಗಳನ್ನು ಮಾರುವುದೇಕೆ?



ಸಂಪತ್ತಿನ ತೀವ್ರ ಸ್ವರೂಪದ ಅಸಮಾನತೆಗಳಿಂದ ಈಗಾಗಲೇ ನಲುಗಿರುವ ಮೂರನೇ ಜಗತ್ತಿನ ದೇಶದ ಸರ್ಕಾರವೊಂದು ತನ್ನ ಖರ್ಚು ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳುವ ಸಲುವಾಗಿ ಸಂಪತ್ತಿನ ಮೇಲೆ ತೆರಿಗೆಯನ್ನು ವಿಧಿಸುವ ಬದಲು ಸಾರ್ವಜನಿಕ ಆಸ್ತಿಗಳನ್ನು ಮಾರುವ ಮೂಲಕ ಅಸಮಾನತೆಗಳನ್ನು ಉಲ್ಬಣಗೊಳಿಸುವುದು ಒಂದು ನಾಚಿಕೆಗೇಡಿನ ಸಂಗತಿ. ಒಂದು ವೇಳೆ ಸಂಪತ್ತಿನ ತೆರಿಗೆಯನ್ನು ಹೇರುವ ಮನಸ್ಸಿಲ್ಲದಿದ್ದರೆ, ಸರ್ಕಾರವು ಕನಿಷ್ಠ ಪಕ್ಷ ಲಾಭದ ಮೇಲಿನ ತೆರಿಗೆಯ ದರವನ್ನಾದರೂ ಹೆಚ್ಚಿಸಬಹುದಿತ್ತು. ಸಾರ್ವಜನಿಕ ವಲಯದ ಆಸ್ತಿಗಳನ್ನು ಖಾಸಗಿಯವರಿಗೆ ಮಾರುವ ಮೋದಿ ಸರ್ಕಾರದ ಉದ್ದೇಶವು, ದೇಶದ ದೃಷ್ಟಿಯಿಂದ ಒಂದು ಬೃಹತ್ ಪ್ರಮಾದವಷ್ಟೇ ಅಲ್ಲ, ಸರ್ಕಾರವು ಹೇಳಿಕೊಳ್ಳುವ ದೃಷ್ಟಿಯಿಂದ ನೋಡಿದರೂ ಸಹ ಅದರಲ್ಲಿ ಆರ್ಥಿಕ ವಿವೇಚನೆಯೇ ಕಾಣದು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಮೋದಿ ಸರ್ಕಾರವು ಭಾರತದ ಸಾರ್ವಜನಿಕ ಉದ್ದಿಮೆಗಳನ್ನು ತನ್ನ ಪ್ರೀತಿಪಾತ್ರ ಕಾರ್ಪೊರೇಟ್‌ಗಳಿಗೆ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಹಸ್ತಾಂತರಿಸುವ ಉದ್ದೇಶವನ್ನು ಗುಟ್ಟಾಗಿ ಉಳಿಸಿಲ್ಲ. ಸರ್ಕಾರದ ಖರ್ಚು–ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳುವ ಉದ್ದೇಶದಿಂದ ಕೈಗೊಳ್ಳಲಾಗುತ್ತಿರುವ ಈ ಕ್ರಮವು ಸರ್ಕಾರದ ನಿರ್ದಯ ಮನೋಭಾವವನ್ನೂ ಮತ್ತು ಅರ್ಥಶಾಸ್ತ್ರದ ಬಗ್ಗೆ ಅದು ಹೊಂದಿರುವ ಅಜ್ಞಾನವನ್ನೂ ಸೂಚಿಸುತ್ತದೆ.

ಭಾರತದ ಸಾರ್ವಜನಿಕ ವಲಯವು ವಸಾಹತು–ವಿರೋಧಿ ಹೋರಾಟದ ಫಲವಾಗಿ ಆರಂಭಗೊಂಡಿತು. ವಸಾಹತುಶಾಹಿ ಆಡಳಿತ ಎಂದಾಗ, ಕೇವಲ ರಾಜಕೀಯ ಆಳ್ವಿಕೆ ಮಾತ್ರ ವಿದೇಶೀಯರ ಕೈಯಲ್ಲಿತ್ತು ಎಂಬುದಷ್ಟೇ ಅಲ್ಲ. ವಿದೇಶಿ ಬಂಡವಾಳವು ನಮ್ಮ ದೇಶದ ಸಕಲ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದಿತ್ತು. ಹಾಗಾಗಿ, ವಸಾಹತುಶಾಹಿಯಿಂದ ಬಿಡುಗಡೆ ಹೊಂದುವುದು ಎಂದರೆ, ಕೇವಲ ರಾಜಕೀಯ ಅಧಿಕಾರವನ್ನು ಮರಳಿ ಪಡೆಯುವುದೊಂದೇ ಆಗಿರಲಿಲ್ಲ. ಎಲ್ಲಕ್ಕಿಂತಲೂ ಮಿಗಿಲಾಗಿ, ದೇಶದ ಸಕಲ ಸಂಪನ್ಮೂಲಗಳನ್ನೂ (ನೈಸರ್ಗಿಕ ಮತ್ತು ಆರ್ಥಿಕ) ವಿದೇಶಿ ಬಂಡವಾಳಿಗರ ಕೈಯಿಂದ ಮರಳಿ ಪಡೆಯುವುದಾಗಿತ್ತು. ದೇಶದ ಇಡೀ ಜನತೆಗೆ ಸೇರಿದ ಸಂಪನ್ಮೂಲಗಳ ನಿರ್ವಹಣೆಯ ಕೆಲಸವನ್ನು ಸಾರ್ವಜನಿಕ ವಲಯವನ್ನು ಬಿಟ್ಟರೆ ಬೇರೆ ಯಾರೂ ನಿರ್ವಹಿಸುವುದು ಶಕ್ಯವಿರಲಿಲ್ಲ. ಏಕೆಂದರೆ, ಇಡೀ ಜನತೆಯ ಪರವಾಗಿ ಮರಳಿ ಪಡೆದ ಸಂಪನ್ಮೂಲಗಳ ನಿರ್ವಹಣೆಯನ್ನು ಜನರ ಪ್ರಾತಿನಿಧಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಬಲ್ಲ ಅರ್ಹತೆ ಸಾರ್ವಜನಿಕ ವಲಯಕ್ಕೆ ಮಾತ್ರ ಇರಲುಂಟು.

ಭಾರತದ ಅರ್ಥವ್ಯವಸ್ಥೆಯ ಮೇಲೆ ವಿದೇಶಿ ಬಂಡವಾಳವು ಹೊಂದಿದ್ದ ಬಿಗಿಹಿಡಿತವನ್ನು ಇಡೀ ಜನತೆಯ ಹಿತ ಕಾಯುವ ದೃಷ್ಟಿಯಿಂದ ಕಿತ್ತೊಗೆದು, ಅದರ ಸ್ಥಾನವನ್ನು ತುಂಬಲು ಸಮರ್ಥವಾದ ಏಕೈಕ ಸಂಸ್ಥೆ ಎಂದರೆ, ಸಾರ್ವಜನಿಕ ವಲಯವೇ. ಭಾರತದ ಖಾಸಗಿ ವಲಯವು ವಿದೇಶಿ ಬಂಡವಾಳದ ಸ್ಥಾನವನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಹೆಚ್ಚೆಂದರೆ, ಅದು ವಿದೇಶಿ ಮಹಾನಗರೀಯ (ಮೆಟ್ರೊಪಾಲಿಟನ್) ಬಂಡವಾಳದಿಂದ ಎರವಲು ಪಡೆದ ಜ್ಞಾನವನ್ನು ಬಳಸಿಕೊಳ್ಳಬಹುದಿತ್ತು ಮತ್ತು ಅವರೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಬಹುದಿತ್ತು. ಈ ಪರಿಸ್ಥಿಯಲ್ಲಿ ದೇಶಿ ಬಂಡವಾಳವು ತನಗೊಂದಿಷ್ಟು ಅವಕಾಶ ಕಲ್ಪಿಸಿಕೊಳ್ಳಬಹುದಿತ್ತೇ ವಿನಃ, ವಿದೇಶಿ ಬಂಡವಾಳದ ಆಧಿಪತ್ಯವನ್ನು ಬದಲಾಯಿಸಿ ಅದರ ಸ್ಥಾನವನ್ನು ತುಂಬುವಷ್ಟು ಸಾಮರ್ಥ್ಯ ಹೊಂದಿರಲಿಲ್ಲ. ಆದರೆ, ಸಾರ್ವಜನಿಕ ವಲಯದ ಪರವಾದ ಈ ಊಹಾತ್ಮಕ ತರ್ಕವು ಒಂದು ಗೌಣ ತರ್ಕವೇ. ನಿಜವಾದ ತರ್ಕ ತತ್ವ–ಸಿದ್ಧಾಂತಗಳಿಗೆ ಸಂಬಂಧಿಸಿದ ವಿಷಯ. ಒಂದು ಸಂಸದೀಯ ಪರೀಕ್ಷಣೆಗೆ ಒಳಪಡುವ ಸಾರ್ವಜನಿಕ ವಲಯ ಮಾತ್ರವೇ ಇಡೀ ಜನತೆಯ ಒಟ್ಟಾರೆ ಹಿತಾಸಕ್ತಿಗಾಗಿ ಕೆಲಸ ಮಾಡಬಹುದಾಗಿತ್ತು.

ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ನಿದರ್ಶನವನ್ನು ಉಲ್ಲೇಖಿಸಬಹುದೆಂದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳು ಕಾರ್ಯನಿರ್ವಹಿಸಿದ ರೀತಿ. ಕೆಲವು ಹೆಸರಾಂತ ಉದ್ದಿಮೆದಾರ ಮನೆತನಗಳ ಒಡೆತನದಲ್ಲಿದ್ದ ಹಲವು ಹತ್ತು ಖಾಸಗಿ ಬ್ಯಾಂಕ್‌ಗಳು ಸಾರ್ವಜನಿಕರಿಂದ ಸಂಗ್ರಹಿಸಿದ ಠೇವಣಿಯನ್ನು ಈ ಮನೆತನಗಳು ನಡೆಸುತ್ತಿದ್ದ ಸಂಸ್ಥೆಗಳ ವ್ಯವಹಾರಗಳಿಗೆ ಒದಗಿಸಿಕೊಡುವ ಕಾರ್ಯ ನಿರ್ವಹಿಸಿದವು. ರಾಷ್ಟ್ರೀಕರಣದ ನಂತರ ಈ ಬ್ಯಾಂಕ್‌ಗಳು ಸಂಗ್ರಹಿಸಿದ ಠೇವಣಿಗಳನ್ನು, ಆ ವರೆಗೆ ನಿರ್ಲಕ್ಷಕ್ಕೆ ಒಳಗಾಗಿದ್ದ ಕಿರು ಉತ್ಪಾದಕರು ಮತ್ತು ಸಣ್ಣ ಸಣ್ಣ ರೈತರಿಗೆ ಸಾಲ ಕೊಡಲು ಬಳಸಿದವು. ಕೆಲವು ಉದ್ದಿಮೆದಾರ ಮನೆತನಗಳ ಅಂಗ ಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿದ್ದ ಈ ಬ್ಯಾಂಕ್‌ಗಳು ರಾಷ್ಟ್ರೀಕರಣದ ನಂತರ ಇಡೀ ದೇಶವನ್ನು ವ್ಯಾಪಿಸಿಕೊಂಡವು. ಇಂತಹ ಒಂದು ವಿಶಾಲ ಹಣಕಾಸು ವ್ಯವಸ್ಥೆಯನ್ನು ಪ್ರಪಂಚವು ಅದುವರೆಗೆ ಕಂಡಿರಲಿಲ್ಲ. ಬ್ಯಾಂಕಿಂಗ್ ಚಟುವಟಿಕೆಗಳ ಈ ರೀತಿಯ ವಿಸ್ತರಣೆಯು ಹಸಿರು ಕ್ರಾಂತಿಯ ಯಶಸ್ಸಿಗೆ ಮತ್ತು ಸ್ವಲ್ಪಮಟ್ಟಿಗಾದರೂ ದೇಶಕ್ಕೆ ಆಹಾರ ಭದ್ರತೆ ಒದಗಿಸುವಲ್ಲಿ ಕಾರಣವಾಗಿತ್ತು.

ಈ ಎಲ್ಲ ಅಂಶಗಳೂ ಎಲ್ಲರಿಗೂ ಚೆನ್ನಾಗಿ ತಿಳಿದಿರಬೇಕು ಮತ್ತು ತಿಳಿದಿತ್ತು ಸಹ. ಆದರೂ ಈ ಅಂಶವನ್ನು ಬಿಜೆಪಿಗೆ ಮತ್ತೊಮ್ಮೆ ಜ್ಞಾಪಿಸಿ ಕೊಡಬೇಕಾಗುತ್ತದೆ. ಏಕೆಂದರೆ, ಬಿಜೆಪಿಯ ಮಾತೃ ಸಂಸ್ಥೆಯು ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಪಾಲ್ಗೊಳ್ಳಲೇ ಇಲ್ಲ. ಅಷ್ಟೇ ಅಲ್ಲ. ಆ ಪಕ್ಷಕ್ಕೆ ಆಹಾರ ಭದ್ರತೆಯ ಮಹತ್ವವನ್ನು ಅರ್ಥಮಾಡಿಕೊಳ್ಳುವ ಸಹೃದಯತೆಯೂ ಇಲ್ಲ ಅಥವಾ ಅದನ್ನು ಮೆಚ್ಚುವ ಔದಾರ್ಯವೂ ಇಲ್ಲ ಎಂಬುದು ಆ ಪಕ್ಷವು ದೇಶದ ಆಹಾರ ಭದ್ರತೆಯನ್ನು "ಆಹಾರ–ಸಾಮ್ರಾಜ್ಯಶಾಹಿ"ಗೆ ತೆರೆದಿಡುವ ಕೃಷಿ ಕಾನೂನುಗಳ ಮೂಲಕ ನಡೆಸುತ್ತಿರುವ ಪ್ರಸ್ತುತ ಪ್ರಯತ್ನಗಳಿಂದ ಸ್ಪಷ್ಟವಾಗುತ್ತದೆ. ಮೋದಿ ಸರ್ಕಾರವು ಅಧಿಕಾರಕ್ಕೆ ಬರುವುದಕ್ಕೂ ಮುನ್ನವೇ ನವ ಉದಾರವಾದಿ ನೀತಿಗಳನ್ನು ಆರಂಭಿಸಿದ ಹಿಂದಿನ ಸರ್ಕಾರವೂ ಸಾರ್ವಜನಿಕ ವಲಯವನ್ನು ದುರ್ಬಲಗೊಳಿಸುವ ಉದ್ದೇಶ ಹೊಂದಿತ್ತು ಎಂಬುದೂ ಸಹ ಎಲ್ಲರಿಗೂ ಗೊತ್ತಿರುವ ವಿಚಾರವೇ. ಸಾರ್ವಜನಿಕ ವಲಯದಲ್ಲಿ ದಕ್ಷತೆ ಇಲ್ಲ ಮತ್ತು ಅದು ಲಾಭಗಳಿಸುತ್ತಿಲ್ಲ ಎಂಬ ವಾದವನ್ನು ಮುಂದಿಟ್ಟು ಅದನ್ನು ಖಾಸಗಿಕರಣಗೊಳಿಸುವ ಮತ್ತು ಅಂತಿಮವಾಗಿ ಖಾಸಗಿ ವಲಯಕ್ಕೆ ಹಸ್ತಾಂತರಿಸುವ ಹುನ್ನಾರವು ಕಳೆದ ಇಪ್ಪತ್ತೈದು ವರ್ಷಗಳಿಂದಲೂ ನಡೆಯುತ್ತಿದೆ. ಈ ವಿದ್ಯಮಾನವು ಸಾರ್ವಜನಿಕ ವಲಯದ ಮೂಲ ತರ್ಕ–ಉದ್ದೇಶಗಳನ್ನು ಆಳರಸರು ಗಾಳಿಗೆ ತೂರಿದರು ಎಂಬುದನ್ನು ಸೂಚಿಸುತ್ತದೆ. ಸಾರ್ವಜನಿಕ ವಲಯವನ್ನು ಸಮರ್ಥಿಸಿ ಈ ಮಾತನ್ನು ಹೇಳುವಾಗ, ಸಾರ್ವಜನಿಕ ವಲಯದಲ್ಲಿ ದಕ್ಷತೆ ಇರಬಾರದು ಮತ್ತು ಅದು ನಷ್ಟದಲ್ಲಿರುವುದು ಸರಿ ಎಂಬುದು ಈ ಮಾತಿನ ಅರ್ಥವಲ್ಲ.

ಮತ್ತೊಂದು ಹೀನ ತರ್ಕವನ್ನು ಮುಂದೊಡ್ಡಲಾಯಿತು: ಸಾರ್ವಜನಿಕ ಉದ್ದಿಮೆಗಳ ಷೇರುಗಳನ್ನು ಮಾರುವ ಮೂಲಕ ಬಂದ ಹಣವನ್ನು ಸರ್ಕಾರದ ಖರ್ಚು–ವೆಚ್ಚಗಳಿಗೆ "ಸುರಕ್ಷಿತ" ರೀತಿಯಲ್ಲಿ ಬಳಸಿಕೊಂಡು ವಿತ್ತೀಯ ಕೊರತೆಯ ಸಂಭಾವ್ಯತೆಯನ್ನು ತಪ್ಪಿಸಿಕೊಳ್ಳಬಹುದು ಎಂಬ ಅಸಂಬದ್ಧತೆ ಮತ್ತು ಅತಾರ್ಕಿಕತೆಗಳಿಂದ ಕೂಡಿದ ಒಂದು ವಾದವನ್ನು ಮುಂದೊಡ್ಡಲಾಯಿತು. ಈ ವಾದಕ್ಕೆ ಗಟ್ಟಿಯಾಗಿ ಆತುಕೊಂಡಿರುವ ಮೋದಿ ಸರ್ಕಾರವು ತನ್ನ ವಿತ್ತ ನೀತಿಗಳು ಫಜೀತಿಗೆ ಸಿಕ್ಕಿಕೊಂಡಿರುವ ಸಮಯದಲ್ಲಿ ಸಾರ್ವಜನಿಕ ವಲಯದ ದೊಡ್ಡ ದೊಡ್ಡ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲು ಅಥವಾ ಅವುಗಳನ್ನು ಇಡಿಯಾಗಿಯೇ ಮಾರಲು ಹೊರಟಿದೆ.

ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ/ಮಾರಾಟದ ವಾದವು ಅದೆಷ್ಟು ಅಸಂಬದ್ಧತೆ ಮತ್ತು ಅತಾರ್ಕಿಕತೆಗಳಿಂದ ಕೂಡಿದೆ ಎಂಬುದನ್ನು ಈ ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳಬಹುದು. ಸರಕಾರವು ಬ್ಯಾಂಕ್‌ಗಳಿಂದ ಸಾಲ ಪಡೆದು 100 ರೂ.ಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಿದರೆ, ಒಟ್ಟಾರೆ ಬೇಡಿಕೆಯಲ್ಲಿ ಹೆಚ್ಚಳವಾಗುತ್ತದೆ ಮತ್ತು ಒಟ್ಟು ಉತ್ಪತ್ತಿ ಮತ್ತು ಒಟ್ಟು ಆದಾಯಗಳಲ್ಲೂ ಹೆಚ್ಚಳವಾಗುತ್ತದೆ. ಆದಾಯ ಸೃಷ್ಟಿಯ ಈ ಪ್ರಕ್ರಿಯೆಯು ಮುಂದುವರೆಯುತ್ತಾ ಹೋಗುತ್ತದೆ, ಎಲ್ಲಿಯವರೆಗೆ ಎಂದರೆ, ಹೆಚ್ಚುವರಿ ಆದಾಯದಿಂದ ಬರುವ ಹೆಚ್ಚುವರಿ ಖಾಸಗಿ ಉಳಿತಾಯಗಳು ಖಾಸಗಿ ಹೂಡಿಕೆಗಿಂತಲೂ ಅಧಿಕವಾಗುತ್ತವೆ ಮತ್ತು ಹೆಚ್ಚುವರಿಯಾಗಿ ಖರ್ಚು ಮಾಡಿದ ಅದೇ 100 ರೂ.ಗಳಿಗೆ ಸಮನಾಗುತ್ತವೆ. ಈ 100 ರೂ.ಗಳನ್ನು ಬಾಂಡ್‌ಗಳನ್ನು ಮಾರುವ ಮೂಲಕ ಸರ್ಕಾರವು ಸಾಲ ಎತ್ತಬಹುದು ಮತ್ತು ಅದರಿಂದ ಬ್ಯಾಂಕ್ ಸಾಲವನ್ನು ತೀರಿಸಬಹುದು. ಸಾರ್ವಜನಿಕ ಆಸ್ತಿಗಳ ಮಾರಾಟದ ವಿಷಯದಲ್ಲಿ, ಒಂದೇ ಒಂದು ವ್ಯತ್ಯಾಸದ ಹೊರತಾಗಿ, ಇದೇ ಪ್ರಕ್ರಿಯೆ ನಿಖರವಾಗಿ ಪುನರಾವರ್ತನೆಗೊಳ್ಳುವುದನ್ನು ಕಲ್ಪಿಸಿಕೊಳ್ಳಬಹುದು. ಆ ವ್ಯತ್ಯಾಸ ಯಾವುದೆಂದರೆ, ಸರ್ಕಾರವು ಬಾಂಡ್‌ಗಳನ್ನು ಮಾರಿ ಈ 100 ರೂ.ಗಳನ್ನು ಸಾಲ ಎತ್ತುವುದರ ಬದಲು ಸಾರ್ವಜನಿಕ ಉದ್ದಿಮೆಗಳ ಷೇರುಗಳನ್ನು ಮಾರುತ್ತದೆ.

ಈ ರೀತಿಯಲ್ಲಿ ಈ ಎರಡು ಪ್ರಕರಣಗಳಲ್ಲೂ, ಖಾಸಗಿಯವರಿಗೆ ಮಾರುವ ಸರ್ಕಾರಿ ಕಾಗದ–ಪತ್ರಗಳ ಸ್ವರೂಪವನ್ನು ಹೊರತುಪಡಿಸಿದರೆ, ಯಾವುದೇ ವ್ಯತ್ಯಾಸವಿಲ್ಲ. ಒಂದು ಪ್ರಕರಣದಲ್ಲಿ ಬಾಂಡ್‌ಗಳನ್ನು ಮತ್ತು ಇನ್ನೊಂದು ಪ್ರಕರಣದಲ್ಲಿ ಷೇರುಗಳನ್ನು ಮಾರಲಾಗುತ್ತದೆ. ಆದ್ದರಿಂದ, ವಿತ್ತೀಯ ಕೊರತೆಯ ಮಾರ್ಗವಾಗಿ ಸರ್ಕಾರದ ಖರ್ಚು–ವೆಚ್ಚಗಳಿಗೆ ಹಣಕಾಸು ಹೊಂದಿಸಿಕೊಳ್ಳುವುದಕ್ಕೂ ಮತ್ತು ಸಾರ್ವಜನಿಕ ಸ್ವತ್ತುಗಳ ಮಾರಾಟದ ಮೂಲಕ (ಅಂದರೆ, ಖಾಸಗೀಕರಣದ ಮೂಲಕ) ಸರ್ಕಾರದ ಖರ್ಚು–ವೆಚ್ಚಗಳಿಗೆ ಹಣಕಾಸು ಹೊಂದಿಸಿಕೊಳ್ಳುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಆದರೆ ಎರಡನೆಯ ಪ್ರಕರಣದಲ್ಲಿ (ಸಾರ್ವಜನಿಕ ಸ್ವತ್ತುಗಳ ಮಾರಾಟ), ಅರ್ಥವ್ಯವಸ್ಥೆಯ ಆಯಕಟ್ಟಿನ ಸಂಸ್ಥೆಗಳನ್ನು (ನಿರ್ಣಾಯಕ ಕ್ಷೇತ್ರಗಳನ್ನು) ಸರ್ಕಾರವು ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್ ಕುಳಗಳಿಗೆ ಶರಣಾಗಿ ಸಮರ್ಪಣೆ ಮಾಡುತ್ತದೆ.


ಸರ್ಕಾರಗಳು ತಮ್ಮ ಖರ್ಚು–ವೆಚ್ಚಗಳಿಗಾಗಿ ಹಣಕಾಸು ಹೊಂದಿಸಿಕೊಳ್ಳುವ ಈ ಎರಡು ವಿಧಾನಗಳ ನಡುವಿನ ವ್ಯತ್ಯಾಸವನ್ನು ಐಎಂಎಫ್ ಮತ್ತು ಹಣಕಾಸು ಬಂಡವಾಳವು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತವೆ. ಸಾರ್ವಜನಿಕ ಆಸ್ತಿಗಳ ಮಾರಾಟವನ್ನು ವಿತ್ತೀಯ ಕೊರತೆಯ ಭಾಗವೆಂದು ಅವು ಪರಿಗಣಿಸುವುದಿಲ್ಲ. ಪರಿಗಣಿಸುವುದಿಲ್ಲ ಏಕೆಂದರೆ, ಅದರಲ್ಲಿ ಅವರ ಪಟ್ಟಭದ್ರ ಹಿತಾಸಕ್ತಿ ಇದೆ. ಆರ್ಥಿಕ ತರ್ಕದಿಂದ ಅವರು ಪ್ರೇರಿತರಾಗಿಲ್ಲ. ಬದಲಿಗೆ, ಸಿದ್ಧಾಂತದಿಂದ ಪ್ರೇರಿತರು. ಅವರು ಸಾರ್ವಜನಿಕ ವಲಯದ ಅಂತ್ಯವನ್ನು ಬಯಸುತ್ತಾರೆ. ಏಕೆಂದರೆ, ಸಾಮ್ರಾಜ್ಯಶಾಹಿಯ ಆರ್ಥಿಕ ಪಟ್ಟುಗಳಿಗೆ ಎದುರಾಗಿ ದೇಶವನ್ನು ರಕ್ಷಿಸಿದ ಮತ್ತು ನವ ಉದಾರವಾದಿ ನೀತಿಗಳ ಬೆನ್ನು ಹತ್ತಿದ ನಂತರವೂ ತನ್ನ ಹಿಂದಿನ ಅವತಾರದ ನೆರಳಾಗಿ ಉಳಿದಿರುವ ಹಣಕಾಸು ಬಂಡವಾಳವನ್ನು ಮೆಟ್ಟಿ ನಿಲ್ಲಬಲ್ಲ ಶಕ್ತಿಯೆಂದರೆ ಭಾರತದ ಸಾರ್ವಜನಿಕ ವಲಯವೇ.

ಸರ್ಕಾರದ ಕೆಲವು ಅಧಿಕೃತ ವಕ್ತಾರರು ಸಾರ್ವಜನಿಕ ಆಸ್ತಿಗಳನ್ನು ಮಾರುವ ಮೂಲಕ ಬಂದ ಹಣವನ್ನು "ಸಾಲ–ಸೃಷ್ಟಿಸದ" ಸಂಪನ್ಮೂಲಗಳ ಕ್ರೋಢೀಕರಣವೆಂದು ಮತ್ತು ಇದು ಸಂಪನ್ಮೂಲಗಳನ್ನು ಸಂಗ್ರಹಿಸುವ ಒಂದು ಅತ್ಯುತ್ತಮ ವಿಧಾನವೆಂದೂ ಬಿಂಬಿಸಲು ಪ್ರಯತ್ನಿಸುತ್ತಾರೆ. ಆದರೆ ಇದು ಅರ್ಥವಿಲ್ಲದ್ದು: ಸಾರ್ವಜನಿಕ ಆಸ್ತಿಗಳನ್ನು ಮಾರಿದರೆ ಭವಿಷ್ಯದಲ್ಲಿ ಈ ಆಸ್ತಿಗಳಿಂದ ಬರಲಿದ್ದ ಆದಾಯದ ತೊರೆಯೇ ಬತ್ತಿ ಹೋಗುತ್ತದೆ. ಅಂದರೆ, ವಿತ್ತೀಯ ಕೊರತೆಯನ್ನು ಸರಿದೂಗಿಸಲು ನೀಡುವ ಸರ್ಕಾರಿ ಬಾಂಡ್‌ಗಳ ಮೇಲೆ ತೆರಬೇಕಾದ ಬಡ್ಡಿ ಪಾವತಿಗಳಿಗೆ ಸರಿಸಮನಾಗಿ ಈ ಸ್ವತ್ತುಗಳಿಂದ ಬರಲಿದ್ದ ಆದಾಯವು ನಷ್ಟವಾಗುತ್ತದೆ.

ಸರ್ಕಾರವು ತನ್ನ ಖರ್ಚು–ವೆಚ್ಚಗಳಿಗಾಗಿ ವಿತ್ತೀಯ ಕೊರತೆಯ ಮೂಲಕ ಹಣಕಾಸು ಹೊಂದಿಸಿಕೊಳ್ಳುವ ಬಗ್ಗೆ ತಕರಾರು ಹೊಂದಿರುವ ಹಣಕಾಸು ಬಂಡವಾಳದ ವಕ್ತಾರರು ಈ ಸಮಸ್ಯೆಯ ಬಗ್ಗೆ ಸಾಮಾನ್ಯವಾಗಿ ಆಕ್ಷೇಪಣೆ ಹೇಳುತ್ತಾರಲ್ಲ ಅದು ವಿಷಯವೇ ಅಲ್ಲ. ಸಮಸ್ಯೆಯೆಂದರೆ, ವಿತ್ತೀಯ ಕೊರತೆಯು ಖಾಸಗಿ

ಪುಟ 14 ನೋಡಿ

ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ



ವ್ಯವಹಾರ ನಡೆಸುವುದು ಸರಕಾರದ ವ್ಯವಹಾರವಲ್ಲ– ಮೋದಿ

ಸನ್ಯಾಸಿನಿಯರ ಮೇಲಿನ ಹಲ್ಲೆ ಕುರಿತ ಗೋಯಲ್ ಹೇಳಿಕೆ ನಾಚಿಕೆಗೇಡು': ಪಿಣರಾಯಿ ವಿಜಯನ್



ಇಬ್ಬರು ಕ್ರೈಸ್ತ ಸನ್ಯಾಸಿನಿಯರ ಮೇಲಿನ ಧಾಳಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವರ ಹೇಳಿಕೆ ಅತ್ಯಂತ ನಾಚಿಕೆಗೇಡಿನದ್ದಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದರು.

ಕೇರಳದಲ್ಲಿ ವಿಧಾನಸಭೆ ಚುನಾವಣೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಬಿಜೆಪಿ ಪರವಾಗಿ ಪ್ರಚಾರದ ವೇಳೆ ಕೇಂದ್ರ ರೈಲ್ವೇ ಸಚಿವ ಪಿಯೂಷ್ ಗೋಯಲ್ ವಿವಾದಾತ್ಮಕ ಹೇಳಿಕೆ ನೀಡಿದ್ದರು.

ಇತ್ತೀಚೆಗೆ ಉತ್ತರ ಪ್ರದೇಶದ ಮೂಲಕ ರೈಲು ಪ್ರಯಾಣದ ವೇಳೆ ಇಬ್ಬರು ಕೇರಳ ಮೂಲದ ಕ್ರೈಸ್ತ ಸನ್ಯಾಸಿನಿಯರ ಮೇಲೆ ಎಬಿವಿಪಿ ಕಾರ್ಯಕರ್ತರಿಂದ ಹಲ್ಲೆ ನಡೆದಿತ್ತು. ರೈಲ್ವೆ ಸಚಿವರು ಆಗಿರುವ ಪಿಯೂಷ್ ಗೋಯಲ್ ಅವರು "ಯಾವುದೇ ಕ್ರೈಸ್ತ ಸನ್ಯಾಸಿನಿಯ ಮೇಲೆ ಯಾವುದೇ ದಾಳಿ ನಡೆದಿಲ್ಲ, ಕೇರಳ ಮುಖ್ಯಮಂತ್ರಿ ಸಂಪೂರ್ಣವಾಗಿ ಸುಳ್ಳು ಹೇಳುತ್ತಿದ್ದಾರೆ" ಎಂದು ಹೇಳಿದ್ದರು.

ಇದು ನಾಚಿಕೆಗೇಡಿನ ಹೇಳಿಕೆ ಎಂದ ಪಿಣರಾಯಿ ಅವರು ಕೇಂದ್ರ ಸಚಿವರ ಪ್ರಕಾರ, ಸನ್ಯಾಸಿನಿಯರ ಪ್ರಯಾಣ ದಾಖಲೆಗಳನ್ನು ಪರಿಶೀಲಿಸಿದ ನಂತರ ಅವರನ್ನು ಬಿಡಲಾಯಿತು ಎಂದಿದ್ದಾರೆ. ಆದರೆ ಅವರ ಪ್ರಯಾಣದ ಬಗ್ಗೆ ರೈಲ್ವೆ ಪೋಲೀಸಿಗೆ ದೂರು ನೀಡಿದವರು ಯಾರು ಎಂದು ಅವರು ಹೇಳಲಿಲ್ಲ. ಕೇಂದ್ರ ಗೃಹಮಂತ್ರಿಗಳೂ ಈಬಗ್ಗೆ ಪರಿಶೀಲಿಸಲಾಗುವುದು ಎಂದು ಹೇಳಿರುವುದಾಗಿ ವರದಿಯಾಗಿದೆ.

ಮುಂದುವರೆದು ಮಾತನಾಡಿದ ಪಿಣರಾಯಿ ವಿಜಯನ್ 'ಪೌರತ್ವ ಕಾಯ್ದೆ ತಿದ್ದುಪಡಿ ಯಾವುದೇ ಕಾರಣಕ್ಕೂ ಕೇರಳದಲ್ಲಿ ಜಾರಿಗೆ ತರಲು ಬಿಡುವುದಿಲ್ಲ' ಎಂದರು. ಕೇಂದ್ರ ಸರಕಾರ ಜನರನ್ನು ವಿಭಜಿಸಲು ಪ್ರಯತ್ನಿಸುತ್ತಿದೆ ಧರ್ಮದ ಆಧಾರದಲ್ಲಿ ಪೌರತ್ವ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಮತ್ತೆ ಸಿಪಿಐ(ಎಂ) ಪಕ್ಷ ನೇತೃತ್ವದ ಎಲ್‌ಡಿಎಫ್ ಗೆ ಆಡಳಿತ ಮರು ಆಯ್ಕೆಯಾಗುತ್ತದೆ, ಕಳೆದ ಐದು ವರ್ಷಗಳಲ್ಲಿ ಜಾರಿಗೊಳಿಸಿದ ಜನಪರ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳಿಂದಾಗಿ ಎಲ್.ಡಿ.ಎಫ್. ಜನರ ಮೆಚ್ಚುಗೆ ಪಡೆದಿದೆ ಎಂದು ಪಿಣರಾಯಿ ವಿಜಯನ್ ಹೇಳಿದರು.

ಯುದ್ಧ–ಪೂರ್ವ ಅವಧಿಯ ತೀಕ್ಷ್ಣ ಹೋರಾಟಗಳು 1937–39

ಪುಟ 11 ರಿಂದ

ವೇತನ ಕಡಿತವನ್ನು ಪುನಃಸ್ಥಾಪಿಸಲು ಮಾತ್ರವಲ್ಲದೆ ವೇತನ ಹೆಚ್ಚಳಕ್ಕೆ ಮತ್ತು ರಿಟ್ರೆಂಚಮೆಂಟ್ ಮತ್ತು ದಮನಕಾರಿ ಕ್ರಮಗಳನ್ನು ನಿಲ್ಲಿಸುವಂತೆ ನೇರವಾಗಿ ಒತ್ತಾಯಿಸಿದರು. ಈ ಅವಧಿಯ ಮುಷ್ಕರಗಳು ಹೆಚ್ಚಿನ ಪ್ರಕರಣಗಳಲ್ಲಿ ಯಶಸ್ವಿಯಾದವು. ಕನಿಷ್ಠ 50 ಶೇಕಡಾ ಮುಷ್ಕರಗಳು ತೃಪ್ತಿದಾಯಕ ಒಪ್ಪಂದಗಳೊಂದಿಗೆ ಕೊನೆಗೊಂಡವು ಮತ್ತು ಇದು ಹಿಂದಿನ ವರ್ಷಗಳಲ್ಲಿ ಆದ ಫಲಿತಾಂಶಗಳಿಗೆ ವ್ಯತಿರಿಕ್ತವಾಗಿತ್ತು.

ಈ ಅವಧಿಯ ಮುಷ್ಕರಗಳ ವಿಶಿಷ್ಠ ಲಕ್ಷಣವೆಂದರೆ, ಅವರ ಆರ್ಥಿಕ ಬೇಡಿಕೆಗಳನ್ನು ಒತ್ತಾಯಿಸುವುದರೊಂದಿಗೆ ಏಕಕಾಲದಲ್ಲಿ ತಮ್ಮ ಸಂಘಗಳಿಗೆ ಮಾನ್ಯತೆ ನೀಡಬೇಕೆಂದು ಕಾರ್ಮಿಕರು ಎತ್ತಿದ ಬಲವಾದ ಬೇಡಿಕೆ.

ಮಹಿಳಾ ಕಾರ್ಮಿಕರು ಕೂಡ ಈ ಹೋರಾಟಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಕೊಂಡರು. ಇದಲ್ಲದೆ, ಈ ಅವಧಿಯಲ್ಲಿ ತ್ವರಿತವಾಗಿ ಅಭಿವೃದ್ಧಿ ಹೊಂದುತ್ತಿದ್ದ ಹೋರಾಟಗಳ ಉಸ್ತುವಾರಿ ವಹಿಸಿಕೊಳ್ಳಲು ಹೆಚ್ಚಿನ ಸಂಖ್ಯೆಯ ಹೊಸ ಕಾರ್ಯಕರ್ತರು ಕಾರ್ಮಿಕರಿಂದ ಮೂಡಿಬಂದರು. ಕಾನ್ಪುರದಲ್ಲಿ ಜವಳಿ ಕಾರ್ಮಿಕರ ಮುಷ್ಕರ ಮತ್ತು ಬಂಗಾಳದಲ್ಲಿ ಸೆಣಬಿನ ಕಾರ್ಮಿಕರ ಮುಷ್ಕರ ಸಂದರ್ಭದಲ್ಲಿ ಈ ಎಲ್ಲಾ ಲಕ್ಷಣಗಳು ಸ್ಪಷ್ಟವಾಗಿ ವ್ಯಕ್ತವಾದವು.

ಈ ಪ್ರಬಲ ಶ್ರಮಜೀವಿ ಕ್ರಮಗಳು ದೇಶದ ರಾಷ್ಟ್ರೀಯ ರಾಜಕೀಯ ಹೋರಾಟದ ಪ್ರವಾಹದಲ್ಲಿ ವಿಲೀನಗೊಂಡು ಅದನ್ನು ಗಣನೀಯವಾಗಿ ಉತ್ತೇಜಿಸಿತು.

ಕಾರ್ಮಿಕ ವರ್ಗವು ಈ ಹೊತ್ತಿಗೆ ದೇಶದ ಕ್ರಾಂತಿಕಾರಿ ಹೋರಾಟದಲ್ಲಿ ರಾಜಿಯಾಗದಂತೆ ಹೋರಾಡುವ ದಳವಾಗಿ ಹೊರಹೊಮ್ಮಿತು. ಸಂಘಟಿತ ರಾಜಕೀಯ ಶಕ್ತಿಯಾಗಿ ಕಾರ್ಮಿಕ ವರ್ಗದ ಈ ಹೊರಹೊಮ್ಮುವಿಕೆಯ ಜೊತೆಗೆ, ಭಾರತದ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ತೆಗೆದುಹಾಕಲು ವಿವಿಧ ಕಾರ್ಮಿಕ ಸಂಘಗಳು ಮತ್ತು ರಾಷ್ಟ್ರೀಯ ಚಳವಳಿಯ ಕ್ರಾಂತಿಕಾರಿ ವಿಭಾಗವು ಬೇಡಿಕೆ ಎತ್ತಿತು. ಕಮ್ಯುನಿಸ್ಟ್ ಪಕ್ಷವು ಕಾನೂನುಬಾಹಿರ ಸ್ಥಿತಿಯಲ್ಲಿಯೂ ಸಹ ತನ್ನ ಮುಖಪತ್ರವಾದ ನ್ಯಾಷನಲ್–ಫ್ರಂಟ್ ಅನ್ನು ಪ್ರಕಟಿಸಲು ಪ್ರಾರಂಭಿಸಿತು ಮತ್ತು ಸಾಮ್ರಾಜ್ಯಶಾಹಿ ಮತ್ತು ಫ್ಯಾಸಿಸ್ಟ್ ಅಪಾಯದ ವಿರುದ್ಧ ಸಂಯುಕ್ತ ರಾಷ್ಟ್ರೀಯ ರಂಗವನ್ನು ನಿರ್ಮಿಸುವ ಅಗತ್ಯವನ್ನು ಧೈರ್ಯದಿಂದ ದೇಶದ ಮುಂದೆ ಮಂಡಿಸಿತು.

ಮುಂಬೈ ಕೈಗಾರಿಕಾ ವಿವಾದ ಕಾಯ್ದೆ 1939

ಕಾಂಗ್ರೆಸ್ ಮಂತ್ರಿಮಂಡಲಗಳ ಅಡಿಯಲ್ಲಿದ್ದ ಪ್ರಾಂತ್ಯಗಳಲ್ಲಿ, ಮುಂಬೈ ಕೈಗಾರಿಕರಂಗದಲ್ಲಿ ಹೆಚ್ಚು ಮುಂದುವರೆದಿತ್ತು. 1938 ರಲ್ಲಿ ಮುಂಬೈ ಸರ್ಕಾರವು ಮುಷ್ಕರಗಳನ್ನು ನಿಷೇಧಿಸುವ ಉದ್ದೇಶದಿಂದ ಪ್ರಾಂತೀಯ ವಿಧಾನಸಭೆಯಲ್ಲಿ ಕೈಗಾರಿಕಾ ವಿವಾದಗಳ ಮಸೂದೆಯನ್ನು ಮಂಡಿಸಿದಾಗ, ಸರ್ಕಾರವು ವಿಧಾನಸಭೆಯ ಒಳಗೆ ಮತ್ತು ಹೊರಗೆ ತೀವ್ರ ಪ್ರತಿಭಟನೆಗಳನ್ನು ಎದುರಿಸಿತು. 33 ದಿನಗಳ ಕಾಲ ಮಸೂದೆಯನ್ನು ಅಸೆಂಬ್ಲಿಯೊಳಗೆ ತೀವ್ರವಾಗಿ ಚರ್ಚಿಸಲಾಯಿತು. ಹೊರಗೆ ಮುಂಬೈ ಕಾರ್ಮಿಕ ವರ್ಗ ವ್ಯಾಪಕವಾದ ಮುಷ್ಕರಗಳ ಮೂಲಕ ಪ್ರತಿಭಟನೆ ದಾಖಲಿಸಿತು.

ವಾಸ್ತವವಾಗಿ ಈ ಮಸೂದೆಯನ್ನು ಜಾರಿಗೆ ತರುವ ಮೂಲಕ ಮುಂಬೈಯ ಕಾಂಗ್ರೆಸ್ ಮಂತ್ರಿಮಂಡಲವು, ಸಾಮ್ರಾಜ್ಯಶಾಹಿ ಸರ್ಕಾರದ ಅತ್ಯಂತ ಕಾರ್ಮಿಕ ವಿರೋಧಿ ರಚನೆಯಾಗಿದ್ದ 1929 ರ ಕೈಗಾರಿಕಾ ವಿವಾದ ಕಾಯ್ದೆಯ ಹೆಚ್ಚು ಪ್ರತಿಗಾಮಿ ಆವೃತ್ತಿಯನ್ನು ಅಂಗೀಕರಿಸಿತು. ಇದರ ವಿರುದ್ಧ ದೇಶಾದ್ಯಂತ ತೀವ್ರ ಪ್ರತಿಭಟನೆ ಮತ್ತು ಕಟು ಖಂಡನೆ ವ್ಯಕ್ತವಾಯಿತು. ಕಾರ್ಮಿಕರ ಮುಷ್ಕರ ಹಕ್ಕನ್ನು ಕಸಿದುಕೊಳ್ಳುವಲ್ಲಿ ಮತ್ತು ಅದನ್ನು 1929 ರಲ್ಲಿ ನೀಡಲಾಗಿದ್ದಕ್ಕಿಂತ ಕಠಿಣವಾಗಿ ಶಿಕ್ಷೆ ವಿಧಿಸುವಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಈ ಕ್ರಮವು ಮಂತ್ರಿಮಂಡಲದ ನೇರ ಕಾರ್ಮಿಕ ವಿರೋಧಿ ಮನೋಭಾವವನ್ನು ಬಹಿರಂಗ ಪಡಿಸಿತು.

ಈ ಕರಾಳ ಮಸೂದೆಯ ವಿರುದ್ಧ 1939 ರ ನವೆಂಬರ್‌ನಲ್ಲಿ ಮುಂಬೈ ಪ್ರಾಂತೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಆಯೋಜಿಸಿದ್ದ 90,000 ಕಾರ್ಮಿಕರ ಒಂದು ದಿನದ ಪ್ರತಿಭಟನಾ ಮುಷ್ಕರವು ಭಾರತದ ಕಾರ್ಮಿಕ–ವರ್ಗದ ಚಳವಳಿಯಲ್ಲಿ ಅದ್ಭುತ ಅಧ್ಯಾಯವಾಗಿದೆ. ಇಂಡಿಯನ್ ಲೇಬರ್ ಪಾರ್ಟಿಯ ನೇತೃತ್ವದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಕೂಡ ಈ ಮುಷ್ಕರವನ್ನು ಬೆಂಬಲಿಸಿದರು..

ಕಾಂಗ್ರೆಸ್ ಮಂತ್ರಿಮಂಡಲವು ಅದರ ಹಾನಿಕಾರಕ ನಡೆಯನ್ನು ಹಿಂತೆಗೆದುಕೊಳ್ಳುವ ಬದಲು, ಕಾರ್ಮಿಕರ ವಿರುದ್ಧ ಪೊಲೀಸರನ್ನು ನಿಯೋಜಿಸಿತು, ನಂತರ ನಿರ್ದಯವಾಗಿ ಗುಂಡು ಹಾರಿಸಲಾಯಿತು ಮತ್ತು ಲಾಠಿ ಪ್ರಹಾರ ಮಾಡಲಾಯಿತು. ಪೊಲೀಸ್ ಗುಂಡಿನ ದಾಳಿಯು ಇಬ್ಬರು ಕಾರ್ಮಿಕರ ಸಾವಿಗೆ ಕಾರಣವಾಯಿತು ಮತ್ತು ಈ ಕ್ರೂರ ದಬ್ಬಾಳಿಕೆಗಳ ವಿರುದ್ಧ ಕಾರ್ಮಿಕರು ಕಲ್ಕತ್ತಾ, ಅಹಮದಾಬಾದ್, ಕಾನ್ಪುರ್, ಮದ್ರಾಸ್ ಮತ್ತು ದೇಶದ ಅನೇಕ ಸ್ಥಳಗಳಲ್ಲಿ, ಪ್ರಬಲ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಕೈಗಾರಿಕಾ ವಿವಾದ ಕಾಯ್ದೆ 1939 ರ ಮೂಲಕ ಕಾಂಗ್ರೆಸ್ಸಿನ ಮತ್ತೊಂದು ಉದ್ದೇಶವು ಸ್ಪಷ್ಟವಾಗಿ ಹೊರಬಂದಿತು. ಅಹಮದಾಬಾದ್ ಮಜೂರ್ ಮಹಾಜನ್ ಮತ್ತು ಅದರಿಂದ ಮಾನ್ಯಮಾಡಲ್ಪಟ್ಟ ಕಡ್ಡಾಯ ಮಧ್ಯಸ್ಥಿಕೆ ವ್ಯವಸ್ಥೆ, ಕಾಂಗ್ರೆಸ್ಸಿನ ನಾಯಕರು ಅನುಸರಿಸುತ್ತಿದ್ದ ವರ್ಗ–ಸಹಯೋಗ ಆದರ್ಶವನ್ನು ಎತ್ತಿ ತೋರಿಸಿತು. 1939 ರ ಕಾಯಿದೆಯ ಮೂಲಕ ಕಾಂಗ್ರೆಸ್ಸಿನ ಮಂತ್ರಿಮಂಡಲವು ಅದೇ ವರ್ಗ–ಸಹಯೋಗಿ ಆದರ್ಶವನ್ನು ದೇಶದ ಕಾರ್ಮಿಕ ವರ್ಗದ ಮೇಲೆ ಹೇರಲು ಪ್ರಯತ್ನಿಸಿತು.. ಅದೇ ಸಮಯದಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್ ಕೂಡ, ಎಐಟಿಯುಸಿ ಅವರ ಪ್ರಕಾರ ವರ್ಗ–ಹೋರಾಟದ ತತ್ವದ ಮೇಲೆ ಕಾರ್ಯನಿರ್ವಹಿಸುತ್ತಿರುವುದರಿಂದ ಮಜೂರ್ ಮಹಾಜನ್ ಮಾದರಿಯಲ್ಲಿ ಹೊಸ ಕಾರ್ಮಿಕ ಸಂಘಟನೆಯನ್ನು ರಚಿಸುವ ಉದ್ದೇಶವನ್ನು ಘೋಷಿಸಿದರು. ಈ ಘೋಷಣೆಗಳ ಕೇವಲ 18 ವರ್ಷಗಳ ನಂತರ, 1947 ರಲ್ಲಿ, ಅದೇ ವಲ್ಲಭಭಾಯಿ ಪಟೇಲ್ ಅವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ನಡೆದ ಸಮಾವೇಶದಲ್ಲಿ ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಎಐಟಿಯುಸಿಗೆ ಪ್ರತಿಸ್ಪರ್ಧಿಯಾಗಿ ರೂಪುಗೊಂಡಿತು..

ಏಕತೆಗಾಗಿ ನವೀಕರಿಸಿದ ಪ್ರಯತ್ನಗಳು

ಹದಿನಾರನೇ ಅಧಿವೇಶನ ದೆಹಲಿಯಲ್ಲಿ 1 –2 ಜನವರಿ 1938 ರಂದು ಶಿಬನಾಥ್ ಬ್ಯಾನರ್ಜಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನವು ಟ್ರೇಡ್ ಯೂನಿಯನ್ ಐಕ್ಯತೆಯನ್ನು ರೂಪಿಸುವತ್ತ ದೊಡ್ಡ ಪ್ರಗತಿಯನ್ನು ಸಾಧಿಸಿದರಿಂದ ಮಹತ್ವದ್ದಾಗಿತ್ತು. ಈ ಅಧಿವೇಶನದಲ್ಲಿ ಎಐಟಿಯುಸಿ ಈ ಎರಡು ಸಂಸ್ಥೆಗಳ ನಡುವೆ ರಚನಾತ್ಮಕ ಐಕ್ಯತೆಯನ್ನು ತರುವ ಉದ್ದೇಶದಿಂದ ರಾಷ್ಟ್ರೀಯ ಟ್ರೇಡ್ ಯೂನಿಯನ್ ಫೆಡರೇಶನ್‌ನೊಂದಿಗೆ ಮಾತುಕತೆ ನಡೆಸುವ ಕಾರ್ಯವನ್ನು ನಿರ್ವಹಿಸಲು ಉಪಸಮಿತಿಯನ್ನು ರಚಿಸಿತು.

ಎನ್‌ಟಿಯುಎಫ್ ಮತ್ತು ಎಐಟಿಯುಸಿ ಈ ಎರಡು ಸಂಘಟನೆಗಳ ಪೂರ್ಣ ವಿಲೀನವು 1940 ರಲ್ಲಿ ವಾಸ್ತವವಾಯಿತು. ಈ ಐಕ್ಯತೆಯು ಎಐಟಿಯುಸಿಯಿಗೆ ಭಾರತದ ಕಾರ್ಮಿಕ ವರ್ಗದ ಕೇಂದ್ರ ಮತ್ತು ಏಕೀಕೃತ ಸಂಘಟನೆಯಾಗಿ ತದನಂತರದ ಸಮರಶೀಲ ಆರ್ಥಿಕ ಮತ್ತು ರಾಜಕೀಯ ಕದನಗಳಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲು ಅನುವು ಮಾಡಿಕೊಟ್ಟಿತು. ○

ಸಾರ್ವಜನಿಕ ಉದ್ದಿಮೆಗಳನ್ನು ಮಾರುವುದೇಕೆ?

ಪುಟ 13 ರಿಂದ

ಸಂಪತ್ತನ್ನು ಸಾಕಷ್ಟು ಪ್ರಮಾಣದಲ್ಲಿ ಬಿಟ್ಟಿಯಾಗಿ ಹೆಚ್ಚಿಸುತ್ತದೆ. ಮೇಲಿನ ಉದಾಹರಣೆಯಲ್ಲಿ ಸರ್ಕಾರವು ರೂ. 100 ಖರ್ಚು ಮಾಡುತ್ತದೆ ಮತ್ತು ಖಾಸಗಿ ಕೈಗಳಲ್ಲಿರುವ ಹೆಚ್ಚುವರಿ ಉಳಿತಾಯವನ್ನು ಬಾಂಡ್ ಮಾರಾಟದ ಮೂಲಕ ಕೊಳ್ಳುತ್ತದೆ. ಅಸಲಿಗೆ, ಸರ್ಕಾರದ ಹೆಚ್ಚುವರಿ ಖರ್ಚುಗಳಿಂದಾಗಿಯೇ ಉಂಟಾದ ಈ ಉಳಿತಾಯವು ಖಾಸಗಿ ಕೈಗಳನ್ನು ಸೇರಿದೆ. ಈ ಹೆಚ್ಚುವರಿ ಉಳಿತಾಯಗಳು ಖಾಸಗಿ ವ್ಯಕ್ತಿಗಳು ಸಾಧಿಸಿದ ಯಾವುದೋ ಮಹಾತ್ಕಾರ್ಯದ ಕಾರಣದಿಂದ ಸಂಗ್ರಹಗೊಂಡಿದ್ದಲ್ಲ. ಹಾಗಾಗಿ, ಈ ಉಳಿತಾಯಗಳು ಸುಮ್ಮನೆ ಅವರ ತೊಡೆಯ ಮೇಲೆ ಉದುರಿವೆ ಮತ್ತು ಈ ಉಳಿತಾಯಗಳು ಖಾಸಗಿ ಸಂಪತ್ತಿಗೆ ಅಧಿಕವಾಗಿ ಸೇರ್ಪಡೆಗೊಂಡಿವೆ. ಅಂದರೆ, ಶ್ರೀಮಂತರ ಸಂಪತ್ತು ವೃದ್ಧಿಸಿತು. ಏಕೆಂದರೆ, ದುಡಿಯುವ ಜನರು ತಾವು ಗಳಿಸುವ ಹಣವನ್ನು ಪೂರ್ಣವಾಗಿ ಖರ್ಚು ಮಾಡುತ್ತಾರೆ ಅವರು ಉಳಿತಾಯ ಮಾಡಲು ತಿಣುಕಾಡಬೇಕಾಗುತ್ತದೆ. ಒಂದು ವೇಳೆ ಈ 100 ರೂ.ಗಳ ಮೇಲೆ (ಅಂದರೆ ಶ್ರೀಮಂತರ ವೃದ್ಧಿಸಿದ ಸಂಪತ್ತಿನ ಮೇಲೆ) ತೆರಿಗೆ ವಿಧಿಸಿದರೆ, ಶ್ರೀಮಂತರ ಸಂಪತ್ತು ಆರಂಭದಲ್ಲಿ ಎಷ್ಟಿತ್ತೋ ಅಷ್ಟರಲ್ಲೇ ಉಳಿಯುತ್ತದೆ, ಯಾವ ರೀತಿಯಲ್ಲೂ ಇಳಿಕೆಯಾಗುವುದಿಲ್ಲ.

ವಿತ್ತೀಯ ಕೊರತೆಯ ಬದಲಿಗೆ ಸಾರ್ವಜನಿಕ ವಲಯದ ಆಸ್ತಿಗಳು ಖಾಸಗಿ ಕೈಗಳಿಗೆ ಸೇರಿದಾಗಲೂ ಇದೇ ಪರಿಣಾಮ ಉಂಟಾಗುತ್ತದೆ. ಅಂದರೆ, ಹೆಚ್ಚುವರಿ ಸಂಪತ್ತನ್ನು ಶ್ರೀಮಂತರಿಗೆ ಬಿಟ್ಟಿಯಾಗಿ ಹಸ್ತಾಂತರಿಸಿದಂತಾಗುತ್ತದೆ. ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗುತ್ತಾರೆ. ಮತ್ತು ಸಂಪತ್ತಿನ ಅಸಮಾನತೆಯನ್ನು ಉಲ್ಬಣಗೊಳಿಸುತ್ತಾರೆ. ಒಂದು ವೇಳೆ ಈ 100 ರೂ.ಗಳ ಮೇಲೆ (ಅಂದರೆ ಶ್ರೀಮಂತರ ವೃದ್ಧಿಸಿದ ಸಂಪತ್ತಿನ ಮೇಲೆ) ತೆರಿಗೆ ವಿಧಿಸಿದ್ದರೆ ಸಂಪತ್ತಿನ ಅಸಮಾನತೆಗಳು ಉಲ್ಬಣಗೊಳ್ಳುವುದನ್ನು ತಪ್ಪಿಸಬಹುದಿತ್ತು. ವಾಸ್ತವವಾಗಿ ಹೇಳುವುದಾದರೆ, ಬಾಂಡ್‌ಗಳನ್ನು ಮಾರಾಟ ಮಾಡುವುದಕ್ಕಿಂತ ಸಾರ್ವಜನಿಕ ವಲಯದ ಸ್ವತ್ತುಗಳನ್ನು ಮಾರುವ ಕ್ರಮವು ಅಸಮಾನತೆಯನ್ನು ಹೆಚ್ಚು ಉಲ್ಬಣಗೊಳಿಸುತ್ತದೆ. ಏಕೆಂದರೆ, ಸರ್ಕಾರದ ಸ್ವತ್ತುಗಳು ಬೇಕಾಬಿಟ್ಟಿ ಅಗ್ಗ ಬೆಲೆಗಳಲ್ಲಿ (ಬಿಸಾಕಿದ ವಸ್ತುಗಳ ಬೆಲೆಗಳಲ್ಲಿ), ಮಾರಾಟವಾಗುತ್ತವೆ.

ಸಂಪತ್ತಿನ ತೀವ್ರ ಸ್ವರೂಪದ ಅಸಮಾನತೆಗಳಿಂದ ಈಗಾಗಲೇ ನಲುಗಿರುವ ಮೂರನೇ ಜಗತ್ತಿನ ದೇಶದ ಸರ್ಕಾರವೊಂದು ತನ್ನ ಖರ್ಚು ವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳುವ ಸಲುವಾಗಿ ಸಂಪತ್ತಿನ ಮೇಲೆ ತೆರಿಗೆಯನ್ನು ವಿಧಿಸುವ ಬದಲು ಸಾರ್ವಜನಿಕ ಆಸ್ತಿಗಳನ್ನು ಮಾರುವ ಮೂಲಕ ಅಸಮಾನತೆಗಳನ್ನು ಉಲ್ಬಣಗೊಳಿಸುವುದು ಒಂದು ನಾಚಿಕೆಗೇಡಿನ ಸಂಗತಿ. ಒಂದು ವೇಳೆ ಸಂಪತ್ತಿನ ತೆರಿಗೆಯನ್ನು ಹೇರುವ ಮನಸ್ಸಿಲ್ಲದಿದ್ದರೆ, ಸರ್ಕಾರವು ಕನಿಷ್ಠ ಪಕ್ಷ ಲಾಭದ ಮೇಲಿನ ತೆರಿಗೆಯ ದರವನ್ನಾದರೂ ಹೆಚ್ಚಿಸಬಹುದಿತ್ತು. ಈ ಕ್ರಮವೂ ಸಹ ಸಂಪತ್ತಿನ ಅಸಮಾನತೆಯನ್ನು ತಡೆಹಿಡಿಯುತ್ತದೆ.

ಲಾಭದ ಮೇಲಿನ ತೆರಿಗೆಯ ದರವನ್ನು ಹೆಚ್ಚಿಸಲು ಸರ್ಕಾರವು ಅಸಮರ್ಥವಾಗಿದ್ದಲ್ಲಿ, ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚನೆ ನಡೆಸಿ, ಬಂಡವಾಳಗಾರರು ಮತ್ತು ಅವರ ಅವಲಂಬಿಗಳು ಬಳಸುವ ಸುಖಭೋಗ–ವಿಲಾಸಿ ಸರಕುಗಳ ಮೇಲಿನ ಜಿಎಸ್‌ಟಿ ದರವನ್ನಾದರೂ ಏರಿಸಬಹುದಿತ್ತು. ಈ ಕ್ರಮದಿಂದಾಗಿ, ನಿಜವಾದ ಅರ್ಥದಲ್ಲಿ (ಅಂದರೆ, ಬೆಲೆ ಸೂಚ್ಯಂಕದ ಹೋಲಿಕೆಯಲ್ಲಿ), ಲಾಭ ಸಂಪಾದನೆಯಲ್ಲಿ ಬದಲಾವಣೆ ಉಂಟಾಗುತ್ತಿರಲಿಲ್ಲ. ಮತ್ತು, ಖರ್ಚು ವೆಚ್ಚಗಳಿಗೆ ಹಣವನ್ನೂ ಹೊಂದಿಸಿಕೊಳ್ಳಬಹುದಿತ್ತು. ಅಷ್ಟೇ ಅಲ್ಲ, ಬಂಡವಾಳಿಗರಿಗೆ ವಿತ್ತೀಯ ಕೊರತೆಯ ಅಥವಾ ಸಾರ್ವಜನಿಕ ಆಸ್ತಿಗಳ ಮಾರಾಟದ ಮೂಲಕ ಲಭ್ಯವಾಗುತ್ತಿದ್ದ ಅಧಿಕ ಸಂಪತ್ತು ದೊರೆಯುತ್ತಿರಲಿಲ್ಲ. ಆದ್ದರಿಂದ, ಸಾರ್ವಜನಿಕ ವಲಯದ ಆಸ್ತಿಗಳನ್ನು ಖಾಸಗಿಯವರಿಗೆ ಮಾರುವ ಮೋದಿ ಸರ್ಕಾರದ ಉದ್ದೇಶವು, ದೇಶದ ದೃಷ್ಟಿಯಿಂದ ಒಂದು ಬೃಹತ್ ಪ್ರಮಾದವಷ್ಟೇ ಅಲ್ಲ, ಸರ್ಕಾರವು ಹೇಳಿಕೊಳ್ಳುವ ದೃಷ್ಟಿಯಿಂದ ನೋಡಿದರೂ ಸಹ ಅದರಲ್ಲಿ ಆರ್ಥಿಕ ವಿವೇಚನೆಯೇ ಕಾಣದು. ○

ವೆಬ್ ಮಾಧ್ಯಮಗಳ ಸೆನ್ಸಾರಿನತ್ತ ದೊಡ್ಡ ಹೆಜ್ಜೆ...........

ಪುಟ 10 ರಿಂದ

ಕೊಡದೆ, ಕೆಲವು ಟಿವಿ ವಾಹಿನಿಗಳು ನಿಜವಾಗಿಯೂ ಎಲ್ಲರ ಒಪ್ಪಿತ ಮಾಧ್ಯಮ ನೀತಿಸಂಹಿತೆಗಳನ್ನು ಉಲ್ಲಂಘಿಸುವಾಗ ಯಾವುದೇ ರೀತಿಯ ಮಧ್ಯಪ್ರವೇಶ ಮಾಡದೆ ಸರಕಾರವು ತೆಪ್ಪಗಿರುವುದನ್ನು ನೋಡಿದ್ದೇವೆ. ನಿರ್ದಿಷ್ಟ ಸಮುದಾಯಗಳವರನ್ನು "ಗುಂಡಿಟ್ಟು ಕೊಲ್ಲಿ" ಎಂದು ಎಲ್ಲ ವಾಹಿನಿಗಳಲ್ಲಿ ಪ್ರಸಾರವಾದ ಉನ್ನತ ನಾಯಕರ ಭಾಷಣಗಳನ್ನು ಹರಡಲು; ಒಂದು ಧಾರ್ಮಿಕ ಪಂಥ ಕೊವಿದ್ ನ್ನು ಬೇಕೆಂತಲೇ ಹರಡುವ ಪಿತೂರಿ ನಡೆಸಿದೆ, ಒಂದು ಸಮುದಾಯ ಆಡಳಿತವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹುನ್ನಾರ ನಡೆಸಿದೆ ಎಂಬಂತಹ ಭಾರೀ ಫೇಕ್ ಸುದ್ದಿಗಳನ್ನು ಹರಡಲು ಯಾವುದೂ ಅಡ್ಡಿಯಾಗಲಿಲ್ಲ. ಇಂತಹ ವಿಶೇಷ ಸಂದರ್ಭಗಳಲ್ಲಿ ಕೇಬಲ್ ಟಿವಿ ಜಾಲ ನಿಯಮಗಳು 1994 ಅಡಿಯಲ್ಲಿ ಸರಕಾರಕ್ಕೆ ಕ್ರಮಕೈಗೊಳ್ಳಲಿಕ್ಕೆ ಅವಕಾಶವಿದೆ. ಈ ಸಂದರ್ಭದಲ್ಲಿ, ಅವು ಆಳುವ ಪಕ್ಷದ ಹಿತಾಸಕ್ತಿಗೆ ಪೂರಕವಾಗಿದ್ದವು ಎಂಬ ಕಾರಣಕ್ಕೆ ಯಾವುದೇ ಕ್ರಮ ಕೈಗೊಳ್ಳದ ಸರಕಾರವು, ವೆಬ್ ಮಾಧ್ಯಮಗಳಲ್ಲಿ ಫೇಕ್ ಸುದ್ದಿ, ಟ್ರಾಲ್ ಪಡೆಗಳ ಹಾವಳಿ ತಡೆಲು ನೀತಿಸಂಹಿತೆಯನ್ನು ಜಾರಿ ಮಾಡಲು ಈ ಹೊಸ ಕಾನೂನು ತರಲು ಹೊರಟಿದೆ ಎಂಬುದು ನಂಬಲರ್ಹವೇ? ಪತ್ರಿಕೆ, ಟಿವಿಗಳ ಒಡೆಯರನ್ನು ಖರೀದಿ ಮಾಡಲು ಸಾಧ್ಯವಿರುವುದರಿಂದ ಮತ್ತು ಈಗಾಗಲೇ ಇದನ್ನು ಮಾಡಿರುವುದರಿಂದ ಅವನ್ನು ನಿಬಂಧಿಸುವ ಅಗತ್ಯ ಸರಕಾರಕ್ಕೆ ಕಾಣುತ್ತಿಲ್ಲ. ಆದರೆ ವೆಬ್ ಮಾಧ್ಯಮ ವೇದಿಕೆಗಳು ಹಲವರ ಒಡೆತನಗಳಲ್ಲಿ ಇರುವುದರಿಂದ ಮತ್ತು ಅವುಗಳನ್ನು ಖರೀದಿಸುವುದು ಕಷ್ಟಕರವಾದ್ದರಿಂದ ಅವುಗಳನ್ನು 'ನಿಬಂಧಿಸುವುದು' ಸರಕಾರಕ್ಕೆ ಅಗತ್ಯವಾಗಿ ಕಂಡು ಬಂದಿದೆ.

ಅದೇ ರೀತಿ "ಮಧ್ಯವರ್ತಿ ವೇದಿಕೆ" ಎಂದು ಹೇಳಿಕೊಳ್ಳುವ ಫೇಸ್ ಬುಕ್, ವಾಟ್ಸಪ್ ಮುಂತಾದ ದೈತ್ಯ ಕಂಪನಿಗಳು ತಮ್ಮ ಉದ್ಯಮದಲ್ಲಿ ಏಕಸ್ವಾಮ್ಯ ನಿರ್ಬಂಧಕ ಕಾನೂನುಗಳನ್ನು ಉಲ್ಲಂಘಿಸುವುದರ ವಿರುದ್ಧ ಕ್ರಮ ಕೈಗೊಳ್ಳುವ ಪೋಸು ಕೊಟ್ಟರೂ ಅದೂ ಈ ಕಾನೂನಿನ ಉದ್ದೇಶವಲ್ಲ. ಸಾಂಪ್ರದಾಯಿಕ



ಮಾಧ್ಯಮಗಳ ಅಭಿವ್ಯಕ್ತಿಗಳನ್ನು ಯಾವುದೇ ಖರ್ಚಿಲ್ಲದೆ ಬಳಸುವ; ವೆಬ್ ಜಾಹೀರಾತಿನಲ್ಲಿ ಏಕಸ್ವಾಮ್ಯ ಸಾಧಿಸುವ; ತನ್ನ ಬಳಕೆದಾರರ ಖಾಸಗಿ ಮಾಹಿತಿಗಳನ್ನು ಕಾನೂನು ಬಾಹಿರವಾಗಿ ಜಾಹೀರಾತುದಾರರಿಗೆ ಮಾರಾಟ ಮಾಡುವ ಅವರ ಖಾಸಗಿತನಕ್ಕೆ ಧಕ್ಕೆ ತರುವ; ಹಣಪಾವತಿ ಮಾಡಲು ಸಿದ್ಧರಿರುವ ಬಳಕೆದಾರ ಕಂಪನಿ, ರಾಜಕೀಯ ಪಕ್ಷ, ಸಂಘಟನೆಗಳಿಗೆ ಅನುಕೂಲಕರವಾಗಿ ಇತರ ಬಳಕೆದಾರರ ಸಂವಹನವನ್ನು ತಿರುಚುವ ನಿಯಂತ್ರಿಸುವ; – ಇಂತಹ "ಮಧ್ಯವರ್ತಿ ವೇದಿಕೆ"ಗಳ ಅಕ್ರಮಗಳ ಮೇಲೆ ನಿರ್ಬಂಧ ಹೇರುವ ಉದ್ದೇಶವೂ ಅಂಶಗಳೂ ಈ ಕಾನೂನಿನಲ್ಲಿ ಇಲ್ಲ. ಆಸ್ಟ್ರೇಲಿಯಾ, ಯುರೋಪಿನ ಕೆಲವು ಸರಕಾರಗಳು ಇಂತಹ ಪ್ರಯತ್ನ ನಡೆಸಿವೆ. ಫೇಸ್ ಬುಕ್, ವಾಟ್ಸಪ್ ಮುಂತಾದ ಇಂತಹ ವೇದಿಕೆಗಳನ್ನೂ, ಅಳುವ ಪಕ್ಷ ಮತ್ತು ಪರಿವಾರಗಳ, ಅವುಗಳ ಸದಸ್ಯರ ಫೇಕ್ ಸುದ್ದಿ, ಅಪಪ್ರಚಾರಕ್ಕೆ ಅಡ್ಡಿಯಾದಾಗ ಮಾತ್ರ ಬೆದರಿಸಲು, ಈ ಕಾನೂನುಗಳನ್ನು ಬಳಸಲು ಉದ್ದೇಶಿಸಿರುವಂತಿದೆ.

ಈಗಾಗಲೇ ಈ ಸರಕಾರ ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನೂ ಎಲ್ಲಾ ಕಾನೂನುಗಳನ್ನು ಸರಕಾರದ ವಿರುದ್ಧ ದನಿಯೆತ್ತುವ ಎಲ್ಲರ ವಿರುದ್ಧ ಬಳಸುತ್ತದೆ ಎಂಬುದು ಜಗಜ್ಜಾಹೀರಾಗಿದೆ. ಹೀಗಿರುವಾಗ ಈ ಹೊಸ ಐಟಿ ನಿಯಮಗಳನ್ನೂ ತನ್ನ ವಿರುದ್ಧ ದನಿ ಎತ್ತುತ್ತಿರುವ ವೆಬ್ ಪತ್ರಿಕೆಗಳು, ವೆಬ್ ವೇದಿಕೆಗಳು, ವೆಬ್ ಮಾಧ್ಯಮಗಳ ವಿರುದ್ಧ ಬಳಸಲೋಸುಗವೇ ತಂದಿದೆ ಎಂದು ಅವುಗಳಿಗೆ ಅನುಮಾನ ಬಂದರೆ ಆಶ್ಚರ್ಯವೇನಿಲ್ಲ.

ಕಾನೂನು ತೊಡಕುಗಳು, ಅಸಾಂವಿಧಾನಿಕ ಅಂಶಗಳು

ಐಟಿ ಕಾನೂನಿನ ನಿಯಮಗಳಲ್ಲಿ ತಂದಿರುವ ಬದಲಾವಣೆಗಳು ಮೂಲ ಕಾನೂನನ್ನು ಉಲ್ಲಂಘಿಸುವಂತಿವೆ. ಡಿಜಿಟಲ್ ಪತ್ರಿಕೆಗಳು ಮತ್ತು ಇತರ ವೆಬ್ ಮಾಧ್ಯಮಗಳನ್ನು ಈ ಕಾನೂನಿನಲ್ಲಿ ಸೇರಿಸಲಾಗಿದೆ. ಆದರೆ ಇವುಗಳ ಮೇಲೆ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿ ಮಾಹಿತಿ–ಪ್ರಸಾರ ಇಲಾಖೆಯ ಮೇಲಿದೆ. ಈ ಕಾನೂನಿಗೆ ಸಂಬಂಧಿಸಿದ ಇಲಾಖೆಯಾದ ಇಲೆಕ್ಟ್ರಾನಿಕ್ಸ್ ಮತ್ತು ಐಟಿ ಇಲಾಖೆಯ ಮೇಲಲ್ಲ. ಈ 2021ರ ಕಾನೂನು ಮೂಲ ಐಟಿ ಕಾನೂನು 2000 ರ ನಿಯಮಗಳನ್ನು ರೂಪಿಸುತ್ತದೆ. ಮೂಲ ಕಾನೂನು ಯಾವುದೇ ಅಭಿವ್ಯಕ್ತಿಯ ನಿಬಂಧನೆಯನ್ನು ಒಳಗೊಂಡಿಲ್ಲವಾದ್ದರಿಂದ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವಂತಿಲ್ಲ. ಐಟಿ ಕಾನೂನಿನಲ್ಲಿ ಅಭಿವ್ಯಕ್ತಿಯ ನಿಬಂಧನೆಗೆ ಸಂಬಂಧಿಸಿದ ಕುಖ್ಯಾತ ಕಲಮು 66ಎ ಯನ್ನು ಅಸಾಂವಿಧಾನಿಕವೆಂದು ಸುಪ್ರೀಂ ಕೋರ್ಟು ರದ್ದು ಮಾಡಿತ್ತು. ವೆಬ್ ಮಾಧ್ಯಮದ ಅಭಿವ್ಯಕ್ತಿಯ ನಿಬಂಧನೆ ಮಾಡಬೇಕಾದರೆ ಪ್ರತ್ಯೇಕ ಕಾನೂನು ಮಾಡುವ ಅಗತ್ಯವಿದೆ. ಅದಕ್ಕೆ ಅಗತ್ಯವಾದ ಸಾರ್ವಜನಿಕ ಪರಾಮರ್ಶೆ ಇತ್ಯಾದಿ ಮಾಡಬೇಕಾಗುತ್ತದೆ. ಆದ್ದರಿಂದ ಅದರಿಂದ ತಪ್ಪಿಸಿಕೊಳ್ಳಲು ಐಟಿ ಕಾನೂನಿನ ನಿಯಮಗಳಲ್ಲಿ ಅದನ್ನು ಸೇರಿಸಲಾಗಿದೆ. ಇದು ವೆಬ್ ಮಾಧ್ಯಮಗಳ ನಿಬಂಧನೆಗಳನ್ನು ಹಿಂಬಾಗಿಲಿಂದ ತರುವ ಪ್ರಯತ್ನವಲ್ಲದೆ ಮತ್ತೇನಲ್ಲ.

ಈ ಕಾನೂನಿನಲ್ಲಿರುವ ನಿಯಮಗಳಲ್ಲಿ ಇನ್ನಷ್ಟು ಹೆಚ್ಚಿನ ಕಾನೂನು ತೊಡಕುಗಳಿವೆ. ಇಲ್ಲಿನ ಹಲವು ನಿಯಮಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಖಾಸಗಿತನದ ಹಕ್ಕುಗಳನ್ನು ಉಲ್ಲಂಘಿಸುತ್ತವೆ. ಎಲ್ಲ ವೆಬ್ ಮಾಧ್ಯಮಗಳು ಒಂದೇ ಬಗೆಯವಲ್ಲ. ಆದ್ದರಿಂದ ಅವುಗಳ ನಿಬಂಧನೆ ಸಹ ಭಿನ್ನವಾಗಿರಬೇಕಾಗುತ್ತದೆ. ಇಂತಹ ವಿಷಯಗಳತ್ತವೂ ಈ ಕಾನೂನು ರಚಿಸುವಾಗ ಗಮನ ಹರಿಸಿದಂತಿಲ್ಲ. ಉದಾಹರಣೆಗೆ ಈ ಕಾನೂನು, ಸಂದೇಶ ವಾಹಕ ವೇದಿಕೆಗಳನ್ನು (ಉದಾ: ವಾಟ್ಸಪ್) ಆಕ್ಷೇಪಾರ್ಹ ಸಂದೇಶ ಕಳಿಸಿದ ಮೂಲವ್ಯಕ್ತಿಯ ಸಂದೇಶ ಮತ್ತು ವಿವರಗಳನ್ನು ಕೊಡಲು ಬಾಧ್ಯ ಮಾಡುತ್ತದೆ. ಆದರೆ ಸಂದೇಶಗಳು ಈ ತುದಿಯಿಂದ ಆ ತುದಿಯವರೆಗೆ ಕೋಡ್ ಬಳಸಿ ರಹಸ್ಯವಿರುವಾಗ ಯಾವ ಆದಾರದ ಮೇಲೆ ಅದನ್ನು ಜಾರಿ ಮಾಡಬೇಕು? ಹಾಗೆ ಜಾರಿ ಮಾಡಿದರೆ ಅದು ಐಟಿ ಕಾನೂನಿನ ಕಲಮು 79ಎ ಉಲ್ಲಂಘನೆಯಾಗುವುದಿಲ್ಲವೇ? ಇಂತಹ ಹಲವು ಕಾನೂನು ತೊಡಕುಗಳು ಇದ್ದು ಈ ಕಾನೂನು ಅಸಾಂವಿಧಾನಿಕವಾಗಿರುವುದಲ್ಲದೆ, ಕೋರ್ಟಿನ ಪರಾಮರ್ಶೆ ಮುಂದೆ ನಿಲ್ಲುವುದು ಕಷ್ಟವಿದೆ.

ಇದು ಸರಕಾರಕ್ಕೂ ಗೊತ್ತಿದೆ. ಈ ಕಾನೂನಿಗೆ ಸವಾಲು ಹಾಕಿದವರ ಮೇಲೆ ಇತರ ಕಾನೂನು ಮತ್ತು ಸಂಸ್ಥೆಗಳನ್ನು ಬಳಸಿ ಕ್ರಮಕೈಗೊಳ್ಳುವ ಭಯವಿದ್ದೇ ಇರುತ್ತದೆ. ಯಾರಾದರೂ ಅದಕ್ಕೆ ಕಾನೂನಿನ, ಸಾಂವಿಧಾನಿಕ ಸವಾಲು ಹಾಕಿದರೂ ಕೋರ್ಟುಗಳಲ್ಲಿ ವಿಳಂಬದಿಂದಾಗಿ ತಾನು ಸುರಕ್ಷಿತ ಎಂದು ಸರಕಾರ ಭಾವಿಸಿರಬೇಕು. ಇದೇ ಐಟಿ ಕಾನೂನು ಬಳಸಿ ಹಲವು ಪ್ರದೇಶಗಳಲ್ಲಿ ದೀರ್ಘ ಕಾಲ ನೆಟ್ ಕಡಿತ ಮಾಡಿದ್ದು ಕಾನೂನು ಬಾಹಿರವೇ, ಇದು ಅಸಾಂವಿಧಾನಿಕ ಕ್ರಮವೇ ಎಂಬ ಪ್ರಶ್ನೆ ಕೋರ್ಟಿನ ಮುಂದೆ ಹಲವು ತಿಂಗಳುಗಳಿಂದ ಬಿದ್ದಿದೆ. ಈ ನಡುವೆ ಹಿಂಬಾಗಿಲಿಂದ ಸರಕಾರಕ್ಕೆ ಕಿರಿ ಕಿರಿಯುಂಟು ಮಾಡುವ ವೆಬ್ ಮಾಧ್ಯಮಗಳ ಮೇಲೆ ಕಟುಕ್ರಮ ಕೈಗೊಳ್ಳಬಹುದು ಎಂದು ಸರಕಾರ ಭಾವಿಸಿದಂತಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಐಟಿ ನಿಯಮಗಳು 2021, ಸರಕಾರವನ್ನು ಟೀಕಿಸುವ ವೆಬ್ ಮಾಧ್ಯಮಗಳ ಮೇಲೆ ಕಟುಕ್ರಮಗಳನ್ನು ಯಾವುದೇ ಲಂಗುಲಾಗಾಮಿಲ್ಲದೆ ತೆಗೆದುಕೊಳ್ಳುವ ಅಧಿಕಾರವನ್ನು ಸರಕಾರಕ್ಕೆ ಕೊಡುವ ಮೂಲಕ ಇವುಗಳ ಸಾರಾ ಸಗಟು ಸೆನ್ಸಾರಿನತ್ತ ದಾಪುಗಾಲಿಟ್ಟಿದೆ.

ಲಜ್ಜೆಗೆಟ್ಟ ರಾಜಕಾರಣವೂ ಮಾನಗೆಟ್ಟ ಮಾಧ್ಯಮವೂ......

ಪುಟ 6 ರಿಂದ

ವಿಚಾರಣೆಯಿಲ್ಲದೆಯೇ ಆರೋಪಿಗಳ ಎನ್ಕೌಂಟರ್ ನಡೆಸಿ ನ್ಯಾಯವನ್ನು ಕತ್ತಲಲ್ಲಿರಿಸಲಾಗುತ್ತದೆ. ಈಗ ಕರ್ನಾಟಕದಲ್ಲಿ ಓರ್ವ ನೊಂದ ಮಹಿಳೆಯ ಚಾರಿತ್ರ್ಯವಧೆಗೆ ಮುಖ್ಯವಾಹಿನಿಯ ಮಾಧ್ಯಮಗಳೇ ಮುಂದಾಗುತ್ತವೆ.

ದೌರ್ಜನ್ಯಕ್ಕೊಳಗಾದ ಮಹಿಳೆಯನ್ನು 'ಸಿ.ಡಿ ಲೇಡಿ' ಎಂದು ಕರೆಯುವಷ್ಟು ಮಟ್ಟಿಗೆ ಕನ್ನಡದ ಸುದ್ದಿಮನೆಗಳು ಭ್ರಷ್ಟವಾಗಿವೆ. ಕಳೆದ ಹಲವು ದಿನಗಳಲ್ಲಿ ಕನ್ನಡದ ಸುದ್ದಿಮನೆಗಳಿಗೆ ರಮೇಶ್ ಜಾರಕಿಹೊಳಿ ಪ್ರಕರಣ ಒಂದು ಅಶ್ಲೀಲ ಚಲನಚಿತ್ರದ ವಾಲ್ ಪೋಸ್ಟ್ ನಂತೆ ಬಳಕೆಗೆ ಬರುತ್ತಿರುವುದು ದುರಂತ. ಆರೋಪಿ ಶಾಸಕನನ್ನು ಮಹಾನಾಯಕ, ಸಾಹುಕಾರ ಎಂದು ಸಂಬೋಧಿಸುವ ಕನ್ನಡದ ಸುದ್ದಿಮನೆಗಳು, ಸಂತ್ರಸ್ತ ಮಹಿಳೆಯನ್ನು 'ಸಿ.ಡಿ. ಲೇಡಿ' ಎಂಬ ಕ್ಷುಲ್ಲಕ ಪದದ ಮೂಲಕ ಗುರುತಿಸುತ್ತಿರುವುದು ಲಿಂಗಸೂಕ್ಷ್ಮತೆಯ ಕೊರತೆಯನ್ನು ಎತ್ತಿ ತೋರಿಸುತ್ತದೆ. ಸುದ್ದಿಮನೆಯ ಸಂಪಾದಕರಿಗೆ ಮತ್ತು ನಿರೂಪಕರಿಗೆ ತಾವು ಸೂಟು ಬೂಟು ಧರಿಸಿ ಕುಳಿತಿರುವುದು ಸಾರ್ವಜನಿಕ ಶೌಚಾಲಯದಲ್ಲಿ ಅಲ್ಲ, ಒಂದು ಜವಾಬ್ದಾರಿಯುತವಾದ ಸಾರ್ವಜನಿಕ ಸಾಂಸ್ಥಿಕ ನೆಲೆಯಲ್ಲಿ ಎನ್ನುವ ಪರಿಜ್ಞಾನ ಇಲ್ಲದೆ ಹೋದರೆ ಪಬ್ಲಿಕ್, ಸುವರ್ಣ, ಟಿವಿ 9, ದಿಗ್ವಿಜಯದಂತಹ ವಾಹಿನಿಗಳು ಹುಟ್ಟಿಕೊಳ್ಳುತ್ತವೆ.

ಕೆಲವು ಸುದ್ದಿವಾಹಕರು ಸಂತ್ರಸ್ತ ಮಹಿಳೆಯನ್ನು ಏಕವಚನದಲ್ಲಿ ಸಂಬೋಧಿಸುವುದನ್ನೂ ನೋಡುತ್ತಿದ್ದೇವೆ. ಈ ಅಧಿಕಾರವನ್ನು ಸಂಪಾದಕರಿಗೆ, ನಿರೂಪಕರಿಗೆ ಕೊಟ್ಟವರಾರು? ಒಂದು ಸಭ್ಯ ಸಮಾಜದಲ್ಲಿ ಲಿಂಗ ಸೂಕ್ಷ್ಮತೆ ಎಷ್ಟು ಮುಖ್ಯ ಎನ್ನುವ ಪರಿಜ್ಞಾನ ಸಂಪಾದಕರಿಗೆ ಇರಬೇಕಲ್ಲವೇ? ಆಕೆಯ ಪೂರ್ವಾಪರಗಳನ್ನು ಶೋಧಿಸುವ ಅನಿವಾರ್ಯತೆ ಸುದ್ದಿಮನೆಗಳಿಗೆ ಇದೆಯೇ? ಅಥವಾ ಆರೋಪಿ ಶಾಸಕರೊಬ್ಬರನ್ನು ಸಾಹುಕಾರ–ಮಹಾನಾಯಕ ಎಂದು ಬಿಂಬಿಸುವ ತುರ್ತು ಇದೆಯೇ? ಅಧಿಕಾರ ರಾಜಕಾರಣ ಮತ್ತು ಕಾರ್ಪೋರೇಟ್ ಮಾರುಕಟ್ಟೆ ಹಿತಾಸಕ್ತಿಯ ಸಮೀಕರಣವನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದಲ್ಲವೇ? ಸಂತ್ರಸ್ತ ಮಹಿಳೆಯ ಆರೋಪಗಳನ್ನು ತನಿಖೆಗೊಳಪಡಿಸಿ ಸತ್ಯಾಸತ್ಯತೆಗಳನ್ನು ಬಯಲಿಗೆಳೆಯಲು ಕಾನೂನು ವ್ಯವಸ್ಥೆ ಎನ್ನುವುದೊಂದಿದೆ ಎನ್ನುವುದನ್ನೂ ಸುದ್ದಿಮನೆಗಳು ಅರಿತಿರಬೇಕಲ್ಲವೇ? ತಮ್ಮ ಊಹೆಗೆ ತಕ್ಕಂತೆ ತಾವೇ ಅಂತಿಮ ತೀರ್ಪು ನೀಡುವ ಮೂಲಕ ಕನ್ನಡದ ಸುದ್ದಿಮನೆಗಳು ಸೂಕ್ಷ್ಮ ಸಂವೇದನೆಯೇ ಇಲ್ಲದ ಕ್ಷುದ್ರ ಜೀವಿಗಳಂತೆ ಕಾಣುತ್ತಿವೆ.

ಇಂದು ಸುದ್ದಿಮನೆಗಳು ಬಿಂಬಿಸುತ್ತಿರುವ ಸಿ.ಡಿ ರಾಜಕಾರಣ ಕೇವಲ ಒಬ್ಬ ರಾಜಕೀಯ ನಾಯಕನ ಪ್ರಶ್ನೆಯಲ್ಲ. ಇದು ಒಂದು ಸಮಾಜೋ–ಸಾಂಸ್ಕೃತಿಕ ಪ್ರಶ್ನೆ. ಲಿಂಗಸೂಕ್ಷ್ಮತೆಯೇ ಇಲ್ಲದ ಒಂದು ರಾಜಕೀಯ ವ್ಯವಸ್ಥೆಯನ್ನು ನಾವು ರೂಪಿಸಿಕೊಂಡಿದ್ದೇವೆ. ಹಾಗಾಗಿಯೇ ಕರ್ನಾಟಕದ ವಿಧಾನಮಂಡಲ ಅಧಿವೇಶನದಲ್ಲಿ "ಏಕಪತ್ನಿ ವ್ರತಸ್ಥರ" ಪ್ರಶ್ನೆ ಮುಖ್ಯ ಚರ್ಚೆಯ ವಿಷಯವಾಗುತ್ತದೆ. ಕನ್ನಡದ ಸುದ್ದಿಮನೆಗಳಿಗೆ ಇದು ಮಾರುಕಟ್ಟೆ ಲಾಭ ಗಳಿಸುವ ಭೂರಿ ಭೋಜನವಾಗುತ್ತದೆ. ಭಾರತೀಯ ಸಮಾಜದ ಊಳಿಗಮಾನ್ಯ ವ್ಯವಸ್ಥೆಯ ಪಿತೃಪ್ರಧಾನ ಧೋರಣೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವ ನಮ್ಮ ರಾಜಕೀಯ ವ್ಯವಸ್ಥೆ ಕರ್ನಾಟಕದ ವಿಧಾನಮಂಡಲದಲ್ಲಿ ಬೆತ್ತಲಾಗಿದೆ. ಇಲ್ಲಿ ಎಲ್ಲರೂ ಅಪರಾಧಿಗಳಾಗಿಯೇ ಕಾಣುತ್ತಾರೆ. ಒಂದು ಜವಾಬ್ದಾರಿಯುತ ಸರ್ಕಾರಕ್ಕೆ ಸಾರ್ವಜನಿಕ ಸೂಕ್ಷ್ಮತೆ ಮತ್ತು ನಾಗರಿಕ ಪ್ರಜ್ಞೆಯೂ ಇರುವುದು ಅಗತ್ಯ ಎನ್ನುವುದನ್ನು ಎಲ್ಲ ಜನಪ್ರತಿನಿಧಿಗಳೂ ಅರ್ಥಮಾಡಿಕೊಳ್ಳಬೇಕಿದೆ.

ರಮೇಶ್ ಜಾರಕಿಹೊಳಿಯವರನ್ನು ಅಪರಾಧಿ ಎಂದು ನಿರ್ಧರಿಸುವ ಹಕ್ಕು ನ್ಯಾಯಾಂಗಕ್ಕೆ ಮಾತ್ರವೇ ಇದೆ. ಆದರೆ ಆರೋಪಿಯಾಗಿರುವ ಅವರನ್ನು ನಿರಪರಾಧಿ ಎಂದು ಘೋಷಿಸುವ ಹಕ್ಕು ಸರ್ಕಾರಕ್ಕೂ ಇರುವುದಿಲ್ಲ. ಇದು ನ್ಯಾಯ ವ್ಯವಸ್ಥೆಯ ಸೂಕ್ಷ್ಮ ಅಂಶವಲ್ಲವೇ? ಒಂದು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಭ್ಯ ರಾಜಕಾರಣ, ಸ್ವಚ್ಛ ವ್ಯಕ್ತಿತ್ವ ಮತ್ತು ಪ್ರಾಮಾಣಿಕ ನಾಗರಿಕತೆ ಎಷ್ಟು ಮುಖ್ಯ ಎನ್ನುವುದನ್ನು ಇನ್ನಾದರೂ ನಾವು ಅರ್ಥಮಾಡಿಕೊಳ್ಳಬೇಕಿದೆ. ಅಪರಾಧದ ಸಮರ್ಥನೆಗೆ ಜಾತಿ, ಧರ್ಮ, ಲಿಂಗತ್ವ, ಪಕ್ಷ ಹೀಗೆ ಯಾವ ಅಸ್ಮಿತೆಗಳೂ ಭೂಮಿಕೆಯಾಗುವುದು ಸಮರ್ಥನೀಯವಲ್ಲ. ಈ ಸೂಕ್ಷ್ಮಗಳನ್ನು ಸಮಾಜಕ್ಕೆ ತಿಳಿಸಿಕೊಡುವ ಜವಾಬ್ದಾರಿ ಮಾಧ್ಯಮಗಳ ಮೇಲಿದೆ. ಸುದ್ದಿಮನೆಗಳ ಮೇಲಿರುತ್ತದೆ.

ದುರಂತ ಎಂದರೆ ಕನ್ನಡ ಸುದ್ದಿಮನೆಗಳು ಅಕ್ಷರಶಃ ಗಟಾರಗಳಾಗಿವೆ. ಇಡೀ ಕುಟುಂಬ ಸದಸ್ಯರು ಒಟ್ಟಿಗೆ ಕುಳಿತು ನೋಡಲು ಸಾಧ್ಯವಾಗದಷ್ಟು ಅಸಭ್ಯತೆಯನ್ನು ಟಿವಿ ಪರದೆಯ ಮೇಲೆ ಕಾಣುತ್ತಿದ್ದೇವೆ. ಅಧಿಕಾರ ರಾಜಕಾರಣ ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲ ಸಾಂಸ್ಥಿಕ ನೆಲೆಗಳನ್ನೂ ಭ್ರಷ್ಟಗೊಳಿಸಿ, ನುಂಗಿಹಾಕುತ್ತಿರುವ ಸಂದರ್ಭದಲ್ಲಿ, ಮಾಧ್ಯಮಗಳು ತಮ್ಮನ್ನು ತಾವೇ ಕಾರ್ಪೋರೇಟ್ ಹಿತಾಸಕ್ತಿಗಳಿಗೆ ಮಾರಿಕೊಳ್ಳುವುದು ನಾಚಿಕೆಗೇಡಿನ ವಿಚಾರ. ವಿದ್ಯುನ್ಮಾನ ಮಾಧ್ಯಮ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಸಾಮರ್ಥ್ಯ ಮತ್ತು ವ್ಯಾಪ್ತಿಯನ್ನು ಹೊಂದಿರುವ ಇಂದಿನ ಪರಿಸ್ಥಿತಿಯಲ್ಲಿ ಕನ್ನಡದ ಸುದ್ದಿಮನೆಗಳು ಕನಿಷ್ಟ ಸೌಜನ್ಯ, ಸಭ್ಯತೆ ಮತ್ತು ಸೂಕ್ಷ್ಮತೆಯನ್ನು ಹೊಂದಿರಬೇಕಲ್ಲವೇ?

ವಿದ್ಯುನ್ಮಾನ ಮಾಧ್ಯಮಗಳಲ್ಲಿ ಈ ಸೂಕ್ಷ್ಮತೆ ಇಲ್ಲದಿರುವುದರಿಂದಲೇ ಲಜ್ಜೆಗೆಟ್ಟ ರಾಜಕಾರಣ ವಿಜೃಂಭಿಸುತ್ತಿದೆ.

JANASHAKTHI KANNADA VARA PATRIKE April 5-11, 2021 Price: Rs. 10/- Date of Publication: 2 April 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಕೃಷಿ ಕೂಲಿಕಾರರು ಅಪೌಷ್ಠಿಕತೆಯಿಂದ ಬಳಲುವುದನ್ನು ಸರ್ಕಾರಗಳು ತಪ್ಪಿಸಲಿ – ಜಿ.ಎನ್. ನಾಗರಾಜು



ಕೃಷಿ ಕೂಲಿಕಾರರು ಅಪೌಷ್ಠಿಕತೆಯಿಂದ ಬಳಲುವಿಕೆ ತೊಲಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಜನೆ ರೂಪಿಸಬೇಕು ಎಂದು ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಜಿ.ಎನ್. ನಾಗರಾಜು ಆಗ್ರಹಿಸಿದ್ದಾರೆ.

ನಗರದ ಗಾಂಧಿಭವನದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಮಹಿಳಾ ಕೃಷಿಕೂಲಿಕಾರರ ಉಪ ಸಮಿತಿ ಜಿಲ್ಲಾ ಶಾಖೆ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಮತ್ತು ಜಿಲ್ಲಾ ಮಟ್ಟದ ಮಹಿಳಾ ಕೃಷಿ ಕೂಲಿಕಾರರ ಸಮಾವೇಶದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಭಾರತ ಕೃಷಿಪ್ರಧಾನ ರಾಷ್ಟ್ರವಾಗಿದ್ದರೂ ಬಹುಪಾಲು ಕೂಲಿಕಾರ್ಮಿಕರು ಅಪೌಷ್ಠಿಕಾಹಾರದಿಂದ ಬಳಲಿ ಸಾವನ್ನಪ್ಪುತ್ತಿದ್ದರೂ ಸರ್ಕಾರಗಳು, ಮಾಧ್ಯಮಗಳು ಬೇಜವ್ದಾರಿ ತೋರುತ್ತಿವೆ, ಬಂಡವಾಳಶಾಹಿಗಳ ಪರ ಕಾರ್ಯ ಸಲ್ಲಿಸುತ್ತಿವೆ ಎಂದು ಆಕ್ರೋಶವ್ಯಕ್ತಪಡಿಸಿದರು.

ಪ್ರಸ್ತುತ ದಿನಗಳಲ್ಲಿ ಮಹಿಳೆಯನ್ನು ಭೋಗವಸ್ತು, 2ನೇ ದರ್ಜೆಯ ಪ್ರಜೆ ಎಂದು ಪರಿಗಣಿಸಿದ್ದ ನೀತಿಯ ಸರ್ಕಾರ ಇಡೀ ರಾಷ್ಟ್ರದಲ್ಲಿ ಆಳ್ವಿಕೆ ನಡೆಸುತ್ತಿದ್ದು ಮಹಿಳೆಯರ ಮೇಲಿನ ಹಲ್ಲೆ, ಆಕ್ರಮಣ, ಬಲತ್ಕಾರ, ಅತ್ಯಾಚಾರ, ಕೊಲೆಗಳು ಹೆಚ್ಚಳವಾಗುತ್ತಿವೆ. ಇವುಗಳನ್ನು ತಡೆಗಟ್ಟುವಲ್ಲಿ ಸರ್ಕಾರಗಳು ಮತ್ತು ಬಂಡವಾಳಶಾಹಿಗಳು ವಿಫಲವಾಗುತ್ತಿದ್ದಾರೆ ಎಂದು ವಿಷಾಧಿಸಿದರು.

ಇತ್ತೀಚಿನ ದಿನದಗಳಲ್ಲಿ ವಿವಾಹವಾದ ಕೆಲವೇ ದಿನಗಳು, ತಿಂಗಳು, ವರ್ಷಗಳಲ್ಲಿ ಕೌಟುಂಬಿಕ ಬಿಕ್ಕಟ್ಟು ಉಲ್ಬಣಗೊಂಡು ವಿಚ್ಛೇಧನ ಪ್ರಕರಣಗಳು ಹೆಚ್ಚುತ್ತಿವೆ ಮತ್ತು ಸಾಂಸಾರಿಕ ಬಿಕ್ಕಟ್ಟುಗಳು ತೀವ್ರವಾಗುತ್ತಿವೆ ಇದರ ಬಗ್ಗೆ ಆಳ ವಿಮರ್ಶೆ ಮತ್ತು ಅಧ್ಯಯನ ಅವಶ್ಯವಾಗಿದೆ. ಬಾಲಕೀಯರು ಮತ್ತು ಹೆಣ್ಣು ಮಕ್ಕಳಿನ ಮೇಲೆ ಕ್ರೌರ್ಯಗಳು ಹೆಚ್ಚುತ್ತಿದ್ದು ಸುಧಾರಣೆಗೆ ಕೆಲಸ ಮಾಡಬೇಕಿದೆ ಎಂದು ಆಗ್ರಹಿಸಿದರು.

ಪುರುಷರಿಗಿಂತ ಕೆಲಸ ನಿರ್ವಹಿಸವಲ್ಲಿ, ಮನೆ ನಿರ್ವಹಣೆಯಲ್ಲಿ, ಮಹಿಳೆಯದು ಪ್ರಮುಖ ಪಾತ್ರವಿದೆ, ಆರ್ಥಿಕ ಕ್ಷೇತ್ರ ಸಬಲೀಕರಣಗೊಳ್ಳಲು ಇವರ ದುಡಿಮೆ ಮುಖ್ಯವಾಗಿದೆ, ಕೂಲಿಕಾರರ ಬೇಡಿಕೆಗಳನ್ನು ಸರ್ಕಾರ ಕಡೆಗಣಿಸುತ್ತಿರುವುದು ದುರಂತ ಎಂದು ತಿಳಿಸಿದರು.

ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಎಂ. ಪುಟ್ಟಮಾದು ಅವರು, ಸಮಾನ ಕೆಲಸಕ್ಕೆ ಸಮನ ಕೂಲಿ ನೀಡುವುದು, ಮಹಿಳಾ ಕೂಲಿಕಾರರಿಗೆ ಪುರಷರಿಗೆ ಕೊಡುವಷ್ಟೇ ಕೂಲಿಯನ್ನು ನೀಡಬೇಕು. ಮಹಿಳೆಯರಿಗೆ ಪುರಷರಷ್ಟೇ ಕೂಲಿ ನೀಡಲು ನಿರಾಕರಿಸುವವರ ವಿರುದ್ಧ ದೂರು ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ದುಡಿಯುವವರಿಗೆ ವಾರಕ್ಕೊಮ್ಮೆ ಕೂಲಿ ಹಣ ಪಾವತಿ ಮಾಡಬೇಕು. ವರ್ಷದಲ್ಲಿ ಒಂದು ಕುಟುಂಬದ ಒಬ್ಬ ಸದಸ್ಯನಿಗೆ ವರ್ಷದಲ್ಲಿ 100 ದಿನಗಳ ಕೆಲಸ ಕೊಡುವುದನ್ನು ಬದಲಾಯಿಸಿ ಕೆಲಸ ಬಯಸುವ ಎಲ್ಲರಿಗೂ ವರ್ಷಕ್ಕೆ ಕನಿಷ್ಠ 200 ದಿನಗಳ ಕೆಲಸ ಕೊಡಬೇಕು. ದಿನಗೂಲಿಯನ್ನು ರೂ. 600 ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ರಾಜ್ಯದ ಮಹಿಳಾ ಕೃಷಿ ಕೂಲಿಕಾರರ ಸಮೀಕ್ಷೆ ನಡೆಸಿ ಅವರೆಲ್ಲರಿಗೆ ಗುರುತಿನ ಚೀಟಿಗಳನ್ನು ವಿತರಿಸಬೇಕು ಎಂದು ಒತ್ತಾಯಿಸಿದರು.



ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಸರ್ಕಾರಕ್ಕೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಮನವಿ ಪತ್ರ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಕೃಷಿಕೂಲಿಕಾರರ ಉಪ ಸಮಿತಿ ಜಿಲ್ಲಾ ಶಾಖೆ ಸಹ ಸಂಚಾಲಕಿಯರಾದ ಶುಭಾವತಿ, ಅನಿತಾ, ಶಾಂತಮ್ಮ, ಜಯಮ್ಮ, ಪೂರ್ಣಿಮಾ, ಸವಿತಾ, ರಾಜೇಶ್ವರಿ, ಜಿಲ್ಲಾ ಪ್ರಧಾನಕಾರ್ಯದರ್ಶಿ ಬಿ.ಹನುಮೇಶ್, ರಾಜ್ಯ ಸಹಕಾರ್ಯದರ್ಶಿ ಹನುಮೇಗೌಡ, ಜಿಲ್ಲಾ ಉಪಾಧ್ಯಕ್ಷರಾದ ಶಿವಮಲ್ಲಯ್ಯ, ಬಸವರಾಜು, ಬಸವಣ್ಣ, ಸುರೇಂದ್ರ, ರಾಜು, ಸಿಐಟಿಯು ಕಾರ್ಯದರ್ಶಿ ಸಿ.ಕುಮಾರಿ ಮತ್ತಿತರರಿದ್ದರು.

ಡಿವೈಎಫ್‌ಐ ಅಧ್ಯಯನ ಶಿಬಿರ

ಸಂವಿಧಾನದ ಮೇಲಿನ ಪ್ರಭುತ್ವದ ದಾಳಿಯನ್ನು ವಿರೋಧಿಸಬೇಕಿದೆ: ಪ್ರೊ. ರಾಜೇಂದ್ರ ಚೆನ್ನಿ

ಸಂವಿಧಾನದ ಮೇಲಾಗುತ್ತಿರುವ ಪ್ರಭುತ್ವದ ಆಕ್ರಮಣವನ್ನು ಪ್ರಭಲವಾಗಿ ನಾವು ವಿರೋಧಿಸಬೇಕಿದೆ. ಇದರ ಒಂದು ಜವಾಬ್ದಾರಿ ಯುವಜನರು ಹೊರಬೇಕಿದೆ. ಅದಕ್ಕಾಗಿ ಯುವಜನರು ತಮ್ಮ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬೇಕಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಪಕರು ರಾಜೇಂದ್ರ ಚೆನ್ನಿ ಹೇಳಿದರು.

ಇಂದು ಮಂಗಳೂರಿನಲ್ಲಿ ಉದ್ಯೋಗ ಸೃಷ್ಟಿಸಿ, ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿ, ಉದ್ಯೋಗದ ಹಕ್ಕಿಗಾಗಿ ನಡೆಯುತ್ತಿರುವ ಡಿವೈಎಫ್‌ಐನ ರಾಜ್ಯ ಅಧ್ಯಯನ ಶಿಬಿರದ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು.

ಯಾರನ್ನೂ ಹೇಳದೇ ಕೇಳದೇ ನಮ್ಮ ಮೇಲೆ ಲಾಕ್‌ಡೌನ್‌ನ್ನು ಹೇರಲಾಯಿತು. ಲಕ್ಷಗಟ್ಟಲೆ ಜನ ತಮ್ಮ ಹೊಲ, ಮನೆ ಬಿಟ್ಟು , ಸಂಬಂಧ ಬದುಕು ಬಿಟ್ಟು ನಗರಗಳಿಗೆ ಬರುತ್ತಾರೆ. ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ಕಟ್ಟುತತಿರುವ ಕಾರ್ಮಿಕರು ಹಂದಿಗಳೂ ವಾಸಿಸುವ ಸ್ಥಳಗಳಲ್ಲಿ ವಾಸುತ್ತಿದ್ದಾರೆ. ಅವುಗಳನ್ನ ನಾವು ಯಾಕೆ ಇಲ್ಲಿವರೆಗೆ ಯಾಕೆ ಪ್ರಶ್ನೆ ಮಾಡಿಲ್ಲ. ಪ್ರತೀ ವರ್ಷ ನಮ್ಮ ದೇಶದಲ್ಲಿ ಮನುಷ್ಯ ತನ್ನ ಶ್ರಮದಿಂದ ಮನುಷ್ಯ ನಾಗರೀಕತೆಯನ್ನು ಕಟ್ಟಿದ್ದಾನೆ. ಮಾಯಾಮಂತ್ರದಿಂದ ಕಟ್ಟಿಲ್ಲ ಶಾಸ್ತ್ರಗಳಿಂದ ಕಟ್ಟಿಲ್ಲ. ಅಂತಹ ಶ್ರಮವನ್ನು ದೇಶಕ್ಕಾಗಿ ಕೊಡೋವರನ್ನು ಕಟ್ಟಡ ಕಾರ್ಮಿಕರನ್ನ ನಿರಾಶ್ರಿತರಾದರು. ಉದ್ಯೋಗ ಕೊಡಿ ಎಂದು ಕೇಳುವ ಪರಿಸ್ಥಿತಿ ಬಂದಿರುವುದು ವಿಷಾಧನೀಯ. ಸ್ವತಂತ್ರ ದೇಶ, ಪ್ರಜಾಪ್ರಭುತ್ವ ರಾಷ್ಟ್ರ, ಎಂದೇಳಿ ಕರಿಯುತ್ತಿದ್ದೇವೆ ಯಾಕೆ ಎಂದು ಪ್ರಶ್ನಿಸಿದರು.

ನಮ್ಮ ದೇಶದಲ್ಲಿ ಮಾತ್ರ ಯುವಜನರು ಭಾರೀ ಪ್ರಮಾಣದಲ್ಲಿದ್ದೇವೆಂದು ಹೆಮ್ಮೆಯಿಂದ ಹೇಳಿಕೊಳ್ತೇವೆ. ಆದರೆ ಅವರಿಗೆ ಯಾಕೆ ಉದ್ಯೋಗ ಒದಗಿಸುತ್ತಿಲ್ಲ. ಇಂತಹ ಬೇಜವಾಬ್ದಾರಿ ವ್ಯವಸ್ಥೆ ಯಾಕೆ ನಿರ್ಮಾಣವಾಗಿದೆ ಎಂಬುದನ್ನು ಗಂಭೀರವಾಗಿ ಯೋಚಿಸಬೇಕು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ತೆಗೆದು ನಾವು ಅದಕ್ಕೆ ಪ್ರಜಾಪ್ರಭುತ್ವ ಎಂದೇಳುತ್ತಿದ್ದೇವೆ. ಕೃಷಿ ಕಾಯ್ದೆಗಳು ಜಾರಿಯಾದ್ರೆ ಬಹುರಾಷ್ಟ್ರೀಯ ಕಂಪನಿಗಳು ರೈತನ ಬೀಜ ಗೊಬ್ಬರದ ಆಯ್ಕೆಗಳನ್ನು ಕಸಿದುಕೊಳ್ಳುತ್ತವೆ. ಬಂಡವಾಳಶಾಹಿ ಎಲ್ಲಾ ಕ್ಷೇತ್ರಗಳಲ್ಲಿ ಇರುವ ಜನತೆಯ ಬದುಕನ್ನು ಕಸಿಯುತ್ತಿವೆ ಎಂದರು.

ನಮಗೆ ಒಂದು ಒತ್ತು ಊಟ ಇಲ್ಲಂದ್ರೂ ನಮಗೆ ಶಿಕ್ಷಣ ಕೊಟ್ರೆ ಒಂದು ಉದ್ಯೋಗವಾದ್ರೂ ಸಿಗುತ್ತೆ. ಬಡರೈತರ ಮಕ್ಕಳು ಸೈನ್ಯಕ್ಕೆ ಬರ್ತಾರೆ. ಆದರೆ ಮೊನ್ನೆ ಉದ್ಯೋಗ ಅರಸಿ ಸಂದರ್ಶನಕ್ಕೆ ಬಂದವರಿಗೆ ಸರಿಯಾದ ವ್ಯವಸ್ಥೆ ಕಲ್ಪಿಸಿ ಸಂದರ್ಶನ ಮಾಡೋ ಬದಲು ಕಾರವಾರದ ಬೀಚ್ ಬದಿಯಲ್ಲಿ ಮಲಗಿದ್ದಾರೆ. ಸೈನ್ಯ ಸೇರಿ ದೇಶಕ್ಕಾಗಿ ಪ್ರಾಣ ಕೋಡೋ ಸೈನಿಕರಿಗೆ ಕೊಡೋ ಗೌರವಾ ಇದೇನಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ 15,000 ಶಿಕ್ಷಕರು ಈ ಕ್ಷಣಕ್ಕೆ ಬೇಕಿದೆ. ಆದರೆ ಸರ್ಕಾರ ಆ ಖಾಯಂ ನೇಮಕಾತಿ ತೆಗೆದು ಹಾಕಿ ಶಿಕ್ಷಕರನ್ನು ಕಾಂಟ್ರ್ಯಾಕ್ಟ್ ಆಗಿ ತೆಗೆದುಕೊಳ್ಳುತ್ತಿದೆ. ಬಂಡವಾಳಶಾಹಿ ಅರ್ಥಶಾಸ್ತ್ರ, ಕಾಯಂ ನೇಮಕಾತಿಯನ್ನು ಸಂಪೂರ್ಣವಾಗಿ ತೆಗೆಯುವುದಾಗಿದೆ. ಪ್ರಧಾನಿ ಮೋದಿಜೀ ಅವರು ಬಡವರ ಮಕ್ಕಳು ಐಎಎಸ್‌ಗೆ ಬರೋದನ್ನು ತಡೆಯೋಕೆ ನೇರನೇಮಕಾತಿ ಮಾಡಿದ್ದಾರೆ. ಖಾಸಗೀಕರಣವನ್ನು ನಾವು ದಿನನಿತ್ಯ ನೋಡ್ತಾ ಇದ್ದೇವೆ. ಆದರೆ ಅದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ತಿಲ್ಲ. ಉದ್ಯೋಗ ಇಲ್ಲದಿರುವುದು ಒಂದು ರೋಗವಾಗಿದೆ. ಆ ರೋಗಕ್ಕೆ ಕಾರಣ ಏನು ಅನ್ನೋದು ಈ ಡಿವೈಎಫ್‌ಐನ ರಾಜ್ಯ ಅಧ್ಯಯನ ಶಿಬಿರದಲ್ಲಿ ನಾವು ಗುರುತಿಸಬೇಕಿದೆ ಎಂದು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ಯಾವ ಸರ್ಕಾರ ಸಂವಿಧಾನ ಮತ್ತು ಅದರ ಮೌಲ್ಯಗಳನ್ನು ವಿರೋಧಿಸುತ್ತವೋ ಅಂತ ಸರ್ಕಾರಗಳಿಗೆ ದೇಶವನ್ನು ಆಳೋಕೆ ಯಾವ ಯೋಗ್ಯತೆನೂ ಇರೊಲ್ಲ. ಅಂಬೇಡ್ಕರ್ ಅವರ ಬಹುದೊಡ್ಡ ಕಲ್ಪನೆಯಾಗಿದ್ದ ಮೀಸಲಾತಿಯನ್ನು ತೆಗೆಯುವುದೇ ಆಳುತ್ತಿರುವ ಸರ್ಕಾರಗಳ ಉದ್ದೇಶವಾಗಿದೆ. ಶಿಕ್ಷಣವನ್ನೂ ಸಂಪೂರ್ಣವಾಗಿ ಖಾಸಗೀಕರಣ ಮಾಡುತ್ತಿದೆ. ನಾವು ಈ ಶಿಬಿರದಲ್ಲಿ ಈ ಬಗ್ಗೆ ವಸ್ತುನಿಷ್ಠವಾಗಿ ಅಧ್ಯಯನ ಮಾಡಬೇಕು ಎಂದು ಹೇಳಿದರು.

ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್‌ಕಾಟಿಪಳ್ಳ, ಕಾರ್ಯದರ್ಶಿ ಬಸವರಾಜ್ ಪೂಜಾರ್, ಅಖಿಲ ಭಾರತ ವಕೀಲರ ಸಂಘದ ದ.ಕ. ಜಿಲ್ಲಾಧ್ಯಕ್ಷ ಯಶವಂತ ಮರೋಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಡಿವೈಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಪೃತ್ವಿ ಎಂ.ಜಿ., ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಮುಖಂಡರಾದ ಆಶಾ ಬೋಳಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**